30 June 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಹೇಳುವವರ ಪದವು ಮಿತಿಯಲ್ಲಿದ್ದರೆ, ಕೇಳುವವರ ಮನಸ್ಸು ಸ್ಪಂದಿಸುತ್ತದೆ!

-ಸ್ನೇಹಾ ಆನಂದ್

info.varthaman@gmail.com



ಪಕ್ಷಾತೀತ ಸಾಹಿತಿಗಳು ಕ್ಷೀಣ: ಪ್ರೊ. ಜಯಪ್ರಕಾಶಗೌಡ — ಪುಟ ಸಂ. 2



ನಾಳೆಯಿಂದ ದೇವಾಲಯ ಲೋಕಾರ್ಪಣೆ ಕಾರ್ಯಕ್ರಮ — ಪುಟ ಸಂ. 3



ಮಳೆಗಾಗಿ ಕಪ್ಪೆಗೆ ಪೂಜೆ ಮಾಡಿದ ಮಕ್ಕಳು — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 211 Pages: 06 KA/SK/MYS/1098/2023-2025 R.N.I. No.3577/1957 www.varthaman.in

# ವಿಜಯೇಂದ್ರ ‘ಕಿಕ್ ಔಟ್’ ಮಾಡಿ?

## ಡಿ.ವಿ.ಸದಾನಂದಗೌಡ ಅವರದ್ದು ಎನ್ನಲಾದ ಆಡಿಯೋ ಬಹಿರಂಗ

**ಬೆಂಗಳೂರು:** ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿ.ವೈ.ವಿಜಯೇಂದ್ರ ಅವರನ್ನು ಕೆಳಗಿಳಿಸುವ ಬಗ್ಗೆ ದೆಹಲಿ ನಾಯಕರಿಗೆ ಒತ್ತಾಯ ಮಾಡಿರುವ ಬಗ್ಗೆ ಬಹಿರಂಗಗೊಂಡಿರುವ ಆಡಿಯೋ ಬಿಜೆಪಿ ಪಾಳಯದಲ್ಲಿ ತಲ್ಲಣ ಸೃಷ್ಟಿಸಿದೆ.

ಬಿಜೆಪಿ ನಾಯಕರಾದ ಮಾಜಿ ಸಿಎಂ ಡಿ.ವಿ. ಸದಾನಂದಗೌಡ ಅವರು ವ್ಯಕ್ತಿಯೊಬ್ಬರ ಜೊತೆ ಮಾತನಾಡಿರುವ ಆಡಿಯೋ ಇದು ಎನ್ನಲಾಗಿದೆ. ಆಡಿಯೋದಲ್ಲಿ ಅಕ್ಟೋಬರ್ ತಿಂಗಳವರೆಗೂ ವಿಜಯೇಂದ್ರ ಅವರನ್ನ ಮುಂದುವರಿಯಲು ಬಿಡಿ. ಬಳಿಕ ರಾಜ್ಯಾಧ್ಯಕ್ಷ ಸ್ಥಾನದಿಂದ ತೆಗೆದುಹಾಕಬೇಕೆಂದು ಸಂಭಾಷಣೆ ಮಾಡಿದ್ದಾರೆ.

ಸದಾನಂದಗೌಡ ಅವರ ಧ್ವನಿಯನ್ನೇ ಹೋಲುವ ಈ ಆಡಿಯೋ ಇದೀಗ ಬಹಿರಂಗಗೊಂಡಿದೆ. ವ್ಯಕ್ತಿಯೊಬ್ಬರ ಜೊತೆಗೆ ಇಂಗ್ಲಿಷ್ ಭಾಷೆಯಲ್ಲಿ ನಡೆಸಿದ ಸಂಭಾಷಣೆ ನಡೆಸಲಾಗಿದೆ.

ನಾನು ಹೇಳೋದು ತಪ್ಪೋ ಸರಿನೋ ಗೊತ್ತಿಲ್ಲ, ನೀವೇ ಹೇಳಬೇಕು. ವಿಜಯೇಂದ್ರ ಅವರ ಅವಧಿ ನವೆಂಬರ್‌ಗೆ ಮುಗಿಯಲಿದೆ. ಈಗಲೇ ಅವರನ್ನು ತೆಗೆದು ಯಾಕೆ ಮತ್ತೊಂದು ಗೊಂದಲ ಸೃಷ್ಟಿ ಮಾಡೋದು? ಅವರ ಅವಧಿನವೆಂಬರ್‌ಗೆ ಮುಗಿಯುತ್ತೆ, ಆಗಲೇ ಹುದ್ದೆಯಿಂದ ತೆಗೆದರೆ ಅವರನ್ನು ಪದವಿಯಿಂದ ತೆಗೆದರು ಅನ್ನೋ ಆರೋಪ ಬರೋದಿಲ್ಲ. ಪಕ್ಷದ ಒಳಗೂ ಯಾವುದೇ ಗೊಂದಲ ಇರಲ್ಲ. ಅವರನ್ನು ವ್ಯವಸ್ಥಿತವಾಗಿ ಹುದ್ದೆಯಿಂದ ತೆಗೆಯಬೇಕು. ಇನ್ನುಳಿದಿರೋದು 4 ತಿಂಗಳು. ಅಕ್ಟೋಬರ್ ಹೊತ್ತಿಗೆ ವಿಜಯೇಂದ್ರ ಅವರನ್ನು ಕಿಕ್ ಔಟ್ ಮಾಡಿ ಎಂದು ಸಲಹೆ ನೀಡಲಾಗಿದೆ.





ಈಗ ಏನಾದರೂ ಅವರನ್ನು ತೆಗೆದರೆ ಗೊಂದಲ ಆಗುತ್ತದೆ. ಅವರ ತಂಡ ಎಚ್ಚೆತ್ತುಕೊಳ್ಳುತ್ತದೆ. ಅಲ್ಲದೆ, ಬಿಜೆಪಿ ಲಿಂಗಾಯತರ ವಿರೋಧಿ ಎಂದು ಪ್ರತಿಬಿಂಬಿಸಲಾಗುತ್ತದೆ. ಹೀಗಾಗಿ ಅವರ ಅವಧಿ ಮುಗಿದ ಮೇಲೆ ತೆಗೆದರೆ ಸಮಸ್ಯೆ ಆಗಲ್ಲ ಅನ್ನೋದು ನನ್ನ ಅಭಿಪ್ರಾಯ. ಇದಕ್ಕಿಂತ ಬೇರೆ ಅವಕಾಶ ಇದ್ದರೆ ನೋಡಿ, ಹೈಕಮಾಂಡ್ ನಿರ್ಧಾರಕ್ಕೆ ಒಪ್ಪುತ್ತೇವೆ. ವಿಜಯೇಂದ್ರ ತೆಗೆದ ಬಳಿಕ ಯಾರಾದರೂ ಸೂಕ್ತ ವ್ಯಕ್ತಿಯನ್ನು ರಾಜ್ಯಾಧ್ಯಕ್ಷರಾಗಿ ಮಾಡಿ ಎಂದು ಆಡಿಯೋ ಸಂಭಾಷಣೆಯಲ್ಲಿದೆ.

ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ ವಿಜಯೇಂದ್ರ ಅವರು ಇನ್ನೂ 3 ತಿಂಗಳಲ್ಲಿ 3 ವರ್ಷ ಪೂರೈಸಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷರ ಅವಧಿ 3 ವರ್ಷ ಇರುವುದು ಹಿಂದಿನಿಂದಲೂ ನಡೆದುಕೊಂಡು ಬಂದ ನಿಯಮವಾಗಿದೆ. ಈ ಹೊತ್ತಿನಲ್ಲೇ ಈ ಸ್ಫೋಟಕ ಆಡಿಯೋ ಹೊರಬಂದಿದೆ.

### ನನ್ನದಲ್ಲದ ಆಡಿಯೋಗೆ ಉತ್ತರಿಸಲ್ಲ: ಡಿವಿಎಸ್

**ಬೆಂಗಳೂರು:** ಮಾಧ್ಯಮಗಳಿಗೆ ವೈರಲ್ ಆಡಿಯೋ ಕುರಿತು ಪ್ರತಿಕ್ರಿಯಿಸಿದ ಸದಾನಂದ ಗೌಡ ಅವರು, ಇದರ ಬಗ್ಗೆ ನೋಕಾಮೆಂಟ್ಸ್. ನನ್ನದಲ್ಲದ ಆಡಿಯೋ, ನನ್ನದಲ್ಲದ ವಿಡಿಯೋ ಬಗ್ಗೆ ನಾನು ಮಾತಾಡಲ್ಲ. ನನಗೆ ಈ ಆಡಿಯೋ ಬಗ್ಗೆ ಗೊತ್ತಿಲ್ಲ ಎಂದು ಹಾರಿಕೆಯ ಉತ್ತರ ನೀಡಿದರು.

ಆಡಿಯೋ ಬಗ್ಗೆ ಸತ್ಯ ಸಂಗತಿ ನೀವೇ ಕಂಡುಹಿಡಿಯಿರಿ. ನನ್ನ ಬಗ್ಗೆ ಬಹಳ ದಿನದಿಂದ ಚರ್ಚೆ ಆಗುತ್ತಿತ್ತು. ಕೋರ್ ಕಮಿಟಿ ಸಭೆಯಲ್ಲಿ ಕೆಲವು ಮಾತು ಹೇಳಿದ್ದೇನೆ. ಕೇಂದ್ರ ನಾಯಕರು, ರಾಜ್ಯ ನಾಯಕರು ಕೇಳಿದರೆ ಉತ್ತರ ಕೊಡುತ್ತೇನೆ ಎಂದು ಹೇಳಿದರು.

### ವಿಜಯೇಂದ್ರ ವಿರುದ್ಧ ಷಡ್ಯಂತ್ರಕ್ಕೆ ಅಡ್ಡಮತ: ರೇಣುಕಾಚಾರ್ಯ ಕಿಡಿ

**ದಾವಣಗೆರೆ:** ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ನಡೆಯುತ್ತಿರುವ ಷಡ್ಯಂತ್ರವನ್ನು ಸಹಿಸಲು ಸಾಧ್ಯವಿಲ್ಲ. ಹೀಗೆ ಮುಂದುವರಿದರೆ ಪಕ್ಷದ ಆಂತರಿಕ ವಿಚಾರಗಳ ಕುರಿತು ಬಹಿರಂಗವಾಗಿ ಧ್ವನಿ ಎತ್ತಬೇಕಾಗುತ್ತದೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ವಾಗ್ದಾಳಿ ನಡೆಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಲು ಕೆಲವರು ಷಡ್ಯಂತ್ರ ನಡೆಸುತ್ತಿದ್ದಾರೆ. ಬಹಿರಂಗವಾಗಿ ಟೀಕಿಸಿ ಪಕ್ಷವನ್ನು ಮುಜುಗರಕ್ಕೀಡು ಮಾಡುತ್ತಿದ್ದಾರೆ. ಇಂತಹವರಿಗೆ ಪರ್ಯಾಯ ಸಭೆಗಳ ಮೂಲಕ ತಿರುಗೇಟು ನೀಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ವಿಜಯೇಂದ್ರ ವಿರುದ್ಧ ಹುನ್ನಾರ ಮಾಡುತ್ತಿದ್ದವರು ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡಮತ ಚಲಾಯಿಸಿದ್ದಾರೆ. ಇವರ ಬಗ್ಗೆ ಪಕ್ಷದ ರಾಷ್ಟ್ರೀಯ ನಾಯಕರಿಗೂ ಗೊತ್ತಿದೆ. ಪಕ್ಷಕ್ಕೆ ದ್ರೋಹ ಬಗೆದವರ ವಿರುದ್ಧ ಕಠಿಣ ಕ್ರಮ ಜರುಗಿಸುವ ನಿರೀಕ್ಷೆ ಇದೆ. ತಪ್ಪು ಮಾಡಿದವರನ್ನು ಬಿಟ್ಟು ವಿಜಯೇಂದ್ರ

ಪುಟ 2ಕ್ಕೆ

# ವಿದ್ಯುತ್ ಇಲಾಖೆ ಖಾಸಗೀಕರಣ

## ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ: ಸಿಎಂ ಡಿಕೆಶಿ

**ಬೆಂಗಳೂರು:** ರಾಜ್ಯದಲ್ಲಿ ವಿದ್ಯುತ್ ಇಲಾಖೆ ಖಾಸಗೀಕರಣದ ಸುಳಿವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡಿದ್ದಾರೆ.

ವಿದ್ಯುತ್ ಪೂರೈಕೆ ಹೊಣೆಯನ್ನು ಟಾಟಾ ಕಂಪನಿಗೆ ವಹಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಮುಂದಿನ ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ನಗರದಲ್ಲಿ ಸೋಮವಾರ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಮತ್ತು ಅಸೋಸಿಯೇಷನ್‌ಗಳ ಒಕ್ಕೂಟವು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಖಾಸಗೀಕರಣದ ಕುರಿತು ನಾನೊಬ್ಬನೇ ತೀರ್ಮಾನ ಕೈಗೊಳ್ಳಲಾರೆ. ಆದರೆ ಎಸ್ಕಾಂಗಳ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಂಪುಟದ ಸಚಿವರು ಖಾಸಗೀಕರಣ ಮಾಡಬಾರದೆಂದು ಪ್ರತಿಪಾದಿಸಿದ್ದಾರೆ. ಖಾಸಗೀಕರಣಗೊಳಿಸಬಾರದು ಎಂಬ ನೌಕರರ ಬೇಡಿಕೆಗೆ ಆದ್ಯತೆ ನೀಡಲಾಗುವುದು. ನೌಕರರ ಬೇಡಿಕೆಗಳಿಗೆ ಸಂಬಂಧಿಸಿ ಸರ್ಕಾರ ನ್ಯಾಯಯುತ ತೀರ್ಮಾನವನ್ನೇ ಮಾಡಲಿದೆ ಎಂದು ಹೇಳಿದರು.



ಖಾಸಗೀಕರಣದ ಪರವಾಗಿ ಈ ಹಿಂದೆ ಬಿಜೆಪಿ ಸರ್ಕಾರ ತೀರ್ಮಾನ ಕೈಗೊಂಡಿತ್ತು. ಆದರೆ ಆಗ ವಿದ್ಯುತ್ ಇಲಾಖೆ ನೌಕರರು, ಅಧಿಕಾರಿಗಳು, ಸಂಘದ ಪ್ರತಿನಿಧಿಗಳು ವಿರೋಧ ವ್ಯಕ್ತಪಡಿಸಿರಲಿಲ್ಲ. ಈಗ ನನ್ನ ಬಳಿ ಬಂದು ಖಾಸಗೀಕರಣ ಮಾಡಬಾರದು ಎಂದು ಹೇಳುತ್ತಿದ್ದೀರಿ ಎಂದು ಮುಖ್ಯಮಂತ್ರಿ ಆಕ್ಷೇಪ ವ್ಯಕ್ತಪಡಿಸಿದರು. ಇಂಧನ ಸಚಿವ ಕೆಜೆಜಾರ್ಜ್, ಎಸ್ಕಾಂಗಳ ಅಧ್ಯಕ್ಷರು ಪಾಲ್ಗೊಂಡಿದ್ದರು.

### ಖಾಸಗೀಕರಣ ಪ್ರಶ್ನೆಯೇ ಇಲ್ಲ: ಸಚಿವ ಕೆ.ಜೆ.ಜಾರ್ಜ್ ಭರವಸೆ

**ಬೆಂಗಳೂರು:** ರಾಜ್ಯದ ಜನರಿಗೆ ವಿದ್ಯುತ್ ಪೂರೈಸಲು ಇಂಧನ ಇಲಾಖೆ ಬಲಿಷ್ಠವಾಗಿದೆ. ಖಾಸಗೀಕರಣಗೊಳಿಸುವ ಪ್ರಶ್ನೆಯೇ ಇಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.



ನಗರದಲ್ಲಿ ಸೋಮವಾರ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಟಾಟಾ ಪವರ್ ಕಂಪನಿಯು

ಪುಟ 2ಕ್ಕೆ

### ಪತಿ ಕೊಲೆ ಮಾಡಿ ಹೃದಯಾಘಾತ ನಾಟಕ

**ಮೈಸೂರು:** ಪತಿಯನ್ನು ಕೊಲೆ ಮಾಡಿ ಹೃದಯಾಘಾತದ ನಾಟಕ ಮಾಡಿದ್ದ ಪತ್ನಿಯನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ನಿತ್ಯಾನಂದ (50) ಕೊಲೆಯಾದ ಪತಿ. ಶಿಕ್ಷಕಿ ಸುಶೀಲ ಪತಿ ಕೊಲೆ ಆರೋಪಿ.

ಮೈಸೂರಿನ ಕುವೆಂಪುನಗರದ ನಿವಾಸಿ ನಿತ್ಯಾನಂದ ಭಾನುವಾರ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದರು. ಪತ್ನಿ ಸುಶೀಲ ಅವರೇ ಗಂಡನನ್ನು ಹತ್ಯೆ ಮಾಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ನಿತ್ಯಾನಂದ ಖಾಸಗಿ ಮಹೀಂದ್ರಾ ಶೋರೂಂನಲ್ಲಿ ಕೆಲಸ ಮಾಡುತ್ತಿದ್ದರು. ಪತ್ನಿ ಸುಶೀಲ ಖಾಸಗಿ ಶಾಲೆ ಶಿಕ್ಷಕಿ. ದಂಪತಿಗೆ ಮಕ್ಕಳಿರಲಿಲ್ಲ. ಸಾಂಸಾರಿಕ ಕಲಹ, ಹಣಕಾಸು ಮತ್ತು ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ನಡುವೆ ಆಗಾಗ ಜಗಳ ನಡೆಯುತ್ತಿತ್ತು ಎನ್ನಲಾಗಿದೆ.

ಪುಟ 2ಕ್ಕೆ

# ಹಠ ಬೇಡ: ಟೌನ್‌ಶಿಪ್ ಕೈಬಿಡಿ

## ಸಿಎಂ ಡಿಕೆಶಿಗೆ ಕೇಂದ್ರ ಸಚಿವ ವಿ.ಸೋಮಣ್ಣ ಸಲಹೆ

**ಚನ್ನಪಟ್ಟಣ:** ಉಪನಗರ ನಿರ್ಮಾಣಕ್ಕಾಗಿ ಅನ್ನದಾತ ರೈತರಿಗೆ ನೋವು ಕೊಡುವುದು ಬೇಡ. ಹಠದಿಂದ ರೈತರ ಕೃಷಿ ಭೂಮಿಯನ್ನು ಕಿತ್ತುಕೊಳ್ಳುವ ಬದಲು, ಈ ಟೌನ್‌ಶಿಪ್ ಯೋಜನೆಯನ್ನು ಬೇರೆ ಕಡೆಗೆ ಸ್ಥಳಾಂತರಿಸುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಸಲಹೆ ನೀಡಿದರು.

ಬಹುಚರ್ಚಿತ ಬಿಡದಿ ಟೌನ್‌ಶಿಪ್ ಯೋಜನೆಗೆ ರೈತರಿಂದ ವ್ಯಕ್ತವಾಗುತ್ತಿರುವ ತೀವ್ರ ವಿರೋಧದ ಬೆನ್ನಲ್ಲೇ, ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಸಿಎಂ ಡಿ.ಕೆ.ಶಿವಕುಮಾರ್‌ಗೆ ಈ ಸಲಹೆ ನೀಡಿದ್ದಾರೆ.



ಚನ್ನಪಟ್ಟಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ರೈತರಿಗೆ ಅನಾನುಕೂಲ ಮಾಡಿ ಯೋಜನೆ ಜಾರಿಗೊಳಿಸುವುದು ಬೇಡ. ಬಿಡದಿ ಟೌನ್‌ಶಿಪ್ ವಿಚಾರವಾಗಿ ಈಗಾಗಲೇ ನಾನು ಸಾಕಷ್ಟು ಮಾತನಾಡಿದ್ದೇನೆ. ಸಿಎಂ ಸಹೋದರ ಡಿ.ಕೆ.ಸುರೇಶ್ ಜೊತೆಯೂ ಫೋನ್‌ನಲ್ಲಿ ಚರ್ಚಿಸಿದ್ದೇನೆ. ಡಿ.ಕೆ.ಶಿವಕುಮಾರ್ ಸಿಎಂ ಆಗಿ ಒಂದು ತಿಂಗಳಾಗಿದೆ. ನೀವು ಸಿಎಂ ಆಗಿ ಯಾವುದೇ ಹೊಸ ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ. ಅದರ ಬದಲು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಕೊಡಿ ಎಂದು ಹೇಳಿದರು.

ಹಿಂದೆ ಎಚ್.ಡಿ. ಕುಮಾರಸ್ವಾಮಿ ಸಿಎಂ ಆಗಿದ್ದಾಗ ರೈತರು ಬೇಡ ಎಂದ ತಕ್ಷಣವೇ ಈ ಯೋಜನೆಯನ್ನು ಕೈಬಿಟ್ಟಿದ್ದರು. ಇವತ್ತು ನೀವ್ಯಾಕೆ ಈ ಯೋಜನೆಗಾಗಿ ಹಠ ಮಾಡುತ್ತಿದ್ದೀರಿ? ರೈತರ ಕೃಷಿ ಭೂಮಿಯನ್ನು ಕಿತ್ತುಕೊಳ್ಳುವ ಬದಲು ಯೋಜನೆಯನ್ನು ಬೇರೆ ಕಡೆಗೆ ಸ್ಥಳಾಂತರಿಸಿ. ನಮ್ಮ ಜಿಲ್ಲೆಯವರೇ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ ಎಂಬ ಹೆಮ್ಮೆಯಿದೆ. ಅವರು ಮೊದಲು ಬಿಡದಿ ಭಾಗದ ಬೈರಮಂಗಲ ಕೆರೆ ಶುದ್ಧೀಕರಣಕ್ಕೆ ಆದ್ಯತೆ ನೀಡಲಿ. ಹಠಮಾರಿ ಧೋರಣೆಯನ್ನು ಬಿಟ್ಟು, ವಿವಾದಿತ ಯೋಜನೆಯನ್ನು ಕೈಬಿಡಿ. ಇಡೀ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯತ್ತ ಗಮನ ಹರಿಸಿ ಎಂದು ಸಿಎಂ ಡಿಕೆಶಿಗೆ ಮನವಿ ಮಾಡಿದರು.

# ಬೆಂಗಳೂರು–ಮೈಸೂರು ಚತುಷ್ಪಥ

## ರೈಲ್ವೆ ಯೋಜನೆಗೆ ಸಮೀಕ್ಷೆ: ಸಚಿವ ವಿ.ಸೋಮಣ್ಣ ಭರವಸೆ

**ಬೆಂಗಳೂರು:** ಬೆಂಗಳೂರಿನಿಂದ 100 ಕಿ.ಮೀ. ವ್ಯಾಪ್ತಿಯ ನಗರಗಳಿಗೆ ಚತುಷ್ಪಥ ರೈಲ್ವೆ ಮಾರ್ಗ ಅಭಿವೃದ್ಧಿ ಪಡಿಸಲಾಗುವುದು ಎಂದು ಕೇಂದ್ರ ರೈಲ್ವೆಯ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ತಿಳಿಸಿದರು.

ಚನ್ನಪಟ್ಟಣ ತಾಲ್ಲೂಕಿನ ಎಲೆಕೇರಿ ಬಳಿ ನೂತನವಾಗಿ ನಿರ್ಮಿಸಿರುವ ರಸ್ತೆ ಮೇಲ್ಸೇತುವೆ ಉದ್ಘಾಟಿಸಿ ಸೋಮವಾರ ಮಾತನಾಡಿದರು. ರಾಜಧಾನಿಯಿ ಮಂಗಳೂರಿಗೆ ಕೂಡ ಇದೇ ರೀತಿ ಚತುಷ್ಪಥ ಮಾರ್ಗ ಅಭಿವೃದ್ಧಿ ಪರಿಗಣಿಸಲಾಗುವುದು ಎಂದು ಹೇಳಿದರು.

ಇದಕ್ಕೂ ಮೊದಲು ಮಾತನಾಡಿದ ಸಚಿವ ಎಂ.ಬಿ ಪಾಟೀಲ್ ಅವರು, ಬೆಂಗಳೂರಿನಿಂದ ತುಮಕೂರು, ಮೈಸೂರು, ಗೌರಿಬಿದನೂರು, ಕೋಲಾರಕ್ಕೆ ಚತುಷ್ಪಥ ಹಳಿ ನಿರ್ಮಿಸಬೇಕು ಎಂದು ಮನವಿ ಮಾಡಿದರು.

ಸಚಿವರ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸೋಮಣ್ಣ, ಬೆಂಗಳೂರು–ತುಮಕೂರು ಚತುಷ್ಪಥ ಮಾರ್ಗದ ಸರ್ವೆ ಮುಗಿದಿದೆ. ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆಗಳನ್ನು ಆರಂಭಿಸಲಾಗುವುದು. ಒಂದೂವರೆ– ಎರಡು ವರ್ಷದಲ್ಲಿ ಕಾಮಗಾರಿ ಮುಗಿಸುವ ಉದ್ದೇಶ ಇದೆ. ಹಾಗೆಯೇ ಬೆಂಗಳೂರು–ಮೈಸೂರು ಚತುಷ್ಪಥ ನಿರ್ಮಾಣಕ್ಕೆ ಸಮೀಕ್ಷೆ ಮಾಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.



ತುಮಕೂರು–ಚಿತ್ರದುರ್ಗ–ದಾವಣಗೆರೆ ಮಾರ್ಗದಲ್ಲಿ ಭರದಿಂದ ಕಾಮಗಾರಿ ನಡೆಯುತ್ತಿದೆ. ಈಗ ಏಕಪಥವಾಗಿರುವ ಈ ಮಾರ್ಗವನ್ನು ಜೋಡಿಹಳಿ ಮಾಡಬೇಕು ಎಂದು ಪಾಟೀಲ್ ಬೇಡಿಕೆ ಇಟ್ಟಿದ್ದಾರೆ. ಇದನ್ನು ಕೂಡ ಪರಿಗಣಿಸಲಾಗುವುದು ಎಂದು ಸೋಮಣ್ಣ ಹೇಳಿದರು.

### ಅಯೋಧ್ಯೆ ಕಳವು ಪ್ರಕರಣ: ವಕಾಲತ್ತಿಗೆ 5 ಲಕ್ಷ ದಂಡ

**ಅಯೋಧ್ಯೆ:** ಅಯೋಧ್ಯೆ ರಾಮಮಂದಿರದಲ್ಲಿ ದೇಣಿಗೆ, ಚಿನ್ನಾಭರಣ ಕಳವು ಪ್ರಕರಣದಲ್ಲಿ ಬಂಧಿತರಾಗಿರುವ ಎಂಟು ಆರೋಪಿಗಳ ಪರವಾಗಿ ಯಾವುದೇ ವಕಾಲತ್ತು ನಡೆಸದಿರಲು ಅಯೋಧ್ಯೆಯ ಫೈಜಾಬಾದ್ ಬಾರ್ ಅಸೋಸಿಯೇಷನ್ ಸೋಮವಾರ ನಿರ್ಧರಿಸಿದೆ.

ಈ ನಿರ್ಧಾರ ಉಲ್ಲಂಘಿಸುವ ವಕೀಲರಿಗೆ 5 ಲಕ್ಷ ದಂಡ ವಿಧಿಸಲಾಗುವುದು ಎಂದು ಬಾರ್ ಅಸೋಸಿಯೇಷನ್ ಸಭೆಯಲ್ಲಿ ಎಚ್ಚರಿಸಲಾಗಿದೆ.

ದೇಗುಲದ ನಿರ್ವಹಣೆಗೆ ಸಂಬಂಧಿಸಿದಂತೆ ದೇಗುಲದ ಟ್ರಸ್ಟ್ ಚಂಪತ್ ರಾಯ್, ಅನಿಲ್ ಮಿಶ್ರಾ ಹಾಗೂ ಗೋಪಾಲ್ ರಾವ್ ಅವರು ಅಯೋಧ್ಯೆಯನ್ನು ತೊರೆಯಬೇಕು ಎಂದು ಒತ್ತಾಯಿಸಲಾಗಿದೆ. ಇಲ್ಲವಾದ್ದಲ್ಲಿ ಅಯೋಧ್ಯೆ ನಗರಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ರಾಮಮಂದಿರದ ಕಾಣಿಕೆ ಕಳ್ಳತನದಿಂದ ನಮ್ಮೆಲ್ಲರ ಭಾವನೆಗಳಿಗೆ

ಪುಟ 2ಕ್ಕೆ

### ಎಐಎಡಿಎಂಕೆ 6ನೇ ವಿಕೆಟ್ ಪತನ!

**ಚೆನ್ನೈ:** ತಮಿಳುನಾಡಿನ ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ (ಎಐಎಡಿಎಂಕೆ) ಪಕ್ಷಕ್ಕೆ ಮತ್ತೊಂದು ಮರ್ಮಾಘಾತವಾಗಿದೆ. ಕರೂರು ಕ್ಷೇತ್ರದ ಪ್ರಭಾವಿ ಶಾಸಕ ಎಂ.ಆರ್.ವಿಜಯ ಭಾಸ್ಕರ್ ಅವರು ವಿಧಾನಸಭೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ವಿಜಯಭಾಸ್ಕರ್ ಸ್ಪೀಕರ್ ಜೆ.ಸಿ.ಡಿ ಪ್ರಭಾಕರ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಇದು ಎಡಪ್ಪಾಡಿ ಪಳನಿ ಸ್ವಾಮಿ ನೇತೃತ್ವದ ಎಐ ಎಡಿಎಂಕೆಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ವಿಧಾನಸಭಾ ಚುನಾವಣೆಯ ಬಳಿಕ ಪಕ್ಷ ತೊರೆದ 6ನೇ ಶಾಸಕ ವಿಜಯ ಭಾಸ್ಕರ್. ಇದು ಪಕ್ಷದೊಳಗಿನ ಆಂತರಿಕ ಅಸಮಾಧಾನ ಮತ್ತೊಮ್ಮೆ ಬಹಿರಂಗಪಡಿಸಿದೆ. ವಿಧಾನಸಭಾ ಚುನಾವಣೆಯ ಬಳಿಕ ಅಣ್ಣಾಡಿಎಂಕೆ ಪಕ್ಷದಿಂದ ಐವರು ಶಾಸಕರು ರಾಜೀನಾಮೆ ನೀಡಿ ದ್ದಾರೆ. ಕೆಲವರು ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವನ್ನು ಸೇರಿರುವುದು ತಮಿಳುನಾಡಿನ ರಾಜಕೀಯದಲ್ಲಿ ಹೊಸ ಬೆಳವಣಿಗೆಗಳಿಗೆ ಕಾರಣವಾಗಿದೆ. ಈ ಬೆಳವಣಿಗೆಗಳು ರಾಜ್ಯದಲ್ಲಿ ರಾಜಕೀಯ ಸಮೀಕರಣ ಬದಲಾಗುತ್ತಿರುವ ಸೂಚನೆಗಳೆಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

### ಮಲ್ಲಿಕಾರ್ಜುನ ಖರ್ಗೆ ಮತ್ತೆ ರಾಜ್ಯಸಭೆ ವಿಪಕ್ಷ ನಾಯಕ

**ನವದೆಹಲಿ:** ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮತ್ತೊಮ್ಮೆ ರಾಜ್ಯಸಭೆ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅವರ ರಾಜ್ಯಸಭೆ ಅವಧಿ ಜೂನ್ 25 ರಂದು ಕೊನೆಗೊಂಡಿತ್ತು.

ರಾಜ್ಯಸಭೆಗೆ ಖರ್ಗೆ ಅವರು ಮತ್ತೊಮ್ಮೆ ಆಯ್ಕೆಯಾದ ನಂತರ, ಅವರನ್ನು ಸದನದಲ್ಲಿ ವಿರೋಧ ಪಕ್ಷದ ನಾಯಕ ಎಂದು ಆಯ್ಕೆ ಮಾಡಲಾಗಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ರಾಜ್ಯಸಭೆ

ಪುಟ 2ಕ್ಕೆ



### ಪ್ರಶ್ನೆಗಳಿಗೆ ಉತ್ತರ ಕೊಟ್ಟು ಎಸ್ಐಆರ್ ಮಾಡಿ: ಪ್ರಿಯಾಂಕ್

**ಬೆಂಗಳೂರು:** ಚುನಾವಣಾ ಆಯೋಗ ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಎಸ್ಐಆರ್ ಮಾಡಲಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ನಗರದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ, ನಾಳೆಯಿಂದ ಎಸ್ಐಆರ್ ನಡೆಯಲಿರುವ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದರು. ಈ ಬಗ್ಗೆ ನಾವು ಕ್ಯಾಬಿನೆಟ್‌ನಲ್ಲಿ ಕೆಲವು ಆಕ್ಷೇಪ ವ್ಯಕ್ತಪಡಿಸಿದ್ದೇವೆ. ಮುಖ್ಯ ಚುನಾವಣಾಧಿಕಾರಿಗೂ ಆಕ್ಷೇಪ ಸಲ್ಲಿಸಲಾಗಿದೆ. ಯಾವ ಆಧಾರದಲ್ಲಿ ಜನರನ್ನು ಮತದಾರರ ಪಟ್ಟಿಯಿಂದ ಹೊರಗಿಡುತ್ತಾರೆ? ಇದರ ಹಿಂದಿನ ತರ್ಕ ಏನು ಅಂತ ಆಯೋಗಕ್ಕೆ ಕೇಳಿದ್ದೇವೆ ಎಂದು ಮಾಹಿತಿ ನೀಡಿದರು.



ಗೊಂದಲ ಇದ್ದರೆ ನ್ಯಾಯಮಂಡಳಿಯಲ್ಲಿ ಪ್ರಶ್ನಿಸಲು ಅವಕಾಶ ಮಾಡಿಕೊಡಬೇಕು. ದಾಖಲೆಗಳಲ್ಲಿ ಸ್ಪೆಲ್ಲಿಂಗ್ ತಪ್ಪಾದ ಮಾತ್ರಕ್ಕೆ ಅವರ ಹಕ್ಕು ಕಿತ್ತುಕೊಳ್ಳಲು ಸಾಧ್ಯವಿಲ್ಲ. ನಮ್ಮ ಆಕ್ಷೇಪಕ್ಕೆ

ಪುಟ 2ಕ್ಕೆ

# ಜಲಾಕ್ಷಾಮದ ಭೀತಿಯಲ್ಲಿ ಹಳೆ ಮೈಸೂರು

## ಕೈಕೊಟ್ಟ ಮುಂಗಾರು, ಬರದ ಛಾಯೆ ಆತಂಕ, ಬರಿದಾದ ಕಾವೇರಿ ಕೊಳಗಳ ಒಡಲು


**ವಿಶೇಷ ವರದಿ** ಮೈಸೂರು

ಮುಂಗಾರು ಮಾರುತ ಕೇರಳದ ಬಳಿಕ ಕರ್ನಾಟಕವನ್ನು ಪ್ರವೇಶಿಸಿದ್ದರೂ, ಹಳೆ ಮೈಸೂರು ಭಾಗದಲ್ಲಿ ನಿರೀಕ್ಷಿತ ಮಳೆಯ ಲಕ್ಷಣಗಳು ಗೋಚರವಾಗುತ್ತಿಲ್ಲ. ಕೆಲವೆಡೆ ಅಲ್ಲಲ್ಲಿ ಮಳೆಯಾಗಿರುವುದನ್ನು ಬಿಟ್ಟರೆ, ಎಲ್ಲೆಡೆ ನಿರೀಕ್ಷೆಯಂತೆ ಮಳೆಯಾಗದೇ ಬರಗಾಲ ಸ್ಥಿತಿ ಎದುರಾಗಿದ್ದು, ಬಹುತೇಕ ಹಳೆ ಮೈಸೂರು ಭಾಗದ ಜಲಾಶಯಗಳು ಬರಿದಾಗ ತೊಡಗಿ ಸಂಕಷ್ಟದ ಸ್ಥಿತಿ ಎದುರಾಗಲಾರಂಭಿಸಿದ್ದು, ಜುಲೈಗೂ ಇದೇ ಸ್ಥಿತಿ ಮುಂದುವರೆದರೆ ಕುಡಿವ ನೀರಿಗೂ ಆಹಾಕಾರ ಎದುರಾಗುವ ಆತಂಕ ಶುರುವಾಗಿದೆ.

ದಕ್ಷಿಣ ಕರ್ನಾಟಕದ ಕೃಷ್ಣರಾಜಸಾಗರ, ಹೇಮಾವತಿ, ಹಾರಂಗಿ, ನುಗು, ತಾರಕ, ಕಬಿನಿ ಜಲಾಶಯಗಳಲ್ಲಿ ಕಳೆದ ವರ್ಷ ಈ ವೇಳೆಗಾಗಲೇ ಭರ್ತಿಯಾಗಿ ತುಂಬಿ ರೈತರ ಮೊಗದಲ್ಲಿ ಸಂತಸದ ಕಳೆ

ಪುಟ 2ಕ್ಕೆ





### ತಮಿಳುನಾಡಿಗೆ ಹರಿಸಲು ನೀರಿಲ್ಲ

124.80 ಅಡಿ ಗರಿಷ್ಠ ಮಟ್ಟ ಹೊಂದಿರುವ ಕೆಆರ್ ಎಸ್ ಡ್ಯಾಂನಲ್ಲಿ ಸದ್ಯ ಕೇವಲ 80.8ಅಡಿಯಷ್ಟು ನೀರಿದ್ದು, 20 ಟಿಎಂಸಿ ಮಾತ್ರ ನೀರು ಶೇಖರಣೆ ಇದೆ. ಇದರಲ್ಲಿ 7 ಟಿಎಂಸಿ ನೀರು ಡೆಡ್ ಸ್ಟೋರೇಜ್ ಆಗಿದ್ದು, ಬಳಕೆಗೆ ಲಭ್ಯವಿರುವುದು ಕೇವಲ 13 ಟಿಎಂಸಿ ಮಾತ್ರ ಆಗಿದೆ. ಇನ್ನೂ ಇತ್ತ

| ಜಲಾಶಯದ ಹೆಸರು | ಗರಿಷ್ಠ ಮಟ್ಟ | ಇಂದಿನ ಮಟ್ಟ(ಗರಿಷ್ಠ ಸಾಮರ್ಥ್ಯ) | ಒಳ ಹರಿವು | ಹೊರಹರಿವು | ಹಿಂದಿನ ವರ್ಷ ನೀರಿನ ಮಟ್ಟ |
|---|---|---|---|---|---|
| ಕೃಷ್ಣರಾಜಸಾಗರ (ಕೆಆರ್ಎಸ್) | 124.80ಅಡಿ(49.45 ಟಿಎಂಸಿ) | 80.8 | 557 | 668 | 124 |
| ನುಗು | 2380 ಅಡಿ(5.44 ಟಿಎಂಸಿ) | 2360.40 | 16 | 0 | 93 |
| ಕಬಿನಿ | 2284ಅಡಿ(19.52 ಟಿಎಂಸಿ) | 2253.66 | 611 | 1357 | 2280 |
| ತಾರಕ | 2425ಅಡಿ(3.95 ಟಿಎಂಸಿ) | 2408 | 0 | 0 | 2420 |
| ಹಾರಂಗಿ | 2859ಅಡಿ(8.5 ಟಿಎಂಸಿ) | 2825.97 | 320 | 180 | 2851.13 |
| ಹೇಮಾವತಿ | 2,922ಅಡಿ(35.7ಟಿಎಂಸಿ) | 2868 | 494 | 300 | 2915 |

### ಬೆಳೆಗಳಿಗೆ ನೀರು ಅನುಮಾನ

ಕೆಆರ್ಎಸ್ ಅಣೆಕಟ್ಟಿನಲ್ಲಿ ಈಗ ಉಳಿದಿರೋದು ಕೇವಲ 20 ಟಿಎಂಸಿ ನೀರು. ಅದರಲ್ಲಿ 5 ಟಿಎಂಸಿ ಡೆಡ್ ಸ್ಟೋರೇಜ್. ಬಳಕೆಗೆ ಸಿಗೋದು

ಪುಟ 2ಕ್ಕೆ

### ಭಿತ್ತನೆ ಪ್ರಮಾಣ ಕಡಿಮೆ

ಮುಂಗಾರು ಕೈ ಕೊಟ್ಟಿರುವ ಹಿನ್ನೆಲೆಯಲ್ಲಿ ಈಗಾಗಲೇ ಭಿತ್ತನೆ ಪ್ರಮಾಣ ಕಡಿಮೆಯಾಗಿದೆ. ಜತೆಗೆ ಅನೇಕರು ಕಾಲುವೆ ನೀರಿಗಾಗಿ ಎದುರು

ಪುಟ 2ಕ್ಕೆ

ಮೊದಲ ಪುಟದಿಂದ

## ಜಲಾಕ್ಷಾಮದ ಭೀತಿ

ತಂದಿದ್ದವು. ಆದರೆ, ಎಲ್ ನಿನೊ ಪರಿಣಾಮ ಮುಂಗಾರು ದುರ್ಬಲಗೊಂಡಿದ್ದು, ಮೈಸೂರು, ಕೊಡಗು ಹಾಗೂ ಕೇರಳದ ವಯನಾಡು ಪ್ರದೇಶದಲ್ಲಿ ವಾಡಿಕೆಯಂತೆ ಮಳೆಯಾಗಿಲ್ಲ. ಡ್ಯಾಂಗಳು ಬರಿದಾಗುತ್ತಿರುವ ಸನ್ನಿವೇಶ ಸಹಜವಾಗಿಯೇ ರೈತಾಪಿ ಜನರನ್ನು ತೀವ್ರ ಆತಂಕಗೊಳಿಸಿದೆ. ವರುಣನ ಅವಕೃಪೆಯಿಂದ ರೈತರು ಮಾತ್ರವಲ್ಲದೆ, ಕುಡಿಯುವ ನೀರಿಗಾಗಿಯೂ ಜಲಾಶಯಗಳನ್ನು ಅವಲಂಬಿಸಿರುವ ಮೈಸೂರು, ಮಂಡ್ಯ ಹಾಗೂ ಬೆಂಗಳೂರು ನಗರದ ಜನರನ್ನು ಚಿಂತಾಕ್ರಾಂತರನ್ನಾಗಿಸಿದೆ.

## ಬೆಳೆಗಳಿಗೆ ನೀರು ಅನುಮಾನ

**ಕೇವಲ 6 ಟಿಎಂಸಿ ನೀರು. ಹೀಗಾಗಿ ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಿರುವ ಜಿಲ್ಲಾಡಳಿತ ಮುಂದಿನ 3 ತಿಂಗಳು ಕುಡಿಯುವ ನೀರಿನ ನಿರ್ವಹಣೆಗಾಗಿ ನಿರ್ಧಾರಕ್ಕೆ ಬಂದಿದೆ. ಹೀಗಾಗಿ 3 ತಿಂಗಳು ರೈತರ ಬೆಳೆಗೆ ಕಾವೇರಿ ನೀರು ಸಿಗೋದು ಬಹುತೇಕ ಅನುಮಾನವಾಗಿದೆ.**

## ಭಿತ್ತನೆ ಪ್ರಮಾಣ ಕಡಿಮೆ

**ನೋಡುತ್ತಿದ್ದರು. ಆದರೆ, ನೀರಿನ ಪ್ರಮಾಣವೇ ಕಡಿಮೆ ಆಗಿರುವ ಹಿನ್ನೆಲೆಯಲ್ಲಿ ಕೃಷಿ ಇಲಾಖೆಯಿಂದಲೇ ಯಾವುದೇ ಭಿತ್ತನೆ ಬೀಜಗಳನ್ನು ವಿತರಿಸದೇ ಸಾಧಾರಣ ಮಳೆಯಾಶ್ರಿತ ಬೆಳೆಗೆ ಒತ್ತು ನೀಡುವಂತೆ ರೈತರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಲಾಗುತ್ತಿದೆ.**

## ರಾಜ್ಯಸಭೆ ವಿಪಕ್ಷ ನಾಯಕ

ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಮಲ್ಲಿಕಾರ್ಜುನ ಖರ್ಗೆ ಸತತ ಎರಡನೇ ಬಾರಿಗೆ ಕರ್ನಾಟಕದಿಂದ ಮೇಲ್ಮನೆಗೆ ಆಯ್ಕೆಯಾಗಿದ್ದಾರೆ. ರಾಜ್ಯಸಭಾ ಅಧ್ಯಕ್ಷ ಸಿ.ಪಿ.ರಾಧಾ ಕೃಷ್ಣನ್ ಅವರು ಮಲ್ಲಿಕಾರ್ಜುನ ಖರ್ಗೆ ಅವ ರಿಗೆ ಪ್ರಮಾಣ ವಚನ ಬೋಧಿಸಿದರು. ರಾಜ್ಯ ಸಭಾ ಉಪಸಭಾಪತಿ ಹರಿವಂಶ್, ಸಭಾನಾ ಯಕ ಜೆ.ಪಿ.ನಡ್ಡಾ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಉಪಸ್ಥಿತರಿದ್ದರು.

## ತಮಿಳುನಾಡಿಗೆ ಹರಿಸಲು ನೀರಿಲ್ಲ

**ಕಾವೇರಿ ನೀರು ಹಂಚಿಕೆ ವಿಚಾರವಾಗಿ ಸುಪ್ರೀಂಕೋರ್ಟ್ ತೀರ್ಪಿನ ಅನುಸಾರ ಈ ತಿಂಗಳಲ್ಲಿ 9.19 ಟಿಎಂಸಿ ನೀರನ್ನು ತಮಿಳುನಾಡಿಗೆ ಹರಿಯಲು ಬಿಡಬೇಕಿದೆ. ಈ ಬಗ್ಗೆ ನವದೆಹಲಿಯಲ್ಲಿ ಕಾವೇರಿ ನೀರು ನಿಯಂತ್ರಣ ಸಮಿತಿ ಸಭೆಯಲ್ಲೂ ಈ ವಿಚಾರ ಪ್ರಸ್ತಾಪ ವಾಗಿದೆ. ಆದರೆ, ರಾಜ್ಯದ ಜನರಿಗೆ ಕುಡಿಯಲಷ್ಟೇ ನೀರಿನ ಸಂಗ್ರಹವಾಗಿದೆ. ಮುಂದಿನ ಜುಲೈನಲ್ಲಿ ಮಳೆ ಬಾರದಿದ್ದರೆ ಕುಡಿಯುವ ನೀರಿಗೂ ಸಂಕಷ್ಟ ಎದುರಾಗಲಿದೆ.**

## ಎಸ್ಐಆರ್ ಮಾಡಿ: ಪ್ರಿಯಾಂಕ್

ಆಯೋಗದಿಂದ ಇನ್ನೂ ಉತ್ತರ ಸಿಕ್ಕಿಲ್ಲ. ನಾವು ಎಸ್ಐಆರ್ ಮಾಡ ಬೇಡಿ ಎಂದು ಹೇಳಿಲ್ಲ. ಉತ್ತಮವಾದ ವೋಟರ್ ಲಿಸ್ಟ್ ಕೊಡಲಿ. ಪಾರ ದರ್ಶಕವಾಗಿ ಮಾಡಲಿ ಎಂದು ಒತ್ತಾಯಿಸಿದರು. ತಮಿಳುನಾಡು, ಪಶ್ಚಿಮ ಬಂಗಾಳದಲ್ಲಿ ಬಡವರ ಹಕ್ಕು ಕಿತ್ತುಕೊಳ್ಳಲಾಗಿದೆ. ನಾವು ಜಾಗೃತಿ ಅಭಿಯಾನ ಮಾಡ್ತಿದ್ದೇವೆ. ಕಾನೂನಾತ್ಮಕವಾಗಿ ಇದನ್ನು ಪರಿಗಣಿಸಬೇಕಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ 89 ಲಕ್ಷ ಜನರನ್ನು ಪಟ್ಟಿಯಿಂದ ಕೈಬಿಟ್ಟಿದ್ದಾರೆ. ಇದನ್ನು ನ್ಯಾಯಮಂಡಳಿಯಲ್ಲಿ ಕೇಳಲು ಅವಕಾಶ ಕೊಡಲಿಲ್ಲ. ಇದನ್ನು ಇತ್ಯರ್ಥ ಪಡಿಸಲು ನಾಲ್ಕು ವರ್ಷಬೇಕು ಎಂದು ನ್ಯಾಯ ಮಂಡಳಿಯ ಜಡ್ಜ್ ರಾಜೀನಾಮೆ ಕೊಟ್ಟಿದ್ದಾರೆಂದು ಟೀಕಿಸಿದರು.

## ಹೃದಯಾಘಾತ ನಾಟಕ

ನಿತ್ಯಾನಂದ ಪ್ರತಿನಿತ್ಯ ಸ್ನೇಹಿತರೊಂದಿಗೆ ಮದ್ಯಪಾನ ಮಾಡಿ ಮನೆಗೆ ತೆರಳಿದ್ದರು. ಬಳಿಕ ಮದ್ಯದ ಅಮಲಿನಲ್ಲಿ ಮಲಗಿದ್ದ ವೇಳೆ ಪತ್ನಿ ಸುಶೀಲ ಕುತ್ತಿಗೆಗೆ ಹಗ್ಗ ಬಿಗಿದು ಹತ್ಯೆ ಮಾಡಿರುವ ಶಂಕೆ ಇದೆ ಎಂದು ಪೊಲೀಸರ ಮಾಹಿತಿ ನೀಡಿದ್ದಾರೆ.

## ಷಡ್ಯಂತ್ರಕ್ಕೆ ಅಡ್ಡಮತ:

ಅವರನ್ನು ಗುರಿ ಮಾಡುವುದು ಸರಿಯಲ್ಲ. ಪಕ್ಷದ ವರಿಷ್ಠರ ಸೂಚನೆಯ ಮೇರೆಗೆ ವರ್ಷದಿಂದ ತಳೆದಿದ್ದ ಮೌನವ್ರತ ಮುರಿಯುತ್ತೇನೆ ಎಂದರು. ಬಿ.ಎಸ್.ಯಡಿಯೂರಪ್ಪ ಪುತ್ರ ಎಂಬ ಕಾರಣದಿಂದ ವಿಜಯೇಂದ್ರ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿಲ್ಲ. ಅವರ ಶಕ್ತಿ ಮತ್ತು ಸಾಮರ್ಥ್ಯವನ್ನು ಗಮನಿಸಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಈ ಜವಾಬ್ದಾರಿ ನೀಡಿದ್ದಾರೆ. ವಿಜಯೇಂದ್ರ ರಾಜ್ಯ ಘಟಕದ ಅಧ್ಯಕ್ಷರಾದ ಬಳಿಕ ಪಕ್ಷ ಸಬಲವಾಗಿದೆ. 2028ರ ವಿಧಾನಸಭಾ ಚುನಾವಣೆಯನ್ನು ಅವರ ನೇತೃತ್ವದಲ್ಲಿಯೇ ಎದುರಿಸಿ ಅಧಿಕಾರಕ್ಕೆ ಬರಲಿದ್ದೇವೆ ಎಂದು ತಿಳಿಸಿದರು.

ಮಾಜಿ ಸಚಿವ ಕುಮಾರ ಬಂಗಾರಪ್ಪ ಅವರಿಗೆ ಜಿಲ್ಲಾ ಪಂಚಾಯಿತಿ ಸದಸ್ಯರಾಗುವ ಸಾಮರ್ಥ್ಯ ಕೂಡ ಇಲ್ಲ. ವಿಜಯೇಂದ್ರ ಎದುರು ಹಾಕಿಕೊಂಡು ಅವರು ಸೊರಬ ವಿಧಾನಸಭಾ ಕ್ಷೇತ್ರ ಗೆದ್ದು ತೋರಿಸಲಿ ಎಂದು ಎಂ.ಪಿ.ರೇಣುಕಾಚಾರ್ಯ ಸವಾಲು ಹಾಕಿದರು.

## ವಕಾಲತ್ತಿಗೆ 5 ಲಕ್ಷ ದಂಡ

ಧಕ್ಕೆಯಾಗಿದೆ. ಬಂಧಿತ ಆರೋಪಿಗಳ ಪರವಾಗಿ ವಾದ ಮಂಡಿಸದಿರಲು ಫೈಜಾಬಾದ್‌ನ ವಕೀಲರು ನಿರ್ಧರಿಸಿದ್ದಾರೆ ಎಂದು ಬಾರ್ ಅಸೋಸಿಯೇಷನ್ ಕಾರ್ಯದರ್ಶಿ ಶೈಲೇಂದ್ರ ಜೈಸ್ವಾಲ್ ತಿಳಿಸಿದ್ದಾರೆ. ಅಯೋಧ್ಯೆ ದೇಣಿಗೆ ಕಳವು ಪ್ರಕರಣದಲ್ಲಿ ಆರೋಪಿಗಳಾದ ಅವಿನಾಶ್ ಶುಕ್ಲಾ, ಅನುಕಲ್ಪ್ ಮಿಶ್ರಾ, ಲವಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್, ಕರುಣೇಶ್ ಪಾಂಡೆ, ರಾಮಶಂಕರ್ ಮಿಶ್ರಾ, ಸುಭಾಷ್ ಶ್ರೀವಾತ್ಸವ ಹಾಗೂ ರಾಮಶಂಕರ್ ಅಲಿಯಾಸ್ ಟಿನ್ನು ಯಾದವ್‌ರನ್ನು ಬಂಧಿಸಲಾಗಿದೆ.

## ಖಾಸಗೀಕರಣ ಪ್ರಶ್ನೆಯೇ ಇಲ್ಲ

ಕರ್ನಾಟಕದಲ್ಲಿ ವಿದ್ಯುತ್ ವಿತರಣೆಗೆ ಪರವಾನಗಿ ಕೋರಿ ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿರುವ ಕುರಿತು ಮಾತನಾಡಿದ ಸಚಿವರು, ನಮ್ಮ ಸರ್ಕಾರ ನೌಕರರ ಪರವಾಗಿದೆ. ಖಾಸಗೀಕರಣ ವಿಚಾರಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ದೇಶನ ನೀಡಲಾಗಿದೆ. ಎಸ್ಕಾಂಗಳು ಕೆಇಆರ್ ಸಿ ಮುಂದೆ ಆಕ್ಷೇಪಣೆ ಸಲ್ಲಿಸಿವೆ. ನಾವು ಯಾವುದೇ ಖಾಸಗಿ ಕಂಪನಿಗೆ ಕಡಿಮೆ ಇಲ್ಲ. ಸಚಿವ ಸಂಪುಟದಲ್ಲಿ ಚರ್ಚಿಸಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

# 177ನೇ ನೋಟುಗಳ ಪ್ರದರ್ಶನ



**ಮಡಿಕೇರಿ:** ಖ್ಯಾತ ನಾಣ್ಯಶಾಸ್ತ್ರಜ್ಞ ಹಾಗೂ ಅಂಚೆಚೀಟಿ ಸಂಗ್ರಹಕಾರ ಪಿ.ಕೆ. ಕೇಶವಮೂರ್ತಿ ಅವರು ಕೊಡಗು ವಿದ್ಯಾಲಯದ ಗ್ರಂಥಾಲಯದಲ್ಲಿ 177ನೇ ನಾಣ್ಯ ಮತ್ತು ನೋಟುಗಳ ಪ್ರದರ್ಶನವನ್ನು ಆಯೋಜಿಸಿದ್ದರು.

1ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಐತಿಹಾಸಿಕ ಮಹತ್ವವುಳ್ಳ ನಾಣ್ಯಗಳು ಮತ್ತು ಕರೆನ್ಸಿ ನೋಟುಗಳನ್ನು ವೀಕ್ಷಿಸಿದರು. ವಿವಿಧ ಕಾಲಘಟ್ಟಗಳ ಇತಿಹಾಸ, ಸಂಸ್ಕೃತಿ ಹಾಗೂ ಆರ್ಥಿಕ ಬೆಳವಣಿಗೆಗಳ ಕುರಿತು ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳಲು ಈ ಪ್ರದರ್ಶನ ನೆರವಾಯಿತು.

ಹಳೆಯ ನಾಣ್ಯಗಳು ಮತ್ತು ಕರೆನ್ಸಿ ನೋಟುಗಳ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಈ ಪ್ರದರ್ಶನದ ಮುಖ್ಯ ಉದ್ದೇಶವಾಗಿತ್ತು. ಇದನ್ನು ವೀಕ್ಷಿಸಿದ ವಿದ್ಯಾರ್ಥಿಗಳು ಸ್ಫೂರ್ತಿ ಹೊಂದಿ, ತಮ್ಮ ಅಧ್ಯಯನಕ್ಕೆ ಪೂರಕವಾದ ಅಮೂಲ್ಯ ಮಾಹಿತಿಯನ್ನು ಪಡೆದುಕೊಂಡರು.

ಡಾ. ಅಂಜಲಿ ಬೋಪಯ್ಯ ಹಾಗೂ ಡಾ.ಎಂ.ಜಿ. ಪಾಟ್ಕರ್ ಅವರ ಪುತ್ರಿ ಸಲೀಲಾ ಭೇಟಿ ನೀಡಿ ಪ್ರದರ್ಶನವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಪಿ.ಕೆ. ಕೇಶವಮೂರ್ತಿ ಅವರು ನಾಣ್ಯ ಸಂಗ್ರಹದಲ್ಲಿನ ಕೆಲವು ಅಪರೂಪದ ನಾಣ್ಯಗಳನ್ನು ಹಾಗೂ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದ ಮೂರು ಅಮೂಲ್ಯ ಪುಸ್ತಕಗಳನ್ನು ಶಾಲೆಯ ಗ್ರಂಥಾಲಯಕ್ಕೆ ಕೊಡುಗೆಯಾಗಿ ಶಾಲಾ ಪ್ರಾಂಶುಪಾಲೆ ಸುಮಿತ್ರಾ ಅವರಿಗೆ ಹಸ್ತಾಂತರಿಸಿದರು.

# ವಿದ್ಯಾರ್ಥಿ ನಿಲಯ ಲೋಕಾರ್ಪಣೆ

**ಕುಟ್ಟ:** ಪೊನ್ನಂಪೇಟೆ ತಾಲೂಕಿನ ಕುಟ್ಟ ಪರಿಶಿಷ್ಟ ಪಂಗಡ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ನೂತನ ಕಟ್ಟಡವನ್ನು ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಲೋಕಾರ್ಪಣೆ ಗೊಳಿಸಿದರು.

ನಂತರ ಮಾತನಾಡಿದ ಅವರು, ಸಮಾಜದ ಮುನ್ನೆಲೆಗೆ ಬರಲು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಮಹತ್ವಾಕಾಂಕ್ಷೆಯಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನೂತನ ಕಟ್ಟಡವನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ವಿದ್ಯಾಭ್ಯಾಸ ಮಾಡುತ್ತಾ ಸಮಾಜಕ್ಕೆ ಮಾದರಿಯಾಗಬೇಕೆಂದು ಕರೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತಿತೀರ ಧರ್ಮಜ ಉತ್ತಪ್ಪ, ಬ್ಲಾಕ್ ಅಧ್ಯಕ್ಷ ಮಿದೇರಿರ ನವೀನ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಕಾಳಿಮಾಡ ಪ್ರಶಾಂತ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಾನಂಡ ಪ್ರತ್ಯು, ವಲಯ ಅಧ್ಯಕ್ಷ ರಾಮಕೃಷ್ಣ, ಪಕ್ಷದ ಮುಖಂಡರು ಪಲ್ವಿನ್ ಪೂಣಚ್ಚ ಇದ್ದರು.



# ದೂರದ ಸ್ಥಳಗಳಿಗೆ ಚತುಷ್ಪಥ ರೈಲ್ವೆ ಮಾರ್ಗ

## ಬೆಂಗಳೂರು ಸುತ್ತಮುತ್ತ 100 ಕಿ.ಮೀ. ಕಾಮಗಾರಿ: ಸೋಮಣ್ಣ । ಮೇಲ್ಸೇತುವೆ ಉದ್ಘಾಟನೆ

ರಾಮನಗರ: ಬೆಂಗಳೂರಿನಿಂದ 100 ಕಿ.ಮೀ. ಸುತ್ತಮುತ್ತ ಇರುವ ನಗರಗಳಿಗೆ ಚತುಷ್ಪಥ ರೈಲ್ವೆ ಮಾರ್ಗಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಹೇಳಿದರು.

ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಎಲೆಕೇರಿ ಬಳಿ ನೂತನವಾಗಿ ನಿರ್ಮಿಸಿರುವ ರಸ್ತೆ ಮೇಲ್ಸೇತುವೆ ಉದ್ಘಾಟಿಸಿ ಮಾತನಾಡಿದರು. ಸಮಾರಂಭದಲ್ಲಿ ಉಪಸ್ಥಿತರಿದ್ದ ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ಅವರು ಮನವಿಗೆ ಸ್ಪಂದಿಸಿ ಅವರು ಪ್ರತಿಕ್ರಿಯಿಸಿದರು. ಬೆಂಗಳೂರಿನಿಂದ ಮಂಗಳೂರಿಗೂ ಚತುಷ್ಪಥ ಮಾರ್ಗ ಅಭಿವೃದ್ಧಿಯನ್ನು ಪರಿಗಣಿಸಲಾಗುವುದು ಎಂದರು.

ಬೆಂಗಳೂರು–ತುಮಕೂರು ಚತುಷ್ಪಥ ಮಾರ್ಗದ ಸರ್ವೆ ಮುಗಿದಿದ್ದು, ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆಗಳನ್ನು ಆರಂಭಿಸಲಾಗುವುದು. ಮುಂದಿನ ಒಂದೂವರೆ– ಎರಡು ವರ್ಷದಲ್ಲಿ ಕಾಮಗಾರಿ ಮುಗಿಸುವ ಉದ್ದೇಶ ಇದೆ. ಹಾಗೆಯೇ ಬೆಂಗಳೂರು–ಮೈಸೂರು ಚತುಷ್ಪಥ ನಿರ್ಮಾಣಕ್ಕೆ ಸಮೀಕ್ಷೆ ಮಾಡಲು ತೀರ್ಮಾನಿಸಲಾಗಿದೆ ಎಂದು ಅವರು ವಿವರಿಸಿದರು. ಎಂ.ಬಿ. ಪಾಟೀಲರು ಪ್ರಸ್ತಾಪಿಸಿರುವ ಬೇಡಿಕೆಗಳು ಸರಿಯಾಗಿವೆ. ಅವರ ಕೋರಿಕೆಯಂತೆ ಬೆಂಗಳೂರು–ಕೋಲಾರ ನಡುವೆ ನೇರ ರೈಲು ಸಂಪರ್ಕ ಕಲ್ಪಿಸಲಾಗುವುದು. ಸದ್ಯಕ್ಕೆ ವೈಟ್ ಫೀಲ್ಡ್ ತನಕ ಇರುವ ನಾಲ್ಕು ಪಥದ ಮಾರ್ಗವನ್ನು ಮುಂದಕ್ಕೂ ಕೊಂಡೊಯ್ಯಲಾಗುವುದು. ಇದಕ್ಕೆ ಬೇಕಾದ ಭೂಸ್ವಾಧೀನವನ್ನು ಕೇಂದ್ರ ಸರ್ಕಾರವೇ ನಡೆಸುತ್ತದೆ ಎಂದು ಅವರು ಭರವಸೆ ನೀಡಿದ್ದಾರೆ.

### ಬೆಂಗಳೂರು–ಮಂಗಳೂರು ಚತುಷ್ಪಥ ಮಾರ್ಗ

ರಾಜಧಾನಿ ಬೆಂಗಳೂರಿನಿಂದ ಕರಾವಳಿಯ ಮಂಗಳೂರಿಗೆ ತ್ವರಿತ ರೈಲು ಸಂಚಾರ ವ್ಯವಸ್ಥೆ ಆಗಬೇಕಿದೆ. ಇದಕ್ಕಾಗಿ ಸಕಲೇಶಪುರ–ಗುಂಡ್ಯ ನಡುವೆ ಸಮಾನಾಂತರವಾಗಿ ರಸ್ತೆ ಮತ್ತು ರೈಲು ಮಾರ್ಗ ಆಗಬೇಕೆಂದು ಪಾಟೀಲ ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಸ್ಪಂದಿಸಿದ ಸೋಮಣ್ಣ ಅವರು ಇದೊಂದು ಉಪಯುಕ್ತ ಸಲಹೆಯಾಗಿದ್ದು, ಈ ಎರಡೂ ನಗರಗಳ ನಡುವೆ ಚತುಷ್ಪಥ ರೈಲು ಮಾರ್ಗ ಅಭಿವೃದ್ಧಿ ಅಗತ್ಯ ಇದೆ. ಬಂದರು ನಗರ ಮಂಗಳೂರಿಗೆ ಸಂಪರ್ಕ ಮಾಡುವುದರಿಂದ ಅನೇಕ ಪ್ರಯೋಜನಗಳು ಆಗಲಿವೆ. ಇದು ಕೂಡ ನಮ್ಮ ಆದ್ಯತೆಯಾಗಿದೆ ಎಂದು ಸೋಮಣ್ಣ ಹೇಳಿದರು. ತುಮಕೂರು– ಚಿತ್ರದುರ್ಗ– ದಾವಣಗೆರೆ ಮಾರ್ಗದಲ್ಲಿ ಭರದಿಂದ ಕಾಮಗಾರಿ ನಡೆಯುತ್ತಿದೆ. ಈಗ ಏಕಪಥವಾಗಿರುವ ಈ ಮಾರ್ಗವನ್ನು ಜೋಡಿಹಳಿ ಮಾಡಬೇಕು ಎಂದು ಪಾಟೀಲರು ಬೇಡಿಕೆ ಇಟ್ಟಿದ್ದಾರೆ. ಇದನ್ನು ಕೂಡ ಪರಿಗಣಿಸಲಾಗುವುದು ಎಂದು ಸೋಮಣ್ಣ ಅವರು ತಿಳಿಸಿದರು.



### ವಿಜಯಪುರಕ್ಕೆ ವಂದೇ ಭಾರತ್ ರೈಲು

ಕಿತ್ತೂರು ಕರ್ನಾಟಕ ಭಾಗದ ವಿಜಯಪುರಕ್ಕೆ ವಂದೇ ಭಾರತ್ ಸ್ಲೀಪರ್ ರೈಲು ಸೇವೆ ಆರಂಭಿಸಬೇಕು ಎನ್ನುವ ಸಚಿವ ಎಂ.ಬಿ.ಪಾಟೀಲ ಅವರ ಬೇಡಿಕೆಗೆ ಸ್ಪಂದಿಸಿದ ಸೋಮಣ್ಣ ಅವರು ಇನ್ನು 3–4 ತಿಂಗಳಲ್ಲಿ ಅದು ನನಸಾಗಲಿದೆ ಎಂದು ಘೋಷಿಸಿದರು. ವಂದೇ ಭಾರತ್ ರೈಲಿಗೆ ಬದಲಾಗಿ ಸ್ಲೀಪರ್ ರೈಲು ಓಡಿಸಲಾಗುವುದು. ಈ ಕುರಿತು ಸದ್ಯದಲ್ಲೇ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದರು.

### ಸಂಸದರ ಮಂಜುನಾಥ್ ಮೆಚ್ಚುಗೆ

ಸಂಸದರಾದ ಡಾ. ಸಿ.ಎನ್. ಮಂಜುನಾಥ್ ಅವರು ಮಾತನಾಡಿ, ಲೆವೆಲ್ ಕ್ರಾಸಿಂಗ್ ಸಂಖ್ಯೆ 47ರ ಬದಲಿಗೆ ರಸ್ತೆ ಮೇಲ್ಸೇತುವೆಯು ಎಲೆಕೇರಿಯಲ್ಲಿ ಅತ್ಯಂತ ಅಗತ್ಯವಿತ್ತು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ 22 ಕೋಟಿ ರೂ. ವೆಚ್ಚದಲ್ಲಿ ಅದನ್ನು ನಿರ್ಮಿಸಲಾಗಿದೆ. ಕಳೆದ ನವೆಂಬರ್‌ನಲ್ಲಿ ಸಾರ್ವಜನಿಕರೆ ಅದನ್ನು ಉದ್ಘಾಟಿಸಿದ್ದು, ಇದೀಗ ಇಲಾಖೆಯಿಂದ ಅಧಿಕೃತವಾಗಿ ಉದ್ಘಾಟನೆಯಾಗಿದೆ, ವಾಹನಗಳ ಓಡಾಟಕ್ಕೆ ಈ ಮೇಲ್ಸೇತುವೆ ಅನುಕೂಲವಾಗಿದ್ದು, ಪ್ರಯಾಣಿಕರ ಓಡಾಟಕ್ಕೆ ಇಲ್ಲಿ ಸ್ಕೈವಾಕ್ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿದೆ, ಕೂಡಲೇ ಕಾಮಗಾರಿ ಪ್ರಾರಂಭಿಸುವಂತೆ ಅವರು ಸಚಿವರಲ್ಲಿ ಮನವಿ ಮಾಡಿದರು.

### ಮೆಮೂ ರೈಲಿಗೆ ಗೊಂಬೆ ಎಕ್ಸ್‌ಪ್ರೆಸ್ ನಾಮಕರಣಕ್ಕೆ ಮನವಿ

ಚನ್ನಪಟ್ಟಣದಿಂದ ಬೆಂಗಳೂರಿಗೆ ಓಡಾಡುವ ಮೆಮೋ ರೈಲಿಗೆ ಗೊಂಬೆ ಅಥವಾ ಬೊಂಬೆ ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡುವಂತೆ ರೈಲ್ವೇ ಸಚಿವರಲ್ಲಿ ಮನವಿ ಮಾಡಿದ ಸಂಸದರು, ಆನೇಕಲ್‌ನ ಲೆವೆಲ್ ಕ್ರಾಸಿಂಗ್ 112ರ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿದರು.

### ಮುದುಗೆರೆ, ವಂದಾರಗುಪ್ಪೆ,

### ಟಿಪ್ಪುನಗರದಲ್ಲಿಯೂ ಮೇಲ್ಸೇತುವೆ ಬೇಕು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಪಿ. ಯೋಗೇಶ್ವರ್ ಮಾತನಾಡಿ, ಮುದುಗೆರೆ, ವಂದಾರಗುಪ್ಪೆ ಹಾಗೂ ಟಿಪ್ಪುನಗರದಲ್ಲಿ ಮೇಲ್ಸೇತುವೆಗಳ ನಿರ್ಮಾಣ ಅಗತ್ಯವಿದೆ, ಈ ಭಾಗಗಳಲ್ಲಿ ವಾಹನ ದಟ್ಟಣೆ ಅಧಿಕವಾಗಿದ್ದು, ಸುಗಮ ಸಂಚಾರದ ಅನುಕೂಲಕ್ಕಾಗಿ ಈ ಮೂರು ಕಡೆಗಳಲ್ಲಿಯೂ ಮೇಲ್ಸೇತುವೆ ನಿರ್ಮಿಸಿಕೊಡುವಂತೆ ಸಚಿವರಲ್ಲಿ ಅವರು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಯಶವಂತ್ ಗುರುಕರ್, ನೈರುತ್ಯ ರೈಲ್ವೆ ಮುಖ್ಯ ಆಡಳಿತಾಧಿಕಾರಿ ಅಭಯ್ ಕುಮಾರ್ ಗುಪ್ತ, ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕ ಪ್ರವೀಣ್ ಕಾತರಕಿ, ಮೂಲಸೌಕರ್ಯ ಇಲಾಖೆ ಜಂಟಿ ಕಾರ್ಯದರ್ಶಿ ಚಂದ್ರಶೇಖರ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಸಚಿವರಿಬ್ಬರು ವಿಶೇಷ ರೈಲಿನಲ್ಲಿ ಪ್ರಯಾಣ:

**ರೈಲ್ವೆ ಮೂಲಸೌಕರ್ಯದ ಗುಣಮಟ್ಟ, ಸುರಕ್ಷತೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಲು ಬಳಸಲಾಗುವ ಸ್ಪಿಕ್ ಎಂಬ ವಿಶೇಷ ರೈಲ್ವೆ ಪರಿಶೀಲನಾ ವಾಹನದಲ್ಲಿ ಇಬ್ಬರೂ ಸಚಿವರು (ಸೋಮಣ್ಣ, ಪಾಟೀಲ) ಪ್ರಯಾಣಿಸಿದರು. ಬೆಂಗಳೂರು ರೈಲ್ವೆ ನಿಲ್ದಾಣದಿಂದ ಚನ್ನಪಟ್ಟಣದವರೆಗೆ ಪ್ರಯಾಣ ಬೆಳೆಸಿದರು. ಬಳಿಕ ಅದೇ ರೈಲಿನಲ್ಲಿ ವಾಪಸ್ಸಾದರು. ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ಪ್ರಗತಿಯಲ್ಲಿರುವ ಹಾಗೂ ಪ್ರಸ್ತಾವಿತ ರೈಲ್ವೆ ಯೋಜನೆಗಳ ಕುರಿತು ಪಾಟೀಲ ಅವರು ರೈಲ್ವೆ ಸಚಿವರ ಜತೆ ಚರ್ಚೆ ನಡೆಸಿದರು. ಈ ಕುರಿತ ಪತ್ರ ಕೂಡ ಪಾಟೀಲ ಅವರು ರೈಲ್ವೆ ಸಚಿವರಿಗೆ ಹಸ್ತಾಂತರ ಮಾಡಿದರು.**

# ಇಂದು ಪ್ರತಿಭಟನಾ ಮೆರವಣಿಗೆ

ಮೈಸೂರು: ಮೈಸೂರು ವಿವಿ ಸಂಶೋಧಕರಿಗೆ ಶಿಷ್ಯ ವೇತನ ನೀಡಲು ಹಾಗೂ ವಿದ್ಯಾರ್ಥಿಗಳ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿವಿಧ ಸಂಘಟನೆಗಳಿಂದ ಜೂ. 30 ರಂದು ಪುರಭವನದಿಂದ ಕ್ರಾಫರ್ಡ್ ಹಾಲ್‌ವರೆಗೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಂಶೋಧನಾ ವಿದ್ಯಾರ್ಥಿ ಮಾದೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈಗಿನ ಕುಲಪತಿ ಪ್ರೊ.ಲೋಕನಾಥ್ ದಲಿತ ವಿರೋಧೀ ನೀತಿ ಅನುಸರಿಸುತ್ತಿದ್ದಾರೆ. ಇದುವರೆಗೆ ಈ ರೀತಿಯ 96 ಅರ್ಜಿ ಬಂದಿದ್ದು, ವಿವಿಯಲ್ಲಿ ಹಣವಿಲ್ಲ. ಹೀಗಾಗಿ ಎಲ್ಲರಿಗೂ ನೀಡಲು ಸಾಧ್ಯವಿಲ್ಲ ಎನ್ನುತ್ತಿದ್ದಾರೆ. ಕೇವಲ 20 ಮಂದಿಗೆ ಮಾತ್ರ ನೀಡಲು ಮುಂದಾಗಿದ್ದಾರೆ. ಇದರಿಂದಾಗಿ ಇತರೆ ಸಂಶೋಧನಾ ವಿದ್ಯಾರ್ಥಿಗಳು ಆರ್ಥಿಕ ಸಂಕಷ್ಟಕ್ಕೆ ಈಡಾಗುವಂತಾಗಿದೆ ಎಂದರು.

ಅಂದಿನ ಪ್ರತಿಭಟನ ಮೆರವಣಿಗೆಯಲ್ಲಿ ವಿವಿಧ ಸಂಘಟನೆಗಳ ಸುಮಾರು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ. ಪುರಭವನದಿಂದ ಹೊರಟ ಪ್ರತಿಭಟನಾ ಮೆರವಣಿಗೆ ವಿವಿಧ ರಸ್ತೆ ಮೂಲಕ ಸಾಗಿ ಕೊನೆಗೆ ಕ್ರಾಫರ್ಡ್ ಭವನ ತಲುಪಿ




ಕುಲಪತಿಗಳಿಗೆ ಹಕ್ಕೊತ್ತಾಯ ಮಂಡಿಸಲಿದೆ. ಕಳೆದ 15 ದಿನಗಳಿಂದ ಕ್ರಾಫರ್ಡ್ ಭವನದ ಎದುರು ಈ ನಿಟ್ಟಿನಲ್ಲಿ ನಡೆಸುತ್ತಿರುವ ಪ್ರತಿಭಟನಾ ಧರಣಿಗೆ ನಿರ್ಲಕ್ಷ್ಯ ತೋರಲಾಗಿದೆ ಎಂದು ಬೇಸರಿಸಿದರು. ಕೂಡಲೇ ಪರಿಶಿಷ್ಟ ಜಾತಿ, ಪಂಗಡದ ಎಲ್ಲ ಸಂಶೋಧಕರಿಗೂ ಶಿಷ್ಯ ವೇತನ ಮಂಜೂರು ಮಾಡಬೇಕು, ಲ್ಯಾಪ್‌ಟಾಪ್ ನೀಡಬೇಕು, ಮಾಸಿಕ ಕೊಠಡಿ ಬಾಡಿಗೆ ರದ್ದುಗೊಳಿಸಬೇಕು, ಭೋಜನ ವ್ಯವಸ್ಥೆ ಹಿಂದಿನಂತೆ ಮುಂದುವರಿಸಬೇಕು, ಮಹಿಳಾ ಸಂಶೋಧಕರಿಗೆ ಪ್ರತ್ಯೇಕ ಕೊಠಡಿ ಕಲ್ಪಿಸಬೇಕು, ಇವರ ಮೇಲಾಗುತ್ತಿರುವ ದೌರ್ಜನ್ಯ ತಪ್ಪಿಸಬೇಕು ಎಂಬಿವೇ ಮೊದಲಾದವು ಬೇಡಿಕೆಗಳಾಗಿವೆ ಎಂದರು. ದಲಿತ ಮುಖಂಡರಾದ ಚೋರನಹಳ್ಳಿ ಶಿವಣ್ಣ, ಅಭಿಷೇಕ್, ಗಿರಿಯಣ್ಣ, ಕುಕ್ಕೂರು ರಾಜು, ಶಿವಕುಮಾರ್ ಇದ್ದರು.

# ಮಡಿಕೇರಿಯಲ್ಲಿ ಪರಿಸರ ದಿನಾಚರಣೆ



**ಮಡಿಕೇರಿ:** ಮಡಿಕೇರಿ ನಗರ ಮಹಿಳಾ ಕಾಂಗ್ರೆಸ್ ವತಿಯಿಂದ ಪರಿಸರದಿನ ಆಚರಿ ಸಲಾಯಿತು. ನಗರದ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಸಿಗಳನ್ನು ನೆಟ್ಟು ಪರಿಸರ ರಕ್ಷಣೆಗೆ ಕರೆ ನೀಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಡಿಕೇರಿ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶಶಿಕಲಾ, ಪರಿಸರ ಉಳಿದರೆ ಮಾತ್ರ ನಾವು ಉಳಿಯಲು ಸಾಧ್ಯ. ಮುಂದಿನ ಪೀಳಿಗೆಯ ಸುಂದರ ಭವಿಷ್ಯಕ್ಕಾಗಿ ಪರಿಸರ ರಕ್ಷಣೆಯ ಹೊಣೆ ನಮ್ಮೆಲ್ಲರ ಮೇಲಿದೆ ಎಂದರು.

ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯ ದರ್ಶಿ ಪವಿತ್ರಾ ಎಸ್., ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಧಾನ ಕಾರ್ಯ ದರ್ಶಿ ಚೇತನ್ ಕೋಚನ, ನಗರಸಭೆಯ ಮಾಜಿ ಅಧ್ಯಕ್ಷೆ ಜುಲೇಕಾಬಿ, ಉಪಾಧ್ಯಕ್ಷೆ ಲೀಲಾ ಶೇಷಮ್ಮ, ಗ್ಯಾರಂಟಿ ಅನುಷ್ಠಾನ ಸಮಿ ತಿಯ ಸದಸ್ಯೆ ಹೊಟ್ಟೆಯಂಡ ಫ್ಯಾನ್ಸಿ ಪಾರ್ವತಿ, ಮೂಡ ಸದಸ್ಯೆ ಮಿನಾಜ್ ಪ್ರವೀಣ್, ಪ್ರಮುಖರಾದ ಧನಲಕ್ಷ್ಮೀ ಪನ್ನು, ಹರಿಣಾಕ್ಷಿ, ರೇವತಿ ರಮೇಶ್, ಪ್ರೇಮ ನಿಂಗಪ್ಪ, ಪ್ರೇಮ ಕಷ್ಣಪ್ಪ, ವಿಮಲಾ, ರೈಸ ಖಾನ್, ತಾಜುನ್ನಿಸ, ರೀನಾ, ಶೈನಾಜ್, ಅರ್ಜುನ್ ಸೂರ್ಯ, ಕಾಲೇಜಿನ ಪ್ರಾಂಶುಪಾಲೆ ವಿಮಲಾ ಇದ್ದರು.

# ಪಕ್ಷಾತೀತ ಸಾಹಿತಿಗಳು ಕ್ಷೀಣ: ಪ್ರೊ.ಜಯಪ್ರಕಾಶಗೌಡ

ಮೈಸೂರು: ಇತ್ತೀಚೀನ ದಿನಗಳಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಪಕ್ಷಾತೀತವಾಗಿ ಚಿಂತೆನ ನಡೆಸುವ ಸಾಹಿತಿಗಳು ಇಲ್ಲವಾಗಿ, ಅಂತಹ ಚಿಂತಕರು ಕ್ಷೀಣಿಸಿದ್ದಾರೆಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶಗೌಡ ಹೇಳಿದರು.

ಕರ್ನಾಟಕ ರಂಗ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ನಗರದ ಕಿರುರಂಗ ಮಂದಿರದಲ್ಲಿ ನಡೆದ ಮೈಸೂರು ವಲಯ ಸಾಂಸ್ಕೃತಿಕ ಸಂಘಟಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಕೆಲವು ಪಟ್ಟಭದ್ರ ಹಿತಾಶಕ್ತಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ಕಾರದಲ್ಲಿ ಸೇರಿಕೊಂಡಿವೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ಸಾಹಿತಿಗಳೂ ಎಂಬಂತೆ ಬಿಂಬಿಸಿಕೊಂಡಿರುವವರೇ ಹೆಚ್ಚಿದ್ದಾರೆ. ಪಕ್ಷಾತೀತವಾಗಿ ಯೋಚನೆ ಮಾಡುವ ಸಾಹಿತಿಗಳು ಎಷ್ಟು ಜನ ಇದ್ದಾರೆ. ಸಾಹಿತ್ಯ ಪರಿಷತ್ತಿನ ಸಂಸ್ಥೆಯಲ್ಲಿ ಹಣ ತಿಂದ ವ್ಯಕ್ತಿಯನ್ನು ಪ್ರಶ್ನೆ ಮಾಡಲು ಹೊರಟಾಗ ಬಂದವರ ಸಂಖ್ಯೆ ಕಡಿಮೆ. ಅಂದರೆ ಕದ್ದವರೇ



ಹೆಚ್ಚಾಗಿದ್ದಾರೆ. ಕೆಲವರು ನಮ್ಮ ಮೇಲೆ ಕೇಸ್ ಹಾಕಿಬಿಡುತ್ತಾರೆ ಎಂದು ಕೆಲವರು ತಪ್ಪಿಸಿಕೊಂಡರೆ, ಕೆಲವರು ಸಭೆಗಳಿಗೆ ಬರಲಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇದ್ದಾರೆ. ಕೆಲವರಿಗೆ ಮಾತ್ರ ಪ್ರವೇಶವಿದೆ. ಇದೆಲ್ಲವನ್ನು ನಾವು ಪ್ರತಿಭಟಿಸಬೇಕೆಂದರೆ ನಾವೆಲ್ಲರೂ ಮೊದಲು ಒಗ್ಗಟ್ಟಾಗಬೆಕು. ಸಂಘಕ್ಕೆ ಶರಣಾಗಬೇಕು. ನಾವು ಸಂಘಕ್ಕೆ ಶರಣಾಗದೆ, ಒಗ್ಗಟ್ಟು ಮೂಡದಿದ್ದರೆ ಸರ್ಕಾರ ನಮ್ಮನ್ನು ಗುಲಾಮರ ರೀತಿಯಲ್ಲಿ ನಡೆಸಿಕೊಳ್ಳುತ್ತದೆ ಎಂದರು.

ಸಂಘಟಕರಲ್ಲಿ ದಿಟ್ಟ ನಿಲುವುಗಳು ಬರಬೇಕು. ಇಲ್ಲದಿದ್ದರೆ ಸಂಘಟಕರು ಉದ್ಧಾರವಾಗುವುದಿಲ್ಲ. ಸಂಘಟಕರ ಸಮಸ್ಯೆಗಳ ಬಗ್ಗೆ ಯಾರೂ ಪ್ರಶ್ನೆ ಮಾಡುವುದಿಲ್ಲ, ಹಣ ಕೊಟ್ಟರೆ ಪ್ರಚಾರ ಮಾಡಿಕೊಡುತ್ತಾರೆ. ಒಬ್ಬ ನಟ, ಸಂಘಟಕ ಮಾಡಿದಂತಹ ನಾಟಕದಲ್ಲಿ ಪಾತ್ರ ಮಾಡಿ ಯಶಸ್ಸುಗಳಿಸುತ್ತಾನೆ. ಒಬ್ಬ ಮೇಕಪ್ ಮ್ಯಾನ್ ಮೇಕಪ್ ಮಾಡಿ ತನ್ನ ಕೂಲಿ ಪಡೆದುಕೊಳ್ಳುತ್ತಾನೆ. ಆದರೆ ಸಂಘಟಕರಿಗೆ ಯಾರು ಜವಾಬ್ದಾರರು? ಅವರ ಸಮಸ್ಯೆಗಳನ್ನೇನಾದರೂ ಅರ್ಥ ಮಾಡಿಕೊಂಡಿದ್ದಾರೆಯೇ ಎಂದು ಪ್ರಶ್ನಿಸಿದರು. ಸಂಘಟಕರ ಯೋಗ್ಯತೆಗೆ ತಕ್ಕಂತೆ ಸರ್ಕಾರ ನಡೆದುಕೊಳ್ಳುತ್ತಿಲ್ಲ. ಸಂಘಟಕರಲ್ಲಿ ಒಗ್ಗಟ್ಟು ಬರಬೇಕು. ಎಲೆಕ್ಟ್ರಾನಿಕ್ ಮಿಡಿಯಾದಲ್ಲಿ ಕಾಣಿಸಿಕೊಳ್ಳಬೇಕೆಂಬ ಪರಿಸ್ಥಿತಿ ನಿರ್ಮಾಣವಾಗಿ ಸಂಘಟಕರು ಹೊಡೆದು ಹಂಚಿಹೋಗಿದ್ದಾರೆ. ಸಂಘಟಕರು ತಮ್ಮನ್ನು ತಾವು ಅರ್ಥ ಮಾಡಿಕೊಳ್ಳದೆ ಹೋದ ಮೇಲೆ, ಸಂಘಟಿಸಿಕೊಳ್ಳದೆ ಹೋದರೆ ಹಾಗೂ ತಮ್ಮನ್ನು ತಾವು ಸಂತೈಸಿಕೊಳ್ಳದೆ ಹೋದರೆ ಯಾವ ಸಮಾವೇಶ ಮಾಡಿದರೆ ಏನು ಪ್ರಯೋಜನ ಎಂದು ಹೇಳಿದರು.

ಸಂಘಟಕರು ಬಲಿಷ್ಠರಾಗದೆ ಹೋದರೆ ಸರ್ಕಾರ ನಮ್ಮ ಮಾತನ್ನು ಕೇಳುವುದಿಲ್ಲ. ಬರಗೂರು ರಾಮಚಂದ್ರಪ್ಪ ಸಾಂಸ್ಕೃತಿಕ ಸಮಿತಿಯನ್ನು ನೇಮಿಸಿದರು. ಅವರು ವರದಿ ಕೊಟ್ಟು ಮನೆಗೆ ಹೋಗಿ ಸೇರಿಕೊಂಡರು. ವರದಿ ಕೊಡುವಾಗ ನಮ್ಮನ್ನೂ ಸಹ ಕರೆದುಕೊಂಡು ಹೋಗಬೇಕಿತ್ತು. ಅವರು ವರದಿಯನ್ನು ಜಾರಿಗೆ ತಂದಿಲ್ಲ. ಕೇಳೋಣ ಬನ್ನಿ ಎಂದು ನಮ್ಮನ್ನು ಕರೆದುಕೊಂಡು ಹೋಗಿದ್ದರೆ ನಾವು ಅವರ ಜತೆ ಹೋಗುತ್ತಿದ್ದೇವು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಭಾಗದ ಅಭಿಯಂತರರ ಅಧ್ಯಕ್ಷ ಹೆಚ್.ಎಸ್.ಸುರೇಶ್ ಬಾಬು, 3ನೇ ಕರ್ನಾಟಕ ಸಂಘಟಕರ ಸಮಾವೇಶದ ಅಧ್ಯಕ್ಷ ರಾಜಶೇಖರ ಕದಂಬ, ಕಾವಾ ಕಾಲೇಜಿನ ಆಡಳಿತಾಧಿಕಾರಿ ನಿರ್ಮಲ ಮಠಪತಿ, ನಟನ ಸಂಸ್ಥಾಪಕ ಮಂಡ್ಯ ರಮೇಶ್, ಸಂಚಲ ಮೈಸೂರು ಅಧ್ಯಕ್ಷ ದೀಪಕ್ ಮೈಸೂರು ಹಾಜರಿದ್ದರು.

# ನಾಳೆಯಿಂದ ಶ್ರೀಚಾಮುಂಡೇಶ್ವರಿ ದೇವಾಲಯ ಲೋಕಾರ್ಪಣೆ ಕಾರ್ಯಕ್ರಮ

ಎಚ್.ಡಿ.ಕೋಟೆ: ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ನಾಡಿನ ಅಧಿದೇವತೆ ಶ್ರೀಚಾಮುಂಡೇಶ್ವರಿ ಅಮ್ಮನವರ ದೇವಾಲಯ ಮತ್ತು ವಿಗ್ರಹ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮವು ಜು.1ರ ಬುಧವಾರದಿಂದ ಜು.3ರ ಶುಕ್ರವಾರದವರೆಗೆ ವಿವಿಧ ಪೂಜಾ ಕೈಂಕರ್ಯಗಳೊಂದಿಗೆ ವಿಜಭಣೆಯಿಂದ ನೆರವೇರಲಿದೆ ಎಂದು ದೇವಸ್ಥಾನ ಸೇವಾ ಟ್ರಸ್ಟ್ ಗೌರವ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ತಿಳಿಸಿದರು.



ದೇವಾಲಯದ ಆವರಣದಲ್ಲಿ ಟ್ರಸ್ಟಿನ ಸದಸ್ಯರೊಂದಿಗೆ ಆಹ್ವಾನ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿ, ಬುಧವಾರ ಬೆ.5.40 ರಿಂದ 6:30ರವರೆಗೆ ಸಲ್ಲುವ ಶುಭ ಲಗ್ನದಲ್ಲಿ ರಾಮಲಿಂಗೇಶ್ವರ ದೇವಾಲಯದ ಸಮೀಪ ಹರಿಯುವ ತಾರಕ ನದಿಯಲ್ಲಿ ಗಂಗೆ ತಂದು, ಗಣಪತಿ ಪೂಜೆ ಹೋಮದ ಮೂಲಕ ಹಸು,ಕರು ಸಮೇತ ಅಗ್ರತೀರ್ಥ ಸಹಿತ ಯಾಗಾಶಾಲಾ ಪ್ರವೇಶದ ಮೂಲಕ ಉದ್ಘಾಟನೆಗೆ ಚಾಲನೆ ನೀಡಲಾಗುವುದು ಪುಣ್ಯಾಹ, ದೇವನಾಂದಿ, ಪಂಚಗವ್ಯಾರಾಧನೆ, ಪ್ರೋಕ್ಷಣೆ, ಪ್ರಾಶನ, ರಕ್ಷಾಪೂಜೆ-ಬಂಧನ, ಅಚಾರ್ಯಾದಿವರಣ, ಗಣಪತಿ ಪೂಜೆ, ಹೋಮ, ಪೂರ್ಣಾಹುತಿ, ಅಂಕುರಾರ್ಪಣೆ ಪೂಜೆಗಳನ್ನು ನೆರವೇರಿಸಲಾಗುವುದು. ಜು.2 ಮತ್ತು 3ರಂದು ಬೆಳಗ್ಗೆಯಿಂದ ರಾತ್ರಿವರೆಗೂ ಹಲವು ಪೂಜಾಧಿಗಳು ಮೈಸೂರಿನ ನಿವೃತ್ತ ಶೈವಾಗಮ ಪ್ರಾಧ್ಯಾಪಕ ವಿದ್ವಾನ್ ಡಾ.ಎಂ.ಮಲ್ಲಣ್ಣ ಅವರ ಮಾರ್ಗದರ್ಶನದಲ್ಲಿ ನಡೆಯಲಿವೆ ಎಂದರು.

ಗುರುವಾರ ಸ.7ಗಂಟೆಗೆ ಮೈಸೂರಿನ ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದ ವಿದ್ವಾನ್ ಎಚ್.ಎಲ್.ಶಿವಶಂಕರಸ್ವಾಮಿ ತಂಡದವರು ಭಕ್ತಿಗೀತೆಗಳನ್ನು ಹಾಡಲಿದ್ದಾರೆ. ಕಲಾರ್ಪಣಂ ಗ್ರೂಪ್ ಆಫ್ ಡ್ಯಾನ್ಸ್ ಮೈಸೂರು ಮತ್ತು ನೃತ್ಯ ಪಲ್ಲವ ಕಲಾ ಮತ್ತು ಸಾಂಸ್ಕೃತಿಕ ಹೆಚ್.ಡಿ.ಕೋಟೆ ತಂಡದವರು ಶುಕ್ರವಾರ ಸ.7ಗಂಟೆಗೆ ಕಾರ್ಯಕ್ರಮ ನಡೆಸಿಕೊಡುವರು. ಅಂದು ರಾತ್ರಿ 9 ಗಂಟೆಗೆ ಚಾಮುಂಡೇಶ್ವರಿ ಕೃಪಾಪೋಷಿತ ನಾಟಕ ಮಂಡಳಿ ಅವರು ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕ ಪ್ರದರ್ಶಿಸುವರು ಎಂದು ಮಾಹಿತಿ ನೀಡಿದರು.

ಟ್ರಸ್ಟಿನ ಖಜಾಂಚಿ ನಾಗಣ್ಣ ಮಾತನಾಡಿ, ದೇವಾಲಯದ ಪುನರ್ ನಿರ್ಮಾಣಕ್ಕಾಗಿ ಟ್ರಸ್ಟಿನ ಪ್ರತಿಯೊಬ್ಬರೂ ತಲಾ ಒಂದು ಲಕ್ಷ ರೂ. ದೇಣಿಗೆ ನೀಡಿದ್ದೇವೆ. ನ.16ರಂದು ಭೂಮಿ ಪೂಜೆ ನೆರವೇರಿಸಿ, 19 ರಂದು ಕೆಲಸ ಪ್ರಾರಂಭಿಸಿದೆವು. ಯಾರಿಂದಲೂ ನಾವು ವಂತಿಗೆ ಸಂಗ್ರಹಿಸಿಲ್ಲ. ದಾನಿಗಳೇ ಸ್ವಯಂ ಪ್ರೇರಿತರಾಗಿ ಇಟ್ಟಿಗೆ, ಸಿಮೆಂಟ್, ಕಬ್ಬಿಣ ಹೀಗೆ ನಿರ್ಮಾಣಕ್ಕೆ ಬೇಕಾದ ವಸ್ತುಗಳನ್ನು ನೀಡಿ ನೆರವಾಗಿದ್ದಾರೆ ಎಂದು ಹೇಳಿದರು. 65 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ದೇವಾಲಯಕ್ಕೆ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಅವರು 2 ಲಕ್ಷ ರೂ. ತಾಲೂಕಿನ ರಜಪೂತ ಸಂಘದವರು 3 ಲಕ್ಷ ರೂ. ತಮಿಳು ಸಮಾಜ 1 ಲಕ್ಷ ರೂ. ಸೇರಿದಂತೆ ಶಾಸಕ ಅನಿಲ್ ಚಿಕ್ಕಮಾದು ಹಾಗೂ ದಾನಿಗಳು ದೇಣಿಗೆ ನೀಡಿದ್ದಾರೆ. ಚಿಕ್ಕದಾಗಿದ್ದ ದೇವಾಲಯವನ್ನು ವಿಸ್ತಾರಗೊಳಿಸಲು ನಿವೇಶನದ ವಿಚಾರದಲ್ಲಿ ಸಹಾಯ ಮಾಡಿದ ಎಂ.ಸಿ.ದೊಡ್ಡನಾಯಕ ಹಾಗೂ ಉದ್ಘಾಟನೆಯ ಮೂರು ದಿನಗಳ ಅನ್ನದಾನದ ಜವಾಬ್ದಾರಿ ಹೊತ್ತಿರುವ ಬೆಂಗಳೂರಿನ ಉದ್ಯಮಿ ಬಿ.ಜೆ.ವಿಜಯ್ ಕುಮಾರ್ ಗೆ ಧನ್ಯವಾದ ತಿಳಿಸಿದರು.

ಟ್ರಸ್ಟ್ ಅಧ್ಯಕ್ಷ ಆರ್.ನಟರಾಜ್ ಮಾತನಾಡಿ, ಶುಕ್ರವಾರ ದೇವಸ್ಥಾನ ಲೋಕಾರ್ಪಣೆ ಹಾಗೂ ಗೋಪುರದ ಕಳಸಾರೋಹಣವನ್ನು ಶ್ರೀಕ್ಷೇತ್ರ ಸುತ್ತೂರಿನ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಮೈಸೂರು ಶಾಖೆಯ ಸೋಮೇಶ್ವರನಾಥ ಸ್ವಾಮೀಜಿ, ಬಿಡುಗಲು ಪಡವಲು ವಿರಕ್ತ ಮಠದ ಮಹದೇವಸ್ವಾಮೀಜಿ, ಮೈಸೂರಿನ ಮಹಾರಾಜ ಯದುವೀರ ಕೃಷ್ಣದತ್ತ ಚಾಮರಾಜ



ಒಡೆಯರ್ ನೆರವೇರಿಸಿಕೊಡಲಿದ್ದಾರೆ. ಶಾಸಕ ಅನಿಲ್ ಚಿಕ್ಕಮಾದು, ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಸಂಸದ ಸುನೀಲ್ ಬೋಸ್, ಮಾಜಿ ಸಚಿವರಾದ ಎಂ.ಶಿವಣ್ಣ, ಎಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಕ್ಷೇತ್ರದ ಗಣ್ಯರು ಹಾಗೂ ಅನೇಕರು ಭಾಗವಹಿಸುವರು ಎಂದರು. ನಿರ್ದೇಶಕರಾದ ರಮೇಶ್, ನಾಗೇಗೌಡ, ಸ್ಟುಡಿಯೋ ಪ್ರಕಾಶ್, ಆರ್.ರಾಮಯ್ಯ, ಅಭಿಯಂತರ ರಾಮಸ್ವಾಮಿ, ದೇವಾಲಯದ ಅರ್ಚಕ ಸತೀಶ್ ಸೇರಿದಂತೆ ಮತ್ತಿತರರಿದ್ದಾರೆ.

## ಶಿಕ್ಷಕ ಸಮಾಜವನ್ನು ಸೃಷ್ಟಿಸುವ ಶಿಲ್ಪಿ: ಡಯಟ್ ಪ್ರಾಂಶುಪಾಲ ಎಂ.ಕಾಶೀನಾಥ್



ಚಾಮರಾಜನಗರ, ಗುರುನಮನ, ನಿವೃತ್ತ ಅಧಿ ಕಾರಿಗಳಿಗೆ ಗೌರವ ಸಮರ್ಪಣೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿ ನಗರದ ನಂದಿಭವನ ಫಂಕ್ಷನ್ ಹಾಲ್‌ನಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಡಯಟ್ ಪ್ರಾಂಶುಪಾಲ ಎಂ.ಕಾಶೀನಾಥ್ ಮಾತನಾಡಿ, ಶಿಕ್ಷಕ ವೇತನಕ್ಕಾಗಿ ಪಾಠ ಮಾಡುವ ಸರ್ಕಾರಿ ನೌಕರ ಎಂದು ತಿಳಿದುಕೊಂಡಿದ್ದಾರೆ. ಆದರೆ ಇಂತಹ ಕಾರ್ಯಗಳ ಮೂಲಕ ಶಿಕ್ಷಕ ಏನು?, ಸಮಾಜಕ್ಕೆ ಅವನ ಕಾಣಿಕೆ ಏನು ? ಮತ್ತು ಅವನ ಪಾತ್ರವೇನು ಎಂತಹ ಮಹತ್ವದ್ದು ಅನ್ನುವುದನ್ನು ಅರಿವು ಮಾಡುವುದಕ್ಕೆ ಶಿಕ್ಷಕರಾಗಿ. ಸಮಾಜಕ್ಕೆ ಸಂಪೂರ್ಣ ಸೇವೆ ಸಲ್ಲಿಸಿ ವೇದಿಕೆ ಮೇಲಿ ಆಸೀನರಾಗಿರುವ ಶಿಕ್ಷಕರು ,ಅಧಿಕಾರಿಗಳೇ ಸಾಕ್ಷಿಯಾಗಿದ್ದಾರೆ ಎಂದರು. ಶಿಕ್ಷಕ ಒಂದು ಸಮಾಜದ ಶಿಲ್ಪಿ, ಈ ಸಮಾಜವನ್ನು ಸರಿಗೆ ದಾರಿಗೆ ತರಬೇಕಾದರೆ, ಸಮಾಜದ ಅಂಕು-ಡೊಂಕು ಗಳನ್ನು ತಿದ್ದಬೇಕಾದರೆ ಪ್ರಾಥಮಿಕ ಹಂತದಲ್ಲೇ ಅವರಿಗೆ ಬೇಕಾಗಿರುವ ಸಾಂಸ್ಕೃತಿಕ ಹಿನ್ನಲೆಯಲ್ಲಿ

ಅವರ ಬದುಕಿಗೆ ಮೌಲ್ಯಗಳನ್ನು ರೂಪಿಸಿಕೊಡುವ ಮಹತ್ತರವಾದಂತಹ ಕೆಲಸ ಶಿಕ್ಷಕರಾಗಿ ನಾವು ಮಾಡಬೇಕಿದೆ ಎಂದರು.

ಕಲಬುರಗಿ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಪ್ರವಾಚಕ ಯು.ಆರ್.ಲಿಂಗರಾಜೇಅರಸ್ ಪ್ರೇರಣಾತ್ಮಕವಾಗಿ ಮಾತನಾಡಿ. ನಿವೃತ್ತಿ ಹೊಂದಿದ ಮೇಲೆ ನಮಸ್ಕಾರ ಮಾಡುವುದರಲ್ಲಿ ಇರುವ ಪ್ರೀತಿ. ನಿವೃತ್ತಿಗೂ ಮುನ್ನಾ ಮಾಡುವ ನಮಸ್ಕಾರದಲ್ಲಿ ಇರುವುದಿಲ್ಲ ಏಕೆಂದರೆ ಅದು ಪೀಠಕ್ಕೆ ಕೊಡುವ ನಮಸ್ಕಾರವಾಗಿದೆ. ಇವತ್ತು ನಿಮಗೆ ಗೌರವ ಸಿಗುತ್ತಿದೆ ಎಂದರೆ ಅದು ಕೇವಲ ನಾವು ನಿರ್ವಹಿಸುತ್ತಿರುವ ವೃತ್ತಿ. ಸರ್ಕಾರ ಕೊಟ್ಟಿರುವ ಕೆಲಸ ಅ ಕೆಲಸದಿಂದ ನಮಗೆ ಮಾರ್ಯಾದೆ ಹೊರತು ಅವರು ಕೈ ಮುಗಿತಿರುವುದು ನನಗೆ ಎಂದು ತಿಳಿದುಕೊಂಡರೆ ಅದು ಭ್ರಮೆ ಅನ್ನಿಸುತ್ತದೆ. ಆದ್ದರಿಂದ ವೃತ್ತಿಯನ್ನು ಪ್ರೀತಿಸಬೇಕು. ವಿಷಯವನ್ನು ಆಳವಾಗಿ ಅಧ್ಯಯನ ಮಾಡಬೇಕು ಒಂದು ವೃತ್ತಿಯನ್ನು ಗೌರವಿಸಬೇಕು. ಭೋದನಾ ವಿಷಯವನ್ನು ಪ್ರೀತಿಸಬೇಕು ಎಂದರು.

ಕಾರ್ಯಕ್ರಮ ಆಯೋಜಕ ಸಿದ್ದರಾಜು ಮಾತನಾಡಿ ತಂದೆ-ತಾಯಿಯನ್ನು ಸ್ಮರಿಸುತ್ತಾ ಇಂದು ಶಿಕ್ಷಕನಾಗಿ ಸಮಾಜದ ಮುಂದೆ ನಿಲ್ಲಲು ಸಾಧ್ಯವಾಗಿದ್ದರೆ. ಅದರ ಹಿಂದೆ ತಂದೆತಾಯಿಯ ಅಪಾರ ತ್ಯಾಗ, ಪ್ರೀತಿ ಇದ್ದೆ ಇರುತ್ತದೆ ಅದರ ಜೊತೆಗೆ ನನ್ನ ಭವಿಷ್ಯಕ್ಕಾಗಿ ಹಗಲಿರುಳು ಶ್ರಮಿಸಿರುವುದು ನನಗೆ ಧೈಯವಾಗಿದೆ ಅವರು ಕೇವಲ ಶಿಕ್ಷಣವನ್ನ ಕೊಡಲಿಲ್ಲ. ಶಿಕ್ಷಣದ ಮಹತ್ವವನ್ನು ಬದುಕಿನ ಮೂಲಕ ಕಲಿಸಿಕೊಟ್ಟರು ಎಂದು ಸ್ಮರಿಸಿದರು. ಗೌರವ ಸಮರ್ಪಣೆ : ನಿವೃತ್ತ ಉಪನಿರ್ದೇಶಕರಾದ ಎನ್.ಚಂದ್ರೇಗೌಡ, ಯೋಜನಾ ಎಸ್.ಎಸ್. ಮಂಜುನಾಥ್, ಹೆಚ್.ಟಿ.ಮಂಜುನಾಥ್, ಜಿಲ್ಲಾ ಸಮನ್ವಯಾಧಿಕಾರಿ ಪಿ.ಮಂಜುನಾಥ್, ಹಿರಿಯ ಉಪನ್ಯಾಸಕರಾದ ಸಿದ್ದರಾಜಾಚಾರ್, ಬಿ.ಎಸ್.ಕೆಂಪಲಿಂಗಪ್ಪ, ನಿವೃತ್ತ ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿ ಶಿವಕುಮಾರ್. ನಿವೃತ್ತ ಶಿಕ್ಷಣಾಧಿ ಕಾರಿಗಳಾದ ಅಂದಾನಿ, ಸೋಮಣ್ಣೆಗೌಡ, ನಿವೃತ್ತ ಮುಖ್ಯಶಿಕ್ಷಕರಾದ ಹೆಚ್.ಸಿ.ಮಾದಪ್ಪ, ಶಿವಲಿಂಗಪ್ಪ, ಶ್ರೀರಾಮಚಂದ್ರ ಪ್ರಶಿಕ್ಷಣ ಸಂಸ್ಥೆ ನಿವೃತ್ತ ಅಧೀಕ್ಷಕ ಆರ್.ಮರಿಮಾದಯ್ಯ, ನಿವೃತ್ತ ಶಿಕ್ಷಕ ಎಸ್.ಸಿ.ಚಿನ್ನಸ್ವಾಮಿ. ನಿವೃತ್ತ ಸಂಗೀತ ಶಿಕ್ಷಕ ಶಶಿಕಲಾ, ನಿವೃತ್ತ ಶಿಕ್ಷಕ ಕೆ.ಎಸ್.ಮಹದೇವಸ್ವಾಮಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ದೀನಬಂಧು ಟ್ರಸ್ಟ್ ಗೌರವ ಕಾರ್ಯದರ್ಶಿ ಜಿ.ಎಸ್.ಜಯದೇವ ಅಧ್ಯಕ್ಷತೆ ವಹಿಸಿದ್ದರು. ಮೈಸೂರಿನ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಪ್ರವಾಚಕ ಎನ್.ಲಕ್ಷ್ಮೀಪತಿ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ರಾಜೀವ್ ಹಾಗೂ ಶಿಕ್ಷಕರು ಹಾಜರಿದ್ದರು.

# ಛಾತ್ರೋಣ್ ಕಿ ಗೂಂಜ್ ಅಭಿಯಾನ

## ಕಾಂಗ್ರೆಸ್ ನೇತೃತ್ವದಲ್ಲಿ ಆಯೋಜನೆ : ಪಿ.ಆರ್.ರಮೇಶ್



ರಾಮನಗರ: ನೀಟ್ ಪ್ರಶ್ನೆ ಪತ್ರಿಕೆಗಳ ಸೋರಿಕೆಯಾಗಿವೆ. ಇದು ಕೇಂದ್ರ ಸರ್ಕಾರದ ವೈಫಲ್ಯಕ್ಕೆ ನಿದರ್ಶನ. ವೈಫಲ್ಯದ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಕೊಡಬೇಕು. ದೇಶದ ಪರೀಕ್ಷಾ ವ್ಯವಸ್ಥೆಯ ಸಮಗ್ರ ಕೂಲಂಕುಷ ತನಿಖೆಗೆ ಒತ್ತಾಯಿಸಿ ಕಾಂಗ್ರೆಸ್ ರಾಷ್ಟ್ರ ವ್ಯಾಪ್ತಿ ನಡೆಸುತ್ತಿರುವ ಛಾತ್ರೋನ್ ಕಿ ಗೂಂಜ್ ಅಭಿಯಾನವನ್ನು ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿಯೂ ಕೈಗೊಳ್ಳಲಾಗುತ್ತಿದ್ದು, ಜಿಲ್ಲೆಯ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ಆರ್.ರಮೇಶ್ ತಿಳಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಜೂನ್ 25ರಿಂದ ಅಭಿಯಾನ ಆರಂಭವಾಗಿದೆ. ಆಗಸ್ಟ್ 9ರವರೆಗೆ 40 ದಿನ ದೇಶದಾದ್ಯಂತ ನಡೆಯಲಿದೆ. ಈ ಅಭಿಯಾನದಲ್ಲಿ ಕರ್ನಾಟಕದ ಪ್ರತಿಯೊಂದು ಜಿಲ್ಲೆಗಳಲ್ಲಿ ನೀಟ್ ಪರೀಕ್ಷೆಯಲ್ಲಿ ತೊಂದರೆ ಅನುಭವಿಸಿರುವ ವಿದ್ಯಾರ್ಥಿಗಳು ಭಾಗಿಯಾಗಬೇಕು ಎಂದರು. ನೀಟ್ ಪರೀಕ್ಷೆಯನ್ನು ಜಾರಿಗೆ ತಂದ ಕೇಂದ್ರ ಸರ್ಕಾರ ಅದನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ. ಕಳೆದ 10 ವರ್ಷಗಳಲ್ಲಿ 89 ಬಾರಿ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿ ಅವ್ಯವಹಾರ ನಡೆದಿದೆ ಎಂದು ದೂರಿದರು. ಸುಮಾರು 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಖಿನ್ನತೆಗೆ ಒಳಗಾಗಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದಕ್ಕೆಲ್ಲ ಯಾರು ಹೊಣೆಗಾರರು ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಗಂಗಾಧರ್ , ಜಿಲ್ಲಾ ಮಹಿಳಾ ಘಟಕ ಅಧ್ಯಕ್ಷೆ ಕೋಕಿಲಾ ರಾಣಿ, ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ವಿನೋದ್ ಕುಮಾರ್, ಪದಾಧಿಕಾರಿಗಳಾದ ಸುಫಿಯಾ, ಪ್ರವೀಣ್, ಪುನೀತ್, ಆದರ್ಶ, ಮುಖಂಡರಾದ ಸಿಎನ್ ಆರ್ ವೆಂಕಟೇಶ್ , ಕಾಂತರಾಜು, ವೆಂಕಟೇಶ್ , ಪೂರ್ಣಚಂದ್ರ ಕೀಕರ್ ಇದ್ದರು.

### ಅಭಿಯಾನದಲ್ಲಿ ರಾಹುಲ್ ಭಾಗಿ

**ಹಲವು ವರ್ಷಗಳ ಸಿದ್ಧತೆಯ ಬಳಿಕ ಸುಮಾರು 23 ಲಕ್ಷ ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಹಾಜರಾಗಿದ್ದಾರೆ. ಇದು ಕಠಿಣ ಮತ್ತು ಮಹತ್ವದ ಪರೀಕ್ಷೆಯಾಗಿದ್ದರೂ, ಅದನ್ನು ಸಮರ್ಪಕವಾಗಿ ನಡೆಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ವ್ಯವಸ್ಥೆಯ ಮೇಲಿನ ವಿದ್ಯಾರ್ಥಿಗಳ ನಂಬಿಕೆಯನ್ನು ಕುಗ್ಗಿಸಿದೆ ಎಂದರು. ಛಾತ್ರೋಂ ಕಿ ಗೂಂಜ್ ಅಭಿಯಾನವು ಪಕ್ಷಾತೀತವಾಗಿ ದೇಶದಾದ್ಯಂತ 28 ನಗರಗಳಲ್ಲಿ ನಡೆಯಲಿದ್ದು, 28 ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಅದರಂತೆ, ಬೆಂಗಳೂರಿನಲ್ಲಿ ಅಭಿಯಾನದ ಜವಾಬ್ದಾರಿ ಯುವ ಕಾಂಗ್ರೆಸ್‌ಗೆ ವಹಿಸಲಾಗಿದೆ. ಅಭಿಯಾನದ ಭಾಗವಾಗಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಶೀಘ್ರದಲ್ಲಿ ಬೆಂಗಳೂರಿಗೆ ಬರಲಿದ್ದಾರೆ ಎಂದರು.**

**ಅಭಿಯಾನದ ಪ್ರತಿ ವಾರಾಂತ್ಯದಲ್ಲಿ ಪಂಜಿನ ಮೆರವಣಿಗೆ, ಸಂವಾದ ಕಾರ್ಯಕ್ರಮ, ನೀಟ್ ವಿರೋಧಿ ಸಂಗೀತ ಕಛೇರಿ, ವಾಕಥಾನ್ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಈ ಕುರಿತು ಶಾಸಕರ ಭವನದಲ್ಲಿ ಎಲ್ಲಾ ವಿದ್ಯಾರ್ಥಿಗಳ ಸಂಘಟನೆಗಳ ಜೊತೆ ಶನಿವಾರ ಸಭೆ ನಡೆಯಲಿದೆ. ಎಲ್ಲಾ ವಿಶ್ವವಿದ್ಯಾಲಯ, ಕಾಲೇಜುಗಳ ಪ್ರತಿ ತರಗತಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ನೋಂದಣಿ ಮಾಡಿಸಲಾಗುವುದು. ಆ ಮೂಲಕ ರಾಹುಲ್ ಗಾಂಧಿರವರು ವಿದ್ಯಾರ್ಥಿಗಳ ಪರ ಇದ್ದಾರೆ ಎಂಬ ಸಂದೇಶ ರವಾನಿಸಲಾಗುವುದು ಎಂದು ರಮೇಶ್ ತಿಳಿಸಿದರು.**

## ಜು.1ರಂದು ಯುವ ಸೌರಭ 2026 ಕಾರ್ಯಕ್ರಮ

ಮೈಸೂರು:- ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ಮೈಸೂರು ಇವರ ಸಹಯೋಗದಲ್ಲಿ ಯುವ ಸೌರಭ 2026 ಕಾರ್ಯಕ್ರಮವನ್ನು ಜುಲೈ 01 ರಂದು ಬೆಳಗ್ಗೆ 10:30 ಗಂಟೆಗೆ ಕೆ.ಎಸ್.ಜಿ.ಎಚ್ ರಂಗಮಂದಿರ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾ ಲಯ, ಅಶೋಕವೃತ್ತ (ಬಲ್ಲಾಳ್), ಮೈಸೂರು ಇಲ್ಲಿ ಆಯೋಜಿಸಲಾಗಿದೆ.

ಉಕ್ಕು ಮತ್ತು ಕೈಗಾರಿಕ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ, ನಿಕಟ ಪೂರ್ವ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಘನ ಉಪಸ್ಥಿತಿಯಲ್ಲಿ ನಗರಾಭಿವೃದ್ಧಿ ಸಚಿವರಾದ ಡಾ. ಯತೀಂದ್ರ .ಎಸ್ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಲಿದ್ದಾರೆ. ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಟಿ.ಎಸ್. ಶ್ರೀವತ್ಸ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಅನಿಲ್ ಕುಮಾರ್ ಸಿ., ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷರಾದ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಅವರು ಗೌರವ ಉಪಸ್ಥಿತರಿರಲಿದ್ದಾರೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚಾಮರಾಜ ನಗರ ಲೋಕಸಭಾ ಕ್ಷೇತ್ರದ ಸಂಸದರಾದ ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ರಾಮಪ್ಪ ಎಂ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಅಧ್ಯಕ್ಷರಾದ ಹೆಚ್. ಡಿ. ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದ ಎನ್. ರಂಗಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ. ಪುಷ್ಪ ಅಮರನಾಥ್ ಆಗಮಿಸಲಿದ್ದಾರೆ.

## ಶಿಂಡನಪುರದಲ್ಲಿ ಕಬಿನಿ ನೀರಿನ ವ್ಯತ್ಯಯ

ಗುಂಡ್ಲುಪೇಟೆ: ತಾಲೂಕಿನ ಶಿಂಡನಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಳೆದ ಒಂದು ವಾರದಿಂದ ಕಬಿನಿ ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುವ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ತೀವ್ರ ನೀರಿನ ಸಮಸ್ಯೆ ಎದುರಾಗಿದೆ.

ನೀರು ಸರಬರಾಜು ಸ್ಥಗಿತಗೊಂಡ ಪರಿಣಾಮ ಗ್ರಾಮಸ್ಥರು ಕುಡಿಯುವ ನೀರಿಗಾಗಿ ಪರದಾಡುವಂತಾಗಿದ್ದು, ಜಾನುವಾರುಗಳಿಗೂ ನೀರಿನ ಕೊರತೆ ಎದುರಾಗಿದೆ. ಸಮಸ್ಯೆ ಗಂಭೀರವಾಗುತ್ತಿದ್ದಂತೆ ಗ್ರಾಮ ಪಂಚಾಯಿತಿ ವತಿಯಿಂದ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿ ತಾತ್ಕಾಲಿಕ ಪರಿಹಾರ ಒದಗಿಸಲಾಗಿದೆ.

ಆದರೆ ಟ್ಯಾಂಕರ್ ನೀರು ಮಾತ್ರ ಶಾಶ್ವತ ಪರಿಹಾರವಲ್ಲ ಎಂದು ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದ್ದು, ಕಬಿನಿ ನೀರು ಸರಬರಾಜನ್ನು ಶೀಘ್ರವೇ ಪುನರಾರಂಭಿಸಿ ಗ್ರಾಮಕ್ಕೆ ನಿಯಮಿತವಾಗಿ ಕುಡಿಯುವ ನೀರು ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಮುಂದುವರಿದರೆ ಜನರು ಹಾಗೂ ಜಾನುವಾರುಗಳು ಇನ್ನಷ್ಟು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದ್ದು, ಸಂಬಂಧಪಟ್ಟ ಇಲಾಖೆ ತ್ವರಿತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



**ಕಬಿನಿ ಕುಡಿಯುವ ನೀರಿನ ಸರಬರಾಜಿನಲ್ಲಿ ಸ್ವಲ್ಪ ತೊಂದರೆಯಾಗಿದ್ದು, ಸುಮಾರು ಐದು ದಿನಗಳಿಂದ ಶಿಂಡನಪುರ ಗ್ರಾಮಕ್ಕೆ ಕುಡಿಯುವ ನೀರಿನಲ್ಲಿ ವ್ಯತ್ಯಯ ಉಂಟಾಗಿದ್ದು, ಹಾಗೆಯೇ ಅಂತರ್ಜಲದ ಕುಸಿತದಿಂದ ಬೋರ್ ವೆಲ್ ಗಳಲ್ಲಿ ನೀರು ಸಹ ಕಡಿಮೆ ಆಗಿರುವ ಕಾರಣ ಕುಡಿಯುವ ನೀರು ಪೂರೈಸುವಲ್ಲಿ ವ್ಯತ್ಯಯ ಉಂಟಾಗಿದೆ. ತಕ್ಷಣ ಕ್ರಮವಹಿಸಲಾಗುವುದು.**

▸▸ **ಶೋಭಾ** ಶಿಂಡನಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ

## ಕಲೆ,ಸಂಸ್ಕೃತಿ,ಪರಂಪರೆ ಉಳಿಸೋಣ



ಚಾಮರಾಜನಗರ, ಜಿಲ್ಲೆಯ ಯಳಂದೂರು ಪಟ್ಟಣದಲ್ಲಿ ಭಾನುವಾರ ನಡೆದ ಏ ರಿಚ್ ಫೌಂಡೇಶನ್, ಪ್ರಾಚ್ಯವಸ್ತು, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ, ಅಭ್ಯಾಸಿ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಜಲವರ್ಣ ಶಿಬಿರ ನಡೆಯಿತು.

ಮೈಸೂರು ಸಾಂಪ್ರದಾಯಿಕ ಶೈಲಿ ಕಲಾವಿದರಾದ ಶ್ರೀಹರಿ ಕೆ.ಎಸ್. ಅವರು ಮಾತನಾಡಿ, "ಕಲೆ-ಸಂಸ್ಕೃತಿ-ಪರಂಪರೆ ಉಳಿಸುವ ಕೆಲಸ ಯಳಂದೂರಿನಂತಹ ಪಟ್ಟಣದಲ್ಲಿ ಸಾಧ್ಯವಾಗಿಸಿದ್ದು ಶ್ಲಾಘನೀಯ ಎಂದು ಹೇಳಿದರು.

ಇಂತಹ ಕಲಾ ಶಿಬಿರಗಳು ನಡೆಯುವುದರಿಂದ ಇಲ್ಲಿನ ಕಲೆ-ಸಂಸ್ಕೃತಿ ಪರಂಪರೆಗೆ ಹೆಚ್ಚಿನ ಮನ್ನಣೆ ಸಿಗಲಿದೆ. ಸಮಾಜದಲ್ಲಿ ಜಾಗೃತಿ ಮೂಡಲಿದೆ. ಇನ್ನಷ್ಟು ಶಿಬಿರಗಳು ನಡೆಯಬೇಕು. ಇದಕ್ಕೆ ಇಲ್ಲಿನ ಕಲಾ ಸಮುದಾಯ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಅಭ್ಯಾಸಿ ಟ್ರಸ್ಟ್ ಸಂಸ್ಥಾಪಕರಾದ ಕಿರಣ್ ಗಿರ್ಗಿ ಮಾತನಾಡಿ, "ಕಲೆ, ಕಲಾವಿದರ ಸಂಗಮ ಇಂತಹ ಕಾರ್ಯಕ್ರಮಗಳಿಂದ ಸಾಧ್ಯವಾಗಲಿದೆ ಎಂದರು. ಹವ್ಯಾಸಿ ಟ್ರಸ್ಟ್ ರಂಗ ಕಲಾವಿದರು ಬಳೆ ಮಂಟಪದ ಎದುರು ಪರಿಸರ ಜಾಗೃತಿ ಮೂಡಿಸುವ 'ನೆಲ ತಾಯಿ' ಗೀತಗಾಯನ' ಕಾರ್ಯಕ್ರಮ ಸಭಿಕರನ್ನು ರಂಜಿಸಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿವಿಧ ಗಣ್ಯರು ಉಪಸ್ಥಿತರಿದ್ದರು. ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

**ಡಾರ್ಕ್‌ವೆಬ್ ಮೂಲಕ ಅಂಬು ನಾಥನ್ ಅರಿಯಪ್ಪನ್ ಎಂಬಾತನ ಹೆಸರಿನಲ್ಲಿ ಇ -ಮೇಲ್**


# ಚಾಮರಾಜನಗರ ನ್ಯಾಯಾಲಯಕ್ಕೆ ಕೆಮಿಕಲ್ ಬಾಂಬ್ ಬೆದರಿಕೆ

ಚಾಮರಾಜನಗರ, ಜಿಲ್ಲಾ ನ್ಯಾಯಾಲಯಕ್ಕೆ 3ನೇ ಬಾರಿ ಕಿಡಿಗೇಡಿಗಳು ಹುಸಿ ಬಾಂಬ್ ಬೆದರಿಕೆ ಇ-ಮೇಲ್ ಸಂದೇಶವನ್ನು ಕಳುಹಿಸಿದ್ದು, ವಕೀಲರು ಹಾಗೂ ಸಾರ್ವಜನಿಕರು ಆತಂಕಗೊಂಡಿದ್ದಾರೆ. ಜೊತೆಗೆ, ನ್ಯಾಯಾಲಯದ ಅಮೂಲ್ಯ ಸಮಯವೂ ವ್ಯರ್ಥವಾಗಿದೆ.

ಚಾಮರಾಜನಗರ ಜಿಲ್ಲಾ ಸತ್ರ ಮತ್ತು ಪ್ರಧಾನ ನ್ಯಾಯಾಲಯಕ್ಕೆ ಡಾರ್ಕ್‌ವೆಬ್ ಮೂಲಕ ಅಂಬು ನಾಥನ್ ಅರಿಯಪ್ಪನ್ ಎಂಬಾತನ ಹೆಸರಿನಲ್ಲಿ ಇ-ಮೇಲ್ ಕಳುಹಿಸಲಾಗಿದ್ದು, ಬೆಂಗಳೂರಿನ ಇಸ್ರೇಲ್ ರಾಯಭಾರಿ ಕಚೇರಿ ಮತ್ತು ಚಾಮರಾಜನಗರ ನ್ಯಾಯಾಲಯದಲ್ಲಿ ಕೆಮಿಕಲ್ ಬಾಂಬ್ ಇಡಲಾಗಿದೆ. ಇಂದು ಮಧ್ಯಾಹ್ನ 1ಕ್ಕೆ ಸ್ಫೋಟಗೊಳ್ಳಲಿದೆ ಎಂದು ಮೇಲ್ ಬಂದಿದೆ.

### ಮೂರನೇ ಬಾರಿ ಬಾಂಬ್ ಬೆದರಿಕೆ ಮೇಲ್

ಇದು ಮೂರನೇ ಬಾರಿ ಬಾಂಬ್ ಬೆದರಿಕೆ ಮೇಲ್ ಬಂದಿದ್ದು, ಕಳೆದ ಶನಿವಾರದಂದು ಹಿಂದೆ ತಮಿಳುನಾಡು ಮಾಜಿ ಸಿಎಂ ಸ್ಟಾಲಿನ್ ಪತ್ನಿ, ದುರ್ಗಾ ಸ್ಟಾಲಿನ್ ಪ್ರವಾದಿ ಮಹಮ್ಮದ್?ಗೆ ಅಪಮಾನ ಮಾಡಿದ್ದು, ಚಾಮರಾಜನಗರ ಕೋರ್ಟ್ ರಸ್ತೆಯಲ್ಲಿ 3 ಸಿಲಿಕಾನ್ ಬಾಂಬ್, ನ್ಯಾಯಲಯದ ರೆಕಾರ್ಡ್ ರೂಂನಲ್ಲಿ 3 ಹಾಗೂ ಇ-ಸೇವಾ ಕೇಂದ್ರದಲ್ಲಿ 2 ಬಾಂಬ್ ಇಡಲಾಗಿದೆ ಎಂದು ಶನಿವಾರ ಮಧ್ಯಾಹ್ನ 2.25ಕ್ಕೆ ಮೇಲ್ ಬಂದಿತ್ತು. ಅದಕ್ಕೂ ಮುನ್ನ, ಅಜ್ಮಲ್ ಕಸಬ್ ಎಂಬಾತನ ಹೆಸರಿನಲ್ಲಿ ಮೇಲ್ ಕಳುಹಿಸಿ ಬಾಂಬ್ ಬೆದರಿಕೆ ಹಾಕಲಾಗಿತ್ತು.



### ಕೋರ್ಟ್ ಸಮಯ ವ್ಯರ್ಥ

ಹುಸಿ ಬಾಂಬ್ ಬೆದರಿಕೆಯಿಂದಾಗಿ ನ್ಯಾಯಾಲಯದ ಸಮಯ ವ್ಯರ್ಥವಾಗಿದೆ. ಇಂದು ಮಧ್ಯಾಹ್ನ 12ರ ತನಕವೂ ಬಾಂಬ್ ಪತ್ತೆದಳ ಶೋಧನೆ ನಡೆಸಿದ್ದರಿಂದ ಸಾರ್ವಜನಿಕರು, ವಕೀಲರು ಆವರಣದಲ್ಲಿ ನಿಲ್ಲಬೇಕಾದ ಸ್ಥಿತಿ ನಿರ್ಮಾಣವಾಗಿತ್ತು. ಕಕ್ಷಿದಾರರು ದೂರದ ಊರುಗಳಿಂದ ಬಂದು ಕಲಾಪದಲ್ಲಿ ಭಾಗಿಯಾಗದ ಹಿನ್ನೆಲೆ ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ವಕೀಲರ ಸಂಘದಿಂದ ಕಳವಳ: ಈ ಕುರಿತು ಚಾಮರಾಜನಗರ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ ಮಾತನಾಡಿ, ಬೆದರಿಕೆ ಹಾಕುತ್ತಿರುವ ಕಿಡಿಗೇಡಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಬಾಂಬ್ ಬೆದರಿಕೆ ಬಂದಾಗಿನಿಂದ ವಕೀಲರು ಮತ್ತು ಕಕ್ಷಿದಾರರಲ್ಲಿ ಗೊಂದಲಮಯವಾಗಿದೆ. ಎಲ್ಲರಿಗೂ ಜೀವಭಯ ಉಂಟಾಗಿದೆ. ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಕಳವಳ ತೋಡಿಕೊಂಡರು.


ಇದುವರೆಗೂ ಕಿಡಿಗೇಡಿ ಪತ್ತೆ ಹಚ್ಚಿಲ್ಲ ಎಂದು ಬೇಸರ: ಇದು ಮೂರನೇ ಬಾರಿ ಬಂದಿರುವ ಬೆದರಿಕೆ ಆಗಿದ್ದು, ಸೈಬರ್ ಪೊಲೀಸರು ಇಷ್ಟಾದರೂ ಕಿಡಿಗೇಡಿಯನ್ನು ಪತ್ತೆ ಮಾಡಿಲ್ಲ. ಸಿಇಎನ್ ಪೊಲೀಸರಿಗೆ ಈ ಬಗ್ಗೆ ಹೆಚ್ಚಿನ ಜವಾಬ್ದಾರಿ ಇದೆ. ಕೂಡಲೇ ಕ್ರಮ ಆಗಬೇಕು ಎಂದು ಒತ್ತಾಯಿಸಿದರು.

## ನಾಲ್ಕು ಕುರಿಗಳಿಗೆ ಅಪಘಾತ

ಚಾಮರಾಜನಗರ, ಗುಂಡ್ಲುಪೇಟೆ ಮುಖ್ಯರಸ್ತೆಯಲ್ಲಿ ಬಿಳಿ ಬಣ್ಣದ ಕಾರೊಂದು ನಾಲ್ಕು ಕುರಿಗಳಿಗೆ ಅಪಘಾತ ಮಾಡಿ ಪರಾರಿಯಾಗಿದೆ.

ತಾಲೂಕಿನ ಉತ್ತುವಳ್ಳಿ ಗ್ರಾಮದ ನಿವಾಸಿಯೊಬ್ಬರು ಫ್ಯಾಕ್ಟರಿ ಮುಂಭಾಗ ಕುರಿಗಳನ್ನು ಮೇಯಿಸಲು ಹೋಗುವಾಗ ಚಾಮರಾಜನಗರ ದಿಂದ ಗುಂಡ್ಲುಪೇಟೆ ಕಡೆಗೆ ಹೋಗುವ ಬಿಳಿಬಣ್ಣದ ಕಾರೊಂದು 4 ಕುರಿಗಳಿಗೆ ಅಪಘಾತ ಮಾಡಿ ಹೋಗಿರುತ್ತದೆ. ಈ ವಿಚಾರವನ್ನು ಗೋವಿಂದರಾಜು ಎಂಬುವವರು ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಸಂಚಾರಿ ಠಾಣೆಯ ಪೊಲೀಸರು ಬಂದು ಪರಿಶೀಲನೆ ನಡೆಸಿದರು.

ಪೊಲೀಸರು ತಕ್ಷಣ ಗುಂಡ್ಲುಪೇಟೆ-ಚಾಮರಾಜನಗರ ಮುಖ್ಯರಸ್ತೆಯಲ್ಲಿರುವ ವಿವಿಧ ಸಿಸಿಟಿವಿ ಗಳನ್ನು ಪರಿಶೀಲಿಸಿದ್ದು, ಯಾವುದೇ ಉಪಯುಕ್ತ ವಾದ ಮಾಹಿತಿ ಲಭ್ಯವಾಗಿರುವುದಿಲ್ಲ ಈ ಸಂಬಂದ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.



# ಶಿಕ್ಷಣ, ಆರೋಗ್ಯ ಸೇವೆ ದುಬಾರಿಯಾಗಬಾರದು

**ಶ್ರೀ ಸರ್ಪಭೂಷಣ ಸ್ವಾಮೀಜಿ । ರಾಮಶೇಷ ಪಾಠಶಾಲೆಯ ಸೇವಾ ಮಿಲನ ಕಾರ್ಯಕ್ರಮ**



ಚಾಮರಾಜನಗರ, ಶಿಕ್ಷಣ ಮತ್ತು ಆರೋಗ್ಯ ಸೇವೆ ಶ್ರೀಸಾಮಾನ್ಯನ ಕೈಗೆಟುವಂತಿರಬೇಕು, ದುಬಾರಿಯಾಗಬಾರದು ಎಂದು ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ರಾಮಶೇಷ ಪಾಠಶಾಲಾ ಟ್ರಸ್ಟ್, ರಾಮಶೇಷ ಸಂಸ್ಕೃತ ಪಾಠಶಾಲೆಯ 20 ನೇ ವರ್ಷದ ಸೇವಾ ಮಿಲನ ಹಾಗೂ 51 ನೇ ಸೇವಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಇಂದು ಪ್ರತಿಯೊಬ್ಬರಿಗೂ ಅಗತ್ಯವಾದ ಶಿಕ್ಷಣ ಹಾಗೂ ಆರೋಗ್ಯ ಸೇವೆಗಳು ಬಹಳ ದುಬಾರಿಯಾಗಿವೆ. ಬಡವರು, ಕೆಳ ಮಧ್ಯಮ ವರ್ಗದ ಜನರು ತಮ್ಮ ಮಕ್ಕಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಕೊಡಿಸಬೇಕು ಎಂದರೆ ಬಹಳ ಕಷ್ಟ. ಹಾಗೆಯೇ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲು ಅವರಿಗೆ ಸಾಧ್ಯವಾಗುವುದಿಲ್ಲ ಎಂದರು.

ಇಂಥ ಸನ್ನಿವೇಶದಲ್ಲಿ ರಾಮಶೇಷ ಪಾಠಶಾಲಾ ಟ್ರಸ್ಟ್ ನಿಂದ ಪರಿಮಳ ರಾಮ ವಿದ್ಯಾಮಂದಿರದಲ್ಲಿ ಬಡ ಮಕ್ಕಳಿಗೂ ಉತ್ತಮ ಶಿಕ್ಷಣ ನೀಡುತ್ತಿದ್ದಾರೆ. ಪ್ರದೀಪ್ ದೀಕ್ಷಿತ್ ಅವರು ತಮ್ಮ ಶಾಲೆ ಮಾತ್ರವಲ್ಲ, ಪ್ರತಿ ವರ್ಷ ಸೇವಾ ಮಿಲನ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲೆಗಳೂ ಸೇರಿದಂತೆ ಇತರ ಶಾಲಾ ಮಕ್ಕಳಿಗೆ ನೋಟ್ ಬುಕ್ ಮತ್ತು ಕಲಿಕಾ ಸಾಮಗ್ರಿಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಇದು ಅತ್ಯಂತ ಶ್ಲಾಘನೀಯ ಕೆಲಸ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಇದಲ್ಲದೇ ಸೇವಾ ಮಿಲನ ಕಾರ್ಯಕ್ರಮದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಸನ್ಮಾನಿಸಿ, ಗೌರವಿಸುತ್ತಿದ್ದಾರೆ. ಇದು ಸಾಧಕರಿಗೂ ಸ್ಫೂರ್ತಿ ನೀಡುತ್ತದೆ ಎಂದು ಸರ್ಪಭೂಷಣ ಸ್ವಾಮೀಜಿ ಹೇಳಿದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ಲಯನ್ಸ್ ಸಂಸ್ಥೆಯ ಮಾಜಿ ಅಧ್ಯಕ್ಷ ಬಿ.ಎಂ. ಪ್ರಭುಸ್ವಾಮಿ ಮಾತನಾಡಿ, ಪ್ರದೀಪ್ ಕುಮಾರ್ ದೀಕ್ಷಿತ್ ಅವರು ಗುರುಕುಲ ಮಾದರಿ ಶಾಲೆ ಸ್ಥಾಪಿಸಿ, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಇಲ್ಲಿ ಸಂಸ್ಕಾರಯುತ ಶಿಕ್ಷಣ ನೀಡುತ್ತಿದ್ದಾರೆ. ಇಂದು ಶಿಕ್ಷಣ ವಾಣಿಜ್ಯೀಕರಣವಾಗಿದೆ. ಇದರ ನಡುವೆ ಅವರು ಸರಳ ಉಚಿತ ಶಿಕ್ಷಣ ನೀಡುತ್ತಿದ್ದಾರೆ. ಬಡವರ ಮಕ್ಕಳಿಗೆ ಅನುಕೂಲವಾಗಲಿ. ಇಲ್ಲಿನ ಮಕ್ಕಳಿಗೆ ಉಜ್ವಲ ಭವಿಷ್ಯ ಇದೆ ಎಂದು ಹಾರೈಸಿದರು.

ಪ್ರಾಚಾರ್ಯ ಪ್ರದೀಪ್ ಕುಮಾರ್ ದೀಕ್ಷಿತ್ ಪ್ರಾಸ್ತಾವಿಕವಾಗಿ ಮಾತನಾಡಿ, ರಾಮಶೇಷ ಪಾಠಶಾಲಾ ಟ್ರಸ್ಟ್ ನಿಂದ 20 ವರ್ಷಗಳಿಂದಲೂ ಸೇವಾ ಮಿಲನ ಕಾರ್ಯಕ್ರಮ ಆಚರಿಸಿಕೊಂಡು ಬರಲಾಗುತ್ತಿದೆ. ಈ ವರ್ಷ 16 ವಿವಿಧ ಶಾಲೆಗಳ 209 ಮಕ್ಕಳಿಗೆ ಅವರ ವಾರ್ಷಿಕ ಶಿಕ್ಷಣಕ್ಕೆ ಬೇಕಾದ ನೋಟ್ ಬುಕ್, ಪೆನ್, ಪೆನ್ಸಿಲ್ ವಿತರಣೆ ಮಾಡಲಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿಜ್ಞಾನ ಕ್ಷೇತ್ರದ ಭರತ್, ಪೊಲೀಸ್ ಇಲಾಖೆಯ ಮಧುಸೂದನ್ ಹರದನಹಳ್ಳಿ, ವೇದಗುರು ಗುಂಡಣ್ಣ, ಜನಸ್ನೇಹಿ ಟ್ರಸ್ಟ್ ಶಿವು, ಸಾವಯವ ಕೃಷಿಕ ಕಂದೇಗಾಲ ನಾಗೇಂದ್ರ, ಅಥ್ಲೀಟ್ ಹರ್ಷಿತಾ ಅವರನ್ನು ಸನ್ಮಾನಿಸಲಾಯಿತು. ನಗರಸಭೆ ಮಾಜಿ ಸದಸ್ಯ ಗಣೇಶ್ ದೀಕ್ಷಿತ್ ಅಧ್ಯಕ್ಷತೆ ವಹಿಸಿದ್ದರು. ಇನ್ನೋರ್ವ ಮಾಜಿ ಸದಸ್ಯ ಚಂದ್ರಶೇಖರ್ ಮುಖ್ಯ ಅತಿಥಿಯಾಗಿದ್ದರು. ಗಣೇಶ್, ಮೀರಾ ಮೂರ್ತಿ, ಮಂಜು, ರಾಮಶೇಷ ಪಾಠಶಾಲೆಯ ಸುನೀಲ್, ಗೀತಾ, ಜ್ಯೋತಿ, ಭಾಗ್ಯ, ಲತಾ ಮತ್ತಿತರರು ಉಪಸ್ಥಿತರಿದ್ದರು.

## ವಿದ್ಯುತ್ ವ್ಯತ್ಯಯ

ಮೈಸೂರು:– 66/11 ಕೆ.ವಿ ರಾಜೀವ್‌ನಗರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ. ಸೂರ್ಯ ಫೀಡರ್ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಕೆಲಸದ ನಿಮ್ಮಿತ ಜೂನ್ 30 ಜುಲೈ 02 ಮತ್ತು ಜುಲೈ 04 ರಂದು ಬೆಳಿಗ್ಗೆ 10:00 ರಿಂದ ಸಂಜೆ 6:00 ಘಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ವಿದ್ಯುತ್ ವ್ಯತ್ಯಯವಾಗಲಿರುವ ಪ್ರದೇಶಗಳು: ಎಂಪೈರ್ ಬಡಾವಣೆ, ಕ್ರಿಶ್ಚಿಯನ್ ಕಾಲೋನಿ, ನಾಗರಾಜಪ್ಪ ಬಡಾವಣೆ, ಸೂರ್ಯ ನಾರಾಯಣ ದೇವಸ್ಥಾನ, ಖುಬಾ ಮಸೀದಿ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾತ್ಸಲ್ಯ ಮನೆಗೆ ಭೂಮಿಪೂಜೆ



ಗುಂಡ್ಲುಪೇಟೆ:– ಧರ್ಮಸ್ಥಳ ಸಂಸ್ಥೆ ವತಿಯಿಂದ ತಾಲೂಕಿನ ಕಗ್ಗಳ ಹಾಗೂ ಬಸವಾಪುರದಲ್ಲಿ ಗ್ರಾಮದಲ್ಲಿ ನಿರ್ಗತಿಕರಿಗೆ ಮನೇ ಕಟ್ಟಿಕೊಡಲು ವಾತ್ಸಲ್ಯ ಮನೆಗೆ ಭೂಮಿ ಪೂಜೆ ಮಾಡಲಾಯಿತು

ಜಿಲ್ಲಾ ನಿರ್ದೇಶಕ ದೀನೇಶ್ ರವರು ಮಾತನಾಡಿ ಮಾತೃಶ್ರೀ ಹೇಮಾವತಿ ಅಮ್ಮನವರ ಆಶಯದಂತೆ ಕಟ್ಟ ಕಡೆಯ ನಿರ್ಗತಿಕರಿಗೆ ಯಾರು ಇಲ್ಲ ಅನ್ನೋ ಮನೋಭಾವದ ನಿರಾಶ್ರಿತರಿಗೆ ನಾವಿದ್ದೇವೆ ಎಂಬ ಆತ್ಮಸ್ಥೈರ್ಯವನ್ನು ತುಂಬಿ ಅವರಿಗೇ ಸಮಾಜದಲ್ಲಿ ಗೌರವಯುತವಾಗಿ ಬದುಕಲು ಧರ್ಮ ಸ್ಥಳ ಸಂಸ್ಥೆ ಶ್ರಮಿಸುತ್ತಿದೆ ,,ಹಾಗೂ ತಿಂಗಳಿಗೆ 1000 ದಂತೆ ಮಾಸಾಶನ ಮೊತ್ತ ಹಾಗೂ ಪೌಷ್ಟಿಕ ಆಹಾರ ಕೇ ವಾತ್ಸಲ್ಯ ಮಿಕ್ಸ್ (ಫುಡ್) ಹಾಗೂ ವಾತ್ಸಲ್ಯ ಕಿಟ್ ನ್ನು ನೀಡುತ್ತಿದ್ದೇವೆ ಹಾಗೂ ವಾತ್ಸಲ್ಯ ಪಲಾನುಭವಿಗಳಿಗೆ ಶೌಚಾಲಯ ಕಟ್ಟಿಕೊಡುವುದು,, ಮನೆ ರಿಪೇರಿ,, ಸೋಲಾರ್ ಅಳವಡಿಕೆ ಸಹ ಮಾಡಿಕೊಡುತ್ತೇವೆ ಎಂದು ತಿಳಿಸಿದರು

ಈ ಸಂದರ್ಭದಲ್ಲಿ ತಾಲೂಕಿನ ಯೋಜನಾಧಿಕಾರಿ ಚಂದ್ರಶೇಖರ್ ಜನಜಾಗೃತಿ ವೇದಿಕೆ ಯೋಜನಾಧಿಕಾರಿ ಮುಖೇಶ್. ತಾಲೂಕು ಸಮನ್ವಯಾಧಿಕಾರಿ ಚೈತ್ರ ಹಾಗೂ ಊರಿನ ಮುಖಂಡರಾದ ಸಿದ್ದಶೆಟ್ಟಿ,, ಸಿದ್ದರಾಜು, ಗ್ರಾಮ ಮಾಜಿ ಪಂಚಾಯಿತಿ ಅಧ್ಯಕ್ಷ ನಾಗೇಶ್, ಅರ್ಚಕ. ನಾಗೇಂದ್ರ,, ಮೇಸ್ತ್ರಿ ರಂಗಸ್ವಾಮಿ ,

ಸೇವಾ ಪ್ರತಿನಿಧಿ ಸುನಿತಾ ಮತ್ತು ಮಹಾದೇವಮ್ಮ ಹಾಗೂ ಮೇಲ್ವಿಚಾರಕಿ. ರಾಜೇಶ್ವರಿ ಹಾಗೂ ಊರಿನ ಗ್ರಾಮಸ್ಥರು ಮುಖಂಡರು ಇದ್ದರು

# ಪರಭಾಷಿಗರಿಂದ ಕನ್ನಡ ಅಸ್ತಿತ್ವಕ್ಕೆ ಧಕ್ಕೆ



ಚಾಮರಾಜನಗರ, ಬೆಂಗಳೂರಿನಲ್ಲಿ ಹೊರ ರಾಜ್ಯದವರ ಹೆಚ್ಚಳದಿಂದಾಗಿ ಸ್ಥಳೀಯ ಉದ್ಯೋಗ, ಸಂಸ್ಕೃತಿ, ಕನ್ನಡ ಭಾಷೆಯ ಅಸ್ತಿತ್ವಕ್ಕೆ ಧಕ್ಕೆಯಾಗುತ್ತಿದೆ ಎಂದು ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ರಾಜ್ಯಾಧ್ಯಕ್ಷರಮೇಶ್‌ಗೌಡ ಕಳವಳ ವ್ಯಕ್ತಪಡಿಸಿದರು.

ತಾಲೂಕಿನ ನಾಗವಳ್ಳಿ ಗ್ರಾಮದಲ್ಲಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಜಿಲ್ಲಾ ಘಟಕದ ವತಿಯಿಂದ ನಡೆದ ನೂತನ ಪದಾಧಿಕಾರಿಗಳ ಸೇರ್ಪಡೆ, ಸಮಾಜಮುಖಿ ಚಿಂತಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಸಂಘಟನೆಗೆ ಸೇರ್ಪಡೆಯಾದವರಿಗೆ ಸಂಘಟನೆಯ ಶಲ್ಯ ಹಾಕಿ ಸ್ವಾಗತಿಸಿ ಬರಮಾಡಿಕೊಂಡು ಮಾತನಾಡಿದರು.

ಕೆರೆಗಳಲ್ಲಿ ಬೊಗೆಸೆ ಗೆಸೆ ನೀರು ಕುಡಿಯುತ್ತಿದ್ದೆವು.

. ಇಂದು ಗುತ್ತಿಗೆ ಪಡೆದು ಕೊಳಚೆ ಮಂಡಳಿಯಾಗಿ ಮಾಡಿಬಿಟ್ಟರು. ಎಲ್ಲ ಮಾಲ್‌ಗಳಲ್ಲಿ ಪರಕೀಯರು ಬಂದು ವಾಸಮಾಡುತ್ತಿದ್ದಾರೆ. ನೀವು ಎಲ್ಲೆ ಹೋದರು ಕನ್ನಡ ಅನ್ನ, ಮುದ್ದೆ, ಮಕ್ಕಳಿಗೆ ಜಾಗವಿಲ್ಲದಂತೆ ಮಾಡಲಾಗಿದೆ. ಅಲ್ಲಿ ರೋಟಿ ಕುಲ್ಚ ತುಂಬಿಕೊಂಡಿವೆ. ಪಿಜ್ಜಾ ಬರ್ಗರ್ ಬಂದಿದ್ದು. ಬೆಂಗಳೂರಿನಲ್ಲಿ ಎಂ.ಜಿ.ರೋಡ್‌ನಲ್ಲಿ ಎಗ್ಗಿಲ್ಲದೆ ಪರಭಾಷಿಯ ತುಂಡುಬಟ್ಟೆಯ ಹುಡುಗಿಯರು ಓಡಾಡುವಂತಾಗಿದ್ದು, ನಮ್ಮ ಕನ್ನಡ ಮಕ್ಕಳು ಮುಜುಗರದಿಂದ ಓಡಾಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ಆಗಾಗಿ ಕನ್ನಡ ಉಳಿವಿಗಾಗಿ ಕನ್ನಡ ತನಕ್ಕಾಗಿ ಸರ್ಕಾರ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಯೋಗೀಶ್‌ಗೌಡ, ಜಿಲ್ಲಾ ಘಟಕದ ಗೌರವಾಧ್ಯಕ್ಷ ಲಿಂಗರಾಜು, ಜಿಲ್ಲಾಧ್ಯಕ್ಷ ಮಲ್ಲುಯರಗಂಬಳ್ಳಿ, ಜಿಲ್ಲಾ ಉಪಾಧ್ಯಕ್ಷ ಶಬಾಜ್ ಷರೀಫ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೋಹನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಶೆಟ್ಟಿ, ನಿಂಗಶೆಟ್ಟಿ, ನಳಿನಕುಮಾರಿ, ಪ್ರೇಮಲತಾ, ವಸಂತಕುಮಾರಿ, ಜಯಲಕ್ಷ್ಮೀ, ಲೀಲಾ, ನಾಗರತ್ನ, ಮಧುರ, ಶಿವಮ್ಮ, ಮಂಗಳಮ್ಮ, ಮಹದೇವಪ್ರಸಾದ್, ಹೋಮ ಇತರರು ಹಾಜರಿದ್ದರು.

# ನಡವಳಿಕೆ ಆಧಾರದಲಿ ಅನುಗ್ರಹ

## ವ್ಯವಸಾಯದಲ್ಲಿ ಬಳಸುವ ನೀರಿನಂತೆ, ನಮಗೆ ಭಗವಂತನ ಕೃಪೆ: ವಿಧುಶೇಖರ ಶ್ರೀ

ರಾಮನಗರ: ವ್ಯವಸಾಯದಲ್ಲಿ ಯಾವ ಬೆಳೆಯನ್ನು ಅಪೇಕ್ಷಿಸುತ್ತೇವೆಯೋ ಅದೇ ಬೀಜವನ್ನೇ ಬಿತ್ತುತ್ತೇವೆ. ಅದರ ಬೆಳವಣಿಗೆಗೆ ನೀರುಣಿಸುತ್ತೇವೆ. ಇಲ್ಲಿ ಬಿತ್ತಿದ ಬೀಜದ ಬೆಳೆ ಬೆಳೆಯುತ್ತದೆ. ಭಗವಂತನ ಅನುಗ್ರಹವೂ ನೀರಿನಂತೆ. ಜೀವನದಲ್ಲಿ ಭಗವಂತನ ಅನುಗ್ರಹ ನಮ್ಮ ನಡವಳಿಕೆಗಳನ್ನು ಆಧರಿಸಿವೆ ಎಂದು ಶೃಂಗೇರಿ ಶಾರದ ಪೀಠಾಧ್ಯಕ್ಷರಾದ ಜಗದ್ಗುರು ಶೀ ವಿಧುಶೇಖರ ಸ್ವಾಮೀಜಿ ಮಾರ್ಮಿಕವಾಗಿ ತಿಳಿಸಿದರು.

ನಗರದ ಮುಖ್ಯರಸ್ತೆಯಲ್ಲಿರುವ ಶ್ರೀ ಬಲಮುರಿ ಗಣಪತಿ ದೇವಾಲಯದ ಬ್ರಹ್ಮ ಕುಂಬಾಭಿಷೇಕ ನೆರವೇರಿಸಿ ನಂತರ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಆಶೀರ್ವಚನ ನೀಡಿದ ವೇಳೆ ಅವರು ಮಾತನಾಡಿದರು. ಬೀಜದಿಂದ ಹೇಗೆ ಫಲವನ್ನು ಅಪೇಕ್ಷಿಸುತ್ತೇವೆಯೋ, ಹಾಗೆ ಭಗವಂತನ ಅನುಗ್ರಹವೂ ಇರುತ್ತದೆ ಎಂದರು. ಯಾವುದೋ ಬೀಜವನ್ನು ಬಿತ್ತಿ, ಅದರಿಂದ ಮಾವಿನ ಫಸಲನ್ನು ಬಯಸುವುದು ಸಾಧ್ಯವಿಲ್ಲ ಎಂದು ಅವರು ನಮ್ಮ ನಡವಳಿಕೆಗಳು ಹೇಗಿರಬೇಕು ಎಂಬುದನ್ನು ತಿಳಿಸಿದರು.





### ಅತೀತ ಶಕ್ತಿಗೆ ನಾವು ಅಧೀನ

ವಿಶ್ವದಲ್ಲಿ ಅತಿತವಾದ ಶಕ್ತಿಯೊಂದಿದೆ. ಅದಕ್ಕೆ ನಾವೆಲ್ಲ ಅಧೀನರಾಗಿದ್ದೇವೆ. ಈ ಅತೀತವಾದ ಶಕ್ತಿಯೇ ಭಗವಂತ. ವಿಶ್ವದೆಲ್ಲೆಡೆ ಇದೇ ಭಾವನೆ, ನಂಬಿಕೆ ಇದೆ. ಇದೇ ನಂಬಿಕೆ, ಭಾವನೆಗಳನ್ನು ಆಧರಿಸಿ ಧರ್ಮಗಳು, ಧರ್ಮಗ್ರಂಥಗಳು ಸೃಜನೆಯಾಗಿವೆ. ಭಾರತದಲ್ಲಿ ಸನಾತನ ಹಿಂದೂ ಧರ್ಮ ಅನಾದಿಕಾಲದಿಂದಲೂ ಪಾಲಿಸಿಕೊಂಡು ಬರಲಾಗುತ್ತಿದೆ ಎಂದು ಸ್ವಾಮೀಜಿ ಹೇಳಿದರು.

ಅವರವರ ನಂಬಿಕೆಗಳು, ಭಾವನೆಗಳಿಗೆ ತಕ್ಕಂತೆ ಸಂಪ್ರದಾಯಗಳು ರೂಪುಗೊಂಡಿವೆ. ಇರುವನೊಬ್ಬನೇ ಭಗವಂತ. ಅವರವರ ಭಾವನೆಗಳು, ಕಲ್ಪನೆಗಳಿಗಂತೆ ಭಗವಂತನಿಗೆ ಇಷ್ಟ ರೂಪವನ್ನು ಕೊಟ್ಟು ಆರಾಧಿಸಬಹುದು ಎಂದರು.

ಶ್ರೀ ಬಲಮುರಿ ಗಣಪತಿ ದೇವಾಲಯದ ಬ್ರಹ್ಮ ಕುಂಭಾಭಿಷೇಕದ ಅಂಗವಾಗಿ ಶನಿವಾರ ಸಂಜೆಯಿಂದಲೇ ಧಾರ್ಮಿಕ ಕೈಂಕರ್ಯಗಳು ನಡೆದವು. ಶೃಂಗೇರಿ ಶ್ರೀಗಳು ಶನಿವಾರ ಸಂಜೆ ಚಂದ್ರಮೌಳೇಶ್ವರ ಪೂಜೆಯನ್ನು ನೆರವೇರಿಸಿದರು ಭಾನುವಾರ ಬೆಳಿಗ್ಗೆ ಕುಂಭಾಭಿಷೇಕ ಕಾರ್ಯಕ್ರಮವನ್ನು ನೆರವೇರಿಸಿದರು. ಕುಂಭಾಭಿಷೇಕ ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕರಿಗೆ ಅನ್ನಪ್ರಸಾದ ವಿತರಣೆಯಾಯಿತು. ದೇವಾಲಯವನ್ನು ಬಗೆಬಗೆಯ ಹೂವುಗಳಿಂದ ಸಿಂಗರಿಸಲಾಗಿತ್ತು.

### ವೇದಗಳು, ಶಾಸ್ತ್ರಗಳು ಹೇಳುವುದೇನು?

ಮಾನವರಾದ ನಾಮಗೆ ಕೆಟ್ಟದ್ದು, ಒಳ್ಳೆಯದರ ಬಗ್ಗೆ ಅರಿವಿರಬೇಕು. ವೇದಗಳು, ಶಾಸ್ತ್ರಗಳು, ಪುರಾಣಗಳು ಸಹ ಇವನ್ನೇ ಹೇಳುತ್ತವೆ. ಇದನ್ನು ಅರಿಯುವ ಬುದ್ಧಿ ಶಕ್ತಿಯನ್ನು ನಮಗೆಲ್ಲ ಭಗವಂತ ಕರುಣಿಸಿದ್ದಾನೆ. ಇಹ ಲೋಕದಲ್ಲಿ ಕಾನೂನು, ನಿಯಮಗಳು ಜಾರಿಯಲ್ಲಿವೆ. ಅವುಗಳ ಬಗ್ಗೆ ಅರಿವು ಮೂಡಿಸಿಕೊಂಡಿದ್ದರೆ ಯಾವ ಸಮಸ್ಯೆಗಳು ಉದ್ಭವಿಸುವುದಿಲ್ಲ. ತಪ್ಪು ಮಾಡಿದರೆ ನ್ಯಾಯಾಧೀಶರು ಸಹ ತಮ್ಮ ಇಚ್ಛಾ ನುಸಾರ ಶಿಕ್ಷೆ ನೀಡುವುದಿಲ್ಲ. ತಪ್ಪನ್ನು ಆಧರಿಸಿಯೇ ಶಿಕ್ಷೆ ವಿಧಿಸುತ್ತಾರೆ. ಇದೇ ರೀತಿ ಭಗವಂತನ ಕೃಪೆಯೂ ನಮ್ಮ ನಡವಳಿಕೆಗಳನ್ನು ಆಧರಿಸಿವೆ ಎಂದರು.

### ಅಧರ್ಮ ಅಂದರೇನು?

ನಮ್ಮ ನಡವಳಿಕೆಗಳಿಂದ ಇನ್ನೊಬ್ಬರಿಗೆ ಸಮಸ್ಯೆ ಉಂಟು ಮಾಡಿದರೆ ಅದು ಅಧರ್ಮ. ಇದರಿಂದ ನಮಗೂ ಒಳ್ಳೆಯದಲ್ಲ. ಶಾಸ್ತ್ರಗಳು ಸಹ ಇದನ್ನೇ ಹೇಳುತ್ತವೆ. ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂಬುದರ ಬಗ್ಗೆ ತಿಳುವಳಿಕೆ ಇಲ್ಲದಿದ್ದರೆ, ಮಾರ್ಗದರ್ಶಕ ಸ್ಥಾನದಲ್ಲಿರುವವರ ಮಾತುಗಲನ್ನು ಪಾಲಿಸಿದರೆ ಜೀವನ ಸಾರ್ಥಕವಾಗುತ್ತದೆ ಎಂದರು. ಧರ್ಮಗಳು ಪ್ರತಿಯೊಬ್ಬರಿಗೂ ಸನ್ಮಾರ್ಗಗಳನ್ನೇ ಭೋಧಿಸುತ್ತವೆ ಎಂದರು. ಪುರಾಣಗಳು ಮತ್ತು ಉಪಕಥೆಗಲ ಬಗ್ಗೆ ಮಾತನಾಡಿದ ಶ್ರಿಗಳು, ರಾಮಾಯಣ ವನವಾಸಕ್ಕೆ ತೆರಳುವಂತೆ ಸೂಚಿಸುವುದಿಲ್ಲ, ಮಹಾಭಾರತ ಜೂಜನ್ನು ಆಡುವಂತೆ ತಿಳಿಸುವುದಿಲ್ಲ. ಬದಗಲಿಗೆ ಈ ಪುರಾಣಗಳು ಯಾವ ಸಂದೇಶವನ್ನು ಸಾರುತ್ತಿವೆ ಎಂಬುದನ್ನಷ್ಟೇ ಅರಿಯಬೇಕು. ಧರ್ಮರಾಜನಂತೆ ಧಾರ್ಮಿಕ ಮಾರ್ಗದಲ್ಲಿ ನಡೆಯಬೇಕು. ಹೀಗೆ ನಡೆಯುವಾಗ ಕೌರವರಮತೆ ಸಮಸ್ಯೆ ಕೊಡುವವರು ಇರುತ್ತಾರೆ. ಆದರೆ ಧರ್ಮ ಬಿಡಬಾರದು. ಇದು ಪುರಾಣಗಳ ಸಂದೇಶ ಎಂದರು.

### ಸನಾತನ ಧರ್ಮ ಶ್ರೇಷ್ಠ

ಭಾರತದಲ್ಲಿ ಅನಾದಿಕಾಲದಿಂದಲೂ ಪಾಲನೆಯಲ್ಲಿರುವ ಸನಾತನ ಧರ್ಮ ಶ್ರೇಷ್ಠವಾಗಿದೆ. ತರ್ಕಬದ್ಧವಾದದ್ದನ್ನೇ ತಿಳಿಸುತ್ತದೆ. ಅತ್ಯಂತ ಪರಿಷ್ಕೃತ ಏಕಮಾತ್ರ ಧರ್ಮ ಸನಾತನ ಹಿಂದೂ ಧರ್ಮ. ಈ ಧರ್ಮ ಉತ್ತಮ ಜೀವನಕ್ಕೆ ಬೇಕಾದ ಮಾರ್ಗದರ್ಶನವನ್ನು ನೀಡುತ್ತದೆ ಎಂದರು. ಶಂಕರಾಚಾರ್ಯರ ಉಪದೇಶಗಳ ಬಗ್ಗೆ ಶ್ರೀಗಳು ಮಾತನಾಡಿದರು.

# ಮಳೆಗಾಗಿ ಕಪ್ಪೆಗೆ ಪೂಜೆ ಮಾಡಿದ ಮಕ್ಕಳು





**ಎಚ್.ಡಿ.ಕೋಟೆ:** ಎರಡು ತಿಂಗಳಿನಿಂದ ಇಲ್ಲಿಯವರೆಗೆ ತಾಲೂಕಿಗೆ ವರುಣನ ಆಗಮನವಿಲ್ಲದೆ ಬರದ ಛಾಯೆ ಆವರಿಸಿರುವುದರಿಂದ, ಮಳೆಗಾಗಿ ಪ್ರಾರ್ಥಿಸಿ ತುಂಬ ಸೋಗೆ ಗ್ರಾಮದ ಮಕ್ಕಳು ಕಪ್ಪೆಗೆ ಪೂಜೆ ಮಾಡಿದರು.

ಬೆಳೆಗಳು ಒಣಗುತ್ತಿವೆ. ಕೆರೆ, ಕಟ್ಟೆಗಳಲ್ಲಿ ನೀರಿಲ್ಲ. ದನ, ಕರುಗಳಿಗೆ ಮೇವಿಲ್ಲ. ಕಪ್ಪೆ ಕೂಗಿದರೆ ಮಳೆ ಬರುತ್ತಿತ್ತು. ಇತ್ತೀಚೆಗೆ ಕಪ್ಪೆಗಳೂ ಮಳೆ ಕರೆಯುತ್ತಿಲ್ಲ ಎಂದು ಮನೆಯ ಹಿರಿಯರು ಗೊಣಗುತ್ತಿದ್ದ ಮಾತುಗಳನ್ನೇ ಆಲಿಸಿಕೊಂಡ ಮಕ್ಕಳು, ತಮ್ಮ ಸಂಗಡಿಗರ ಬಳಿ ಚರ್ಚಿಸಿದ್ದಾರೆ. ಮಳೆಗಾಗಿ ಕಪ್ಪೆ ಪೂಜೆ ಮಾಡಲು ಮಕ್ಕಳಾದ ವಿಶ್ವಾಸ್, ಮಾಸ್ತಿರಾಜ್, ಶ್ರವಂತ್, ವೆಂಕಿ, ಚಿರು ನಿರ್ಧರಿಸಿದ್ದಾರೆ.

ಭಾನುವಾರ ರಜಾ ದಿನವಾದ್ದರಿಂದ ಗ್ರಾಮಸ್ಥರೊಬ್ಬರ ತೋಟದ ಬಾವಿಯಲ್ಲಿ ಕಪ್ಪೆಯೊಂದನ್ನು ತಂದಿದ್ದಾರೆ. ಇನ್ನಷ್ಟು ಸ್ನೇಹಿತರೊಂದಿಗೆ ಕಪಿಲಾ ನದಿಯಲ್ಲಿ ಮಿಂದೆದ್ದು, ಒನಕೆಯಲ್ಲಿ ಕಪ್ಪೆಯನ್ನಿರಿಸಿ ಪೂಜೆ ಸಲ್ಲಿಸಿ, ಮಕ್ಕಳೆಲ್ಲರೂ ದೇಹಕ್ಕೆ ಕುಂಕುಮ, ಅರಿಶಿಣ ಹಚ್ಚಿಕೊಂಡು ಬೇವು, ಸುಬೇಬುಲ್ ಸೊಪ್ಪನ್ನು ನಡುವಿಗೆ ಕಟ್ಟಿಕೊಂಡು ತಮಟೆ ಸದ್ದಿನೊಂದಿಗೆ "ಉಯ್ಯೋ ಉಯ್ಯೋ ಮಳೆರಾಯ ಹೂವಿನ ತೋಟಕೆ ನೀರಿಲ್ಲ" ಎಂದು ಕೂಗಿ ಗ್ರಾಮದ ಬೀದಿಗಳಲ್ಲಿ ಬರುತ್ತಿದ್ದಂತೆ ಮಹಿಳೆಯರು ಮನೆಯಲ್ಲಿದ್ದ ಬಿಂದಿಗೆ ನೀರನ್ನು ಮಕ್ಕಳ ಮೇಲೆ ಸುರಿದು ಪೂಜೆ ಸಲ್ಲಿಸಿದರು.

ಊರಿನೊಳಕ್ಕೆ ಮೆರವಣಿಗೆ ಪ್ರವೇಶಿಸುತ್ತಿದ್ದಂತೆಯೇ ಮಕ್ಕಳ ದಂಡೇ ಜೊತೆಯಾಗಿ ಗ್ರಾಮ ದೇವತೆ ಮಾರಮ್ಮನಿಗೆ ಪೂಜೆ ಸಲ್ಲಿಸಿದರು. ಸರ್ಕಾರಿ ಪ್ರೌಢಶಾಲೆ ಹಿಂಬದಿಯಿರುವ ಕಮ್ಮರ ತಿಮ್ಮಪ್ಪನ ಸನ್ನಿಧಿಗೂ ಶಿರಬಾಗಿ ನಮಿಸಿದ ಮಕ್ಕಳು, ಗ್ರಾಮಸ್ಥರಿಂದ ಸಂಗ್ರಹಿಸಿದ್ದ ದವಸ, ಧಾನ್ಯಗಳಿಂದ ತಯಾರಿಸಿದ ಅಡುಗೆಯಲ್ಲಿ ಅನ್ನಸಂತರ್ಪಣೆ ನಡೆಸಿದರು. ಸ್ವಯಂಪ್ರೇರಿತರಾಗಿ ಮಕ್ಕಳೇ ಮಾಡಿದ ಈ ಕಾರ್ಯಕ್ಕೆ ಗ್ರಾಮಸ್ಥರು ಪ್ರಶಂಸೆ ವ್ಯಕ್ತಪಡಿಸಿದರು.

ಕಪ್ಪೆ ಕೂಗಿದರೆ ಮಳೆ ಆಗುತ್ತದೆ ಎಂಬುದು ಗ್ರಾಮೀಣರ ನಂಬಿಕೆ. ಆದರೆ ಇತ್ತೀಚಿನ ದಿನಗಳಲ್ಲಿ ಕಪ್ಪೆಗಳೂ ಕೂಗುತ್ತಿಲ್ಲ ಎಂಬುದು ಜನರ ಅಳಲು. ಉಭಯಚರಗಳಾದ ಕಪ್ಪೆಗಳು ಚರ್ಮದ ಮೂಲಕ ಉಸಿರಾಡುವುದರಿಂದ ಮುಂಗಾರಿನ ವೇಳೆ ಮಳೆ ಬಂದು ವಾತಾವರಣ ತಂಪಾಗುವುದರಿಂದ ಸಂತೋಷಕ್ಕೆ ಕೂಗಾಡುತ್ತವೆ. ಈ ಅವಧಿಯು ಸಂತಾನೋತ್ಪತ್ತಿ ಕಾಲವಾದ್ದರಿಂದ ಗಂಡು ಕಪ್ಪೆಗಳು ಹೆಣ್ಣು ಕಪ್ಪೆಗಳನ್ನು ಆಕರ್ಷಿಸಲು ಜೋರಾಗಿ ಕೂಗುವುದು ಹಿನ್ನೆಲೆ.

# ಜೂ.4, 5ಕ್ಕೆ ಸಾಹಿತ್ಯ ಸಂಭ್ರಮ ಕಾರ್ಯಕ್ರಮ



**ಮೈಸೂರು:** ಮೈಸೂರು ಲಿಟರರಿ ಫೋರಂ ಆಗೂ ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಜು.4 ಮತ್ತು 5 ರಂದು ನಗರದಲ್ಲಿ ಮೈಸೂರು ಸಾಹಿತ್ಯ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಶುಭಾ ಸಂಜಯ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಹೋಟೆಲ್ ಸದರ್ನ್ ಸ್ಟಾರ್‌ನಲ್ಲಿ ಜು. 4 ರ ಬೆಳಗ್ಗೆ 10ಕ್ಕೆ ರಾಜ ವಂಶಸ್ಥರಾದ ಡಾ. ಪ್ರಮೋದಾದೇವಿ ಒಡೆಯರ್ ಚಾಲನೆ ನೀಡುವರು, ಪುಸ್ತಕ ಪ್ರೇಮಿ ಅಂಕೇಗೌಡರನ್ನು ಸನ್ಮಾನಿಸಲಾಗುವುದು. ಬಾದಲ್ ನಂಜುಂಡಸ್ವಾಮಿ ವಿಶೇಷ ಅತಿಥಿಗಳಾಗಿರುವರೆಂದರು. ನಂತರ ಅಭಿಜಾತ ಸಾಹಿತ್ಯದ ಅವಶ್ಯಕತೆ ಕುರಿತ ವಿಚಾರಗೋಷ್ಠಿ, ಚರ್ಚೆ, ಸಂವಾದ ನಡೆಯಲಿವೆ. ಪ್ರೊ. ಲಕ್ಷ್ಮಿ ?ಮಚಂದ್ರಶೇಕರ್, ಪ್ರೊ. ಆರ್. ಸುನಂದಮ್ಮ, ಪ್ರೊ. ಸಬೀಹಾ ಭೂಮಿಗೌಡ ಮೊದಲಾದವರು ಪಾಲ್ಗೊಳ್ಳುವರು, ಇದಲ್ಲದೆ, ಶಿವಾರ ಉಮೇಶ್ ಅವರಿಂದ ಹರಿಕಥೆ ಕಾರ್ಯಕ್ರಮವೂ ಇದೆ. ಮಾರನೇ ದಿನವಾದ ಜು. 5 ರಂದು ಬದಲಾಗುತ್ತಿರುವ ಮಾಧ್ಯಮದಲ್ಲಿ ಮಹಿಳಾ ದೃಷ್ಟಿಕೋನದ ಔಚಿತ್ಯ, ಅನಿವಾರ್ಯತೆ ಕುರಿತು ಹಿರಿಯ ಪತ್ರಕರ್ತರಾದ ಶಾಂತಲಾ ಧರ್ಮರಾಜ್, ಚೇತನ ಬೆಳಗೆರೆ, ಎಚ್.ಎನ್. ಆರತಿ ಮೊದಲಾದವರು ಮಾತನಾಡುವರು. ಬಳಿಕ ಇನ್ನಿತರ ವಿಷಯ ಕುರಿತ ಚರ್ಚೆಗಳೂ ನಡೆಯಲಿವೆ ಎಂದು ಮಾಹಿತಿ ನೀಡಿದರು.

ಮಧ್ಯಾಹ್ನ 12.15ಕ್ಕೆ ನೆರಳು ತಂಡದಿಂದ ಮಹಿಳಾ ಕಂಸಾಳೆ ಪ್ರದರ್ಶನವಿದೆ. 12.30ಕ್ಕೆ ಸಂಸದ ಯದುವೀರ್ ದಶಕದ ಸಂಭ್ರಮಕ್ಕೆ ಬರಹದ ಬಾಗಿನ ಪುಸ್ತಕ ಬಿಡುಗಡೆಗೊಳಿಸಲಿದ್ದಾರೆ. ಇದಲ್ಲದೆ ನಂತರ ಇನ್ನಿತರ ವಿಷಯ ಕುರಿತ ಚರ್ಚೆ, ಸಂವಾದ ನಡೆಯಲಿವೆ ಎಂದು ವಿವರಿಸಿದರು. ಕಿಟ್ಟಿ ಮಂದಣ್ಣ, ತಂಗಂ ಪಣಕ್ಕಲ್, ಸ್ಯಾಂ ಚೆರಿಯನ್, ರಯಾನ್ ಇರಾನಿ ಇದ್ದರು.

# ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ



ಗುಂಡ್ಲುಪೇಟೆ: ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಆಡಳಿತ, ನಗರ ಯೋಜನೆ ಹಾಗೂ ಅಭಿವೃದ್ಧಿ ಪರಿಕಲ್ಪನೆಯ ಫಲವಾಗಿಯೇ ಇಂದು ಬೆಂಗಳೂರು ವಿಶ್ವಮಟ್ಟದ ನಗರವಾಗಿ ಗುರುತಿಸಿಕೊಂಡಿದೆ ಎಂದು ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಮಹೇಶ್ ಹೇಳಿದರು.

ಪಟ್ಟಣದ ತಾಲೂಕು ಆಡಳಿತ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಸೋಮವಾರ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು. ಅಂದಿನ ವಿಜಯನಗರ ಸಾಮ್ರಾಜ್ಯದ ವೈಭವಯುತ ಆಡಳಿತವು ಕೆಂಪೇಗೌಡರ ಮೇಲೆ ಗಾಢ ಪ್ರಭಾವ ಬೀರಿತ್ತು. ಅದರ ಪರಿಣಾಮವಾಗಿ ಸುಸಂಘಟಿತ ಹಾಗೂ ಯೋಜಿತ ರೀತಿಯಲ್ಲಿ ಬೆಂಗಳೂರಿನ ನಿರ್ಮಾಣಕ್ಕೆ ಅವರು ಮುಂದಾದರು. ನಗರದ ಗಡಿಭಾಗದಲ್ಲಿ ನಿರ್ಮಿಸಿದ್ದ ನಾಲ್ಕು ಗೋಪುರಗಳನ್ನು ದಾಟಿ ಇಂದು ಬೆಂಗಳೂರು ಹಲವು ಪಟ್ಟು ವಿಸ್ತರಿಸಿ ಜಾಗತಿಕ ನಗರವಾಗಿ ಬೆಳೆದಿದ್ದು, ಅದಕ್ಕೆ ಕೆಂಪೇಗೌಡರು ಹಾಕಿದ ಭದ್ರ ಅಡಿಪಾಯವೇ ಕಾರಣವಾಗಿದೆ ಎಂದು ಹೇಳಿದರು.

ಕೆಂಪೇಗೌಡರು ಕನ್ನಡ ನಾಡಿನ ಹೆಮ್ಮೆಯ ಪುತ್ರರಾಗಿದ್ದು, ದೂರದೃಷ್ಟಿಯ ಆಡಳಿತಗಾರ ಮತ್ತು ಶ್ರೇಷ್ಠ ನಗರ ನಿರ್ಮಾತೃ. ಇಂತಹ ಮಹಾನ್ ನಾಯಕನ ಜೀವನ, ಸಾಧನೆ ಹಾಗೂ ಇತಿಹಾಸವನ್ನು ಇನ್ನಷ್ಟು ಸಮಗ್ರವಾಗಿ ದಾಖಲಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ತಹಶೀಲ್ದಾರ್ ತನ್ಮಯ್ ಮಾತನಾಡಿ, ನಾಡಪ್ರಭು ಕೆಂಪೇಗೌಡರು ಆಧುನಿಕ ಶಿಲ್ಪಿ. ಇವರು ಬೆಂಗಳೂರಿನ ನಿರ್ಮಾತೃ ಆಗಿದ್ದರು. ರಾಜ್ಯಧಾನಿ ಬೆಂಗಳೂರು ಇವತ್ತು ಕೋಟ್ಯಂತರ ಜನರ ಆಶ್ರಯತಾಣವಾಗಿದೆ. ಇಲ್ಲಿನವರಿಗಿಂತ ಹೆಚ್ಚು ಮಂದಿ ಹೊರಗಿನಿಂದ ಬಂದು ಇಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಕೃಷ್ಣದೇವರಾಯರ ಕಾಲದಲ್ಲಿ ಬೆಂಗಳೂರನ್ನು ಸ್ಥಾಪಿಸಿದ್ದಲ್ಲದೆ ಅನೇಕ ಕೆರೆಗಳನ್ನು ಕಟ್ಟಿಸಿದರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿ ಗಳನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಒಕ್ಕಲಿಗ ಸಮಾಜದ ತಾಲೂಕು ಅಧ್ಯಕ್ಷ ಜಯರಾಮ್, ಉಪಾಧ್ಯಕ್ಷ ಕುಮಾರ್, ಕಾರ್ಯದರ್ಶಿ ರವಿ, ಸುರೇಂದ್ರ, ಮಾಜಿ ಪುರಸಭಾ ಸದಸ್ಯರಾದ ಮಧು, ಕಿರಣ್ ಗೌಡ, ಅಣ್ಣಯ್ಯಸ್ವಾಮಿ, ನಾಗೇಂದ್ರಪ್ಪ, ಚಂದ್ರು, ಮುಖಂಡರಾದ ಸುಭಾಷ್ ಮಾಡ್ರಳ್ಳಿ, ರಂಗಸ್ವಾಮಿ, ಮುತ್ತಣ್ಣ ಉಪಸ್ಥಿತರಿದ್ದರು.

## ಶ್ರೀ ಅರ್ಕೇಶ್ವರ ಸ್ವಾಮಿ ಶಿಲಾಮಯ ಕಟ್ಟಡ ವೀಕ್ಷಣೆ

# ಶೃಂಗೇರಿ ಜಗದ್ಗುರುಗಳ ರಾಮನಗರ ಭೇಟಿ

ರಾಮನಗರ: ಅರ್ಕಾವತಿ ನದಿ ತೀರದಲ್ಲಿ ಪುನರ್ ನಿರ್ಮಾಣವಾಗುತ್ತಿರುವ ಶ್ರೀ ಅರ್ಕೇಶ್ವರ ಸ್ವಾಮಿ ದೇವಾಲಯಕ್ಕೆ ಶೃಂಗೇರಿ ಶಾರದ ಪೀಠಾಧ್ಯಕ್ಷರಾದ ಜಗದ್ಗುರು ಶೀ ವಿಧುಶೇಖರ ಸ್ವಾಮೀಜಿ ಅವರು ಭೇಟಿ ನೀಡಿದ್ದರು.



ಶಿಲಾಮಯ ಕಟ್ಟಡವನ್ನು ವೀಕ್ಷಿಸಿದ ಸ್ವಾಮೀಜಿ ನಿರ್ಮಾಣದ ಪ್ರಗತಿಯ ಬಗ್ಗೆ ಸ್ವಾಮೀಜಿಯವರು ಶ್ರೀ ಅರ್ಕೇಶ್ವರ ಸ್ವಾಮಿ ಸೇವಾ ಸಂಘದ ಪದಾಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಪಶ್ಚಿಮಾಭಿಮುಖಿಯಾಗಿರುವ ದೇವಾಲಯದ ಇತಿಹಾಸ ಮತ್ತು ವಿಶೇಷತೆಗಳನ್ನು ಪದಾಧಿಕಾರಿ ಗಳು ಸ್ವಾಮೀಜಿ ಅವರ ಗಮನಕ್ಕೆ ತಂದರು.



ತದನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಸೇವಾ ಸಂಘದ ಮುಖ್ಯಸ್ಥ ಸಿ.ಎನ್. ಆರ್. ವೆಂಕಟೇಶ್, ಶೃಂಗೇರಿ ಮಹಾ ಪೀಠದ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ದೇವಾಲಯ ಪುನರ್ ನಿರ್ಮಾಣವಾಗುತ್ತಿದೆ. ದೇವಾಲಯ ಹಳೆಯ ಕಟ್ಟಡವನ್ನು ತೆರವುಗೊಳಿಸುವ ಮುನ್ನ ಶ್ರೀಗಳ ಮಾರ್ಗದರ್ಶನ ಪಡೆಯಲಾಗಿತ್ತು. ಕಲಾಕರ್ಷಗೆ ಅವರ ಸಹಕಾರ ದೊರಕಿತ್ತು. ಇಂದು ರಾಮನಗರಕ್ಕೆ ಅವರು ಭೇಟಿ ನೀಡಿದ್ದು, ಅವರನ್ನು ನಿರ್ಮಾಣ ಹಂತದಲ್ಲಿರುವ ದೇವಾಲಯ ವೀಕ್ಷಣೆಗೆ ಆಹ್ವಾನಿಸಲಾಗಿತ್ತು ಎಂದು ತಿಳಿಸಿದರು. ದೇವಾಲಯ ಪೂರ್ಣವಾಗಲು ಇನ್ನು ಗೋಪುರಗಳ ನಿರ್ಮಾಣವಾಗಬೇಕಾಗಿದೆ. ದೇವಾಲಯ ಶೀಘ್ರದಲ್ಲಿ ಪೂರ್ಣಗೊಳ್ಳಲು ಭಕ್ತರು ಮತ್ತು ದಾನಿಗಳ ಸಹಕಾರ ಅಗತ್ಯವಿದೆ. ದೇವಾಲಯ ಪೂರ್ಣಗೊಂಡ ನಂತರ ಪುನಃ ಶೃಂಗೇರಿ ಮಹಾಪೀಠದ ಸ್ವಾಮೀಜಿ ಅವರ ಸಾನಿಧ್ಯವನ್ನು ಬಯಸಿದ್ದೇವೆ ಎಂದು ತಿಳಿಸಿದರು.

ಸ್ವಾಮೀಜಿ ಅವರ ಭೇಟಿಯ ವೇಳೆ ಸೇವಾ ಸಮಿತಿಯ ಪ್ರಮುಖರಾದ ಮುಧುರೈ ವೀರನ್, ಕೆ.ಆರ್.ನಾಗೇಶ್, ಆರ್.ಜಿ.ಚಂದ್ರಶೇಖರ್, ಎಸ್.ಟಿ.ನಂದೀಶ್, ಶೇಷಗಿರಿರಾವ್, ಎ.ಎಸ್. ಕೃಷ್ಣಮೂರ್ತಿ ಮತ್ತು ವಿವಿಧ ದೇವಾಲಯಗಳ ಅರ್ಚಕರು ಹಾಜರಿದ್ದರು.

# ಪೌರಕಾರ್ಮಿಕರಿಗೆ ಸರ್ಕಾರಿ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಿ: ಸಿ. ಶಂಕರ ನುಡಿ




**ಮಂಡ್ಯ:** ಪೌರಕಾರ್ಮಿಕರಿಗೆ ಸರ್ಕಾರದ ಸೌಲಭ್ಯ, ಸವಲತ್ತು ಗಳನ್ನು ನಿಗದಿತ ಕಾಲಮಿತಿಯಲ್ಲಿ ಸಮರ್ಪಕವಾಗಿ ತಲುಪಿಸಲು ಮುಂದಾಗುವಂತೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಸಿ. ಶಂಕರ ಅಂಕನಶೆಟ್ಟಿಪುರ ನಗರಸಭೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಂಡ್ಯ ನಗರದ ಅಂಬೇಡ್ಕರ್ ಭವನದ ಮಿನಿ ಸಭಾಂಗಣದಲ್ಲಿ ನಡೆದ ಪೌರಾಕಾರ್ಮಿಕರೊಡನೆ ನೇರ ಸಂವಾದ ಮತ್ತು ಅಧಿಕಾರಿಗಳೊಡನೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಸರ್ಕಾರದ ಮಾರ್ಗಸೂಚಿಗಳನ್ವಯ ಪೌರಕಾರ್ಮಿಕರಿಗೆ ಸೌಲಭ್ಯಗಳನ್ನು ತಲುಪಿಸುವಲ್ಲಿ ನಿರ್ಲಕ್ಷ್ಯ ವಹಿಸಿದಲ್ಲಿ ಆಯೋಗದ ವತಿಯಿಂದ ನಿರ್ದಾಕ್ಷಿಣ್ಯ ಕ್ರಮ ವಹಿಸಲಾಗುವುದು ಎಂದು ತಾಕೀತು ಮಾಡಿದರು.

ಪ್ರತಿನಿತ್ಯ ನಗರಸ್ವಚ್ಚತೆ ಕಾಯಕ ಮಾಡುವ ಪೌರಕಾರ್ಮಿಕರ ಹಿತ ಕಾಪಾಡಲು ನಗರಸಭೆ ಬದ್ಧವಾಗಿರಬೇಕು. ಪೌರಕಾರ್ಮಿಕರ ಜೀವನ ನಿರ್ವಹಣೆಗೆ ತೊಂದರೆಯಾಗದಂತೆ ಪ್ರತಿ ತಿಂಗಳು 5 ರೊಳಗೆ ವೇತನ ಪಾವತಿಸಬೇಕು. ಸಮವಸ್ತ್ರ, ಕೈಗೌಸ್, ಗಮ್‌ಬೂಟ್, ಮಾಸ್ಕ್ ಸೇರಿದಂತೆ ಆರೋಗ್ಯ ಸುರಕ್ಷಾ ಪರಿಕರಗಳನ್ನು ಸಮರ್ಪಕವಾಗಿ ಒದಗಿಸಬೇಕು. ಹೊರಗುತ್ತಿಗೆ ನೇಮಕದಲ್ಲಿನ ಮಾನದಂಡಗಳನ್ನು ಏಜೆನ್ಸಿದಾರರು ಕಡ್ಡಾಯವಾಗಿ ಪಾಲಿಸಬೇಕು. ತಪ್ಪಿದಲ್ಲಿ ಏಜೆನ್ಸಿದಾರರಿಗೆ ನೋಟಿಸ್ ಜಾರಿಗೊಳಿಸಿ ಕಪ್ಪುಪಟ್ಟಿಗೆ ಸೇರಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪೌರಕಾರ್ಮಿಕರಿಗೆ ಗುಣಮಟ್ಟದ ಬೆಳಗಿನ ಉಪಹಾರ ನೀಡಬೇಕು. ಗುರುತಿನ ಚೀಟಿ ನೀಡಬೇಕು. ಇ.ಎಸ್.ಐ ಮತ್ತು ಪಿಎಫ್ ಕ್ರಮಬದ್ಧವಾಗಿ ಕಟಾವಣೆಯಾಗಬೇಕು. ನಿಯಮಿತವಾಗಿ ಆರೋಗ್ಯ ತಪಾಸಣೆಗೆ ವ್ಯವಸ್ಥೆ ಮಾಡಬೇಕು ಎಂದರು.

ಕಾರ್ಯಕ್ರಮಕ್ಕೂ ಮುನ್ನ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಸಿ. ಶಂಕರ ಅಂಕನಶೆಟ್ಟಿಪುರ ರವರು ಹಲಹಳ್ಳಿ ಸ್ಲಮ್ ಬೋರ್ಡ್ ಮತ್ತು ಪಿ.ಕೆ. ಕಾಲೋನಿ(ಪೂರ್ಣ ಕಾರ್ಮಿಕರ ಕಾಲೋನಿ)ಗಳಿಗೆ ಭೇಟಿ ನೀಡಿ ಪೌರಕಾರ್ಮಿಕರ ಸಮಸ್ಯೆಗಳು ಹಾಗೂ ಕುಂದುಕೊರತೆಗಳನ್ನು ಆಲಿಸಿದರು.

ನೆಹರು ನಗರದಕ್ಕೆ ಭೇಟಿ ನೀಡಿ ಪೌರಾಕಾರ್ಮಿಕರಿಗೆ ಹಕ್ಕು ಪತ್ರ ವಿತರಣೆ ಕುರಿತು ಸಮಸ್ಯೆಗಳನ್ನು ಪರಿಶೀಲಿಸಲಾಯಿತು ಹಾಗೂ ಪೌರಾಕಾರ್ಮಿಕರಿಗಾಗಿ ಸಮುದಾಯ ಭವನವನ್ನು ನಿರ್ಮಾಣದ ಲೋಪದೋಷಗಳನ್ನು ಹಾಗೂ ಹಲಹಳ್ಳಿಯಲ್ಲಿ ಸ್ಲಮ್ ಬೋರ್ಡ್ ನಲ್ಲಿ ಕಾರ್ಮಿಕರಿಗಾಗಿ ಮನೆಗಳನ್ನು ನಿರ್ಮಿಸಲಾಗಿದ್ದು ಮನೆಗಳನ್ನು ಕಳಪೆ ಕಾಮಗಾರಿ ಕುರಿತು ಪರಿಶೀಲನೆ ಮಾಡಲಾಯಿತು ಎಂದರು.

ಕಾರ್ಯಕ್ರಮದಲ್ಲಿ ನಗರಸಭೆಯ ಪೌರಯುಕ್ತರಾದ ಯು. ಪಿ. ಪಂಪಶ್ರೀ, ಸಿ. ಶಂಕರ್, ರುದ್ರೇಗೌಡ ಮತ್ತು ನಗರಸಭೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ನಶಾ ಮುಕ್ತ ಕರ್ನಾಟಕ: ಮಕ್ಕಳ ಸಹಬಾಗಿತ್ವ ಸಹಕಾರ ಅಗತ್ಯ: ಎಸ್ಪಿ

**ಮಂಡ್ಯ:** ಮಾದಕ ವ್ಯಸನವು ಕೇವಲ ವ್ಯಕ್ತಿಯ ಆರೋಗ್ಯವನ್ನು ಹಾಗೂ ಕುಟುಂಬ ಮತ್ತು ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುತ್ತದೆ. ಮಾದಕ ವಸ್ತು ಮುಕ್ತ ಸಮಾಜವನ್ನು ನಿರ್ಮಿಸುವಲ್ಲಿ ಎಲ್ಲಾ ಮಕ್ಕಳ ಸಹಭಾಗಿತ್ವ ಸಹಕಾರಿಯಾಗಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶೋಭಾರಾಣಿ ವಿ.ಜೆ ರವರು ತಿಳಿಸಿದರು.

ಮಂಡ್ಯ ನಗರದ ಜೆ.ಸಿ.ವೃತ್ತದಲ್ಲಿ ಸೋಮವಾರ ನಡೆದ ಜಿಲ್ಲಾ ಪೊಲೀಸ್,ಮಂಡ್ಯ ಉಪವಿಭಾಗ ಇವರ ವತಿಯಿಂದ ಅಂತರರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ ಮತ್ತು ಜಾಗೃತಿ ಜಾಥ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಕ್ಕಳು ತಮ್ಮ ಸುತ್ತಮುತ್ತಲಿನಲ್ಲಿ ಹಾಗೂ ಸ್ನೇಹಿತರು ಮಾದಕ ವಸ್ತು ಸೇವನೆ ಮಾಡುತ್ತಿರುವುದು ಕಂಡುಬಂದಲ್ಲಿ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು. ಮತ್ತು ಮಾದಕ ದ್ರವ್ಯ ಸೇವನೆ ಮಾಡುವುದರಿಂದ ಆಗುವ ದುಷ್ಪರಿಣಾಮ ಕುರಿತು ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಪರ ಪೊಲೀಸ್ ತಿಮ್ಮಯ್ಯ,ಡಿವೈಎಸ್ಪಿ.ಲಕ್ಷ್ಮೀನಾರಯಣ್, ಅಧಿಕಾರಿಗಳಾದ ಸಿ.ಪಿ.ಐ.ಸಿದ್ದರಾಜು ಎಸ್.ಐ. ಮಣಿ, ಸವಿತಾ ಪಾಟೀಲ್,ಟ್ರಾಫಿಕ್ ಪೊಲೀಸ್ ಮೋಹನ್ ಕುಮಾರ್,ಗಿರೀಶ್ ರವರು ಹಾಜರಿದ್ದರು.




# ಶಿಕ್ಷಣದಲ್ಲಿ ದೇಶದ ಪ್ರಗತಿಯ ಒಂದು ಚಿಂತನೆ ವಿಚಾರ ಸಂಕಿರಣ ಕಾರ್ಯಕ್ರಮ

ಮಂಡ್ಯ: ಕನ್ನಡಸೇನೆ ಕರ್ನಾಟಕ ಸಂಘಟನೆಯಿಂದ ಇಂದಿನ ಶಿಕ್ಷಣದಲ್ಲಿ ದೇಶದ ಪ್ರಗತಿಯ ಒಂದು ಚಿಂತನೆ ವಿಚಾರ ಸಂಕಿರಣ ಕಾರ್ಯಯಕ್ರಮವನ್ನು ಜು.2ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಎಚ್.ಸಿ.ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಶೈಕ್ಷಣಿಕ ಅಭಿವೃದ್ಧಿ ವಿಚಾರವಾಗಿ ಗಣ್ಯರ ಜತೆ ಚಿಂತನೆ ನಡೆಸಿ ನಿರ್ಣಯಗಳನ್ನು ಕೈಗೊಳ್ಳುವ ಸಲುವಾಗಿ ಈ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮವನ್ನು ಮಾಜಿ ಶಿಕ್ಷಣ ಸಚಿವ ಎನ್. ಮಹೇಶ್ ಉದ್ಘಾಟಿಸುವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಳಿಮಲೆ ವಿಚಾರ ಮಂಡನೆ ಮಾಡುವರು. ಕನ್ನಡ ಸೇನೆ ಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷ ಕೆ.ಆರ್. ಕುಮಾರ್ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಮನೋಜವಂ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ಡಿ.ಆರ್.ಸುಮನ್ ಕನ್ನಡ ಸೇನೆಯ ರಾಜ್ಯಾ ಉಪಾಧ್ಯಕ್ಷ ಎನ್. ಮುನಿರಾಜೇಗೌಡ, ಕಾರ್ಯಾಧ್ಯಕ್ಷ ಮುನಿಕೃಷ್ಣ, ಮಹಿಳಾ ಜಿಲ್ಲಾಧ್ಯಕ್ಷೆ ಸೌಭಾಗ್ಯ ಶಿವಲಿಂಗು, ಜಿಲ್ಲಾ ಕಾರ್ಯಾಧ್ಯಕ್ಷ ಮಂಡಿಬೆಟ್ಟಹಳ್ಳಿ ಮಂಜುನಾಥ್ ಭಾಗವಹಿಸುವುದಾಗಿ ವಿವರಿಸಿದರು.

ಗೋಷ್ಠಿಯಲ್ಲಿ ರಾಜ್ಯ ಸಂಚಾಲಕಿ ದೇವಮ್ಮ, ಮಹಿಳಾ ಜಿಲ್ಲಾಧ್ಯಕ್ಷೆ ಸೌಭಾಗ್ಯ ಶಿವಲಿಂಗು, ಜಿಲ್ಲಾ ಕಾರ್ಯಾಧ್ಯಕ್ಷ ಮಂಡಿಬೆಟ್ಟಹಳ್ಳಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಕಮ್ಮನಾಯಕನಹಳ್ಳಿ ಮಂಜುನಾಥ್, ಮುಖಂಡ ಸತೀಶ್ ಇದ್ದರು.




# ಮಂಡ್ಯ ಮೈಶುಗರ್ ಕಾರ್ಖಾನೆ ಅವ್ಯವಹಾರ ಆರೋಪ:

## ವಾರದೊಳಗೆ ಬಹಿರಂಗ ಚರ್ಚೆಗೆ ಬನ್ನಿ | ಬಿಜೆಪಿ ರೈತ ಮೋರ್ಚಾ ಆಗ್ರಹ

**ಮಂಡ್ಯ:** ಮೈಶುಗರ್ ಕಾರ್ಖಾನೆಯಲ್ಲಿನ ಅವ್ಯವಹಾರಗಳ ಬಗ್ಗೆ ಒಂದು ವಾರದೊಳಗೆ ಬಹಿರಂಗ ಚರ್ಚೆಗೆ ಆಹ್ವಾನಿಸಿ ಸ್ಪಷ್ಟನೆ ನೀಡಬೇಕು ಎಂದು ಬಿಜೆಪಿ ರೈತಮೋರ್ಚಾದ ಜಿಲ್ಲಾಧ್ಯಕ್ಷ ಅಶೋಕ್ ಜಯರಾಂ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹಿರಂಗ ಚರ್ಚೆಗೆ ಲಿಖಿತ ರೂಪದಲ್ಲಿ ಪ್ರಶ್ನೆಗೆ ಆಹ್ವಾನಿಸಿದ ಅಧ್ಯಕ್ಷರು ಯಾವುದೇ ಪ್ರಶ್ನೆ ಬಂದಿಲ್ಲ ಎಂದು ಬೇಜವಾಬ್ದಾರಿ ತನದಿಂದ ಚರ್ಚೆಯನ್ನು ಮುಟುಕುಗೊಳಿಸಿದ್ದಾರೆ. ಕೂಡಲೇ ಮೈಶುಗರ್ ಆಡಳಿತ ಮಂಡಳಿಯ ವ್ಯವಹಾರದ ಬಗೆಗಿನ ಶ್ವೇತಪತ್ರ ಹೊರಡಿಸಬೇಕು. ಇಲ್ಲವಾದಲ್ಲಿ ಬಿಜೆಪಿ ಪಕ್ಷದಿಂದ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಕಾರ್ಖಾನೆಯ 2ನೇ ಪ್ರಮುಖ ಭಾಗವಾದ ಬಿ ಮಿಲ್‌ನ ವಿಲೇವಾರಿಗೆ ದರದ ಅಂದಾಜನ್ನು ಸರಕಾರಿ ಸ್ವಾಧೀನ ಸಂಸ್ಥೆಯಿಂದ ಮಾಡಿಸದೇ ಖಾಸಗಿ ಸಂಸ್ಥೆಯಿಂದ ಅಂದಾಜಿಸಿಸಲಾಗಿದೆ. ಕಾರ್ಖಾನೆಯ ಸ್ಥಿರಾಸ್ತಿಯನ್ನು ಸರಕಾರದ ಗಮನಕ್ಕೆ ತರದೇ, ಮ್ಯಾನ್ಯುವಲ್ ಟೆಂಡರ್ ಮೂಲಕ ವಿಲೇವಾರಿ ಮಾಡಲಾಗಿದೆ. ಕಳೆದ ಬಾರಿ 1.20 ಲಕ್ಷ ಟನ್ ಕಬ್ಬು ಅರೆದಿದ್ದರೂ ಈ ಹಂಗಾಮಿನಲ್ಲಿ 5 ಲಕ್ಷ ಟನ್‌ಗೂ ಹೆಚ್ಚು ಕಬ್ಬನ್ನು ನುರಿಸುವ ಸಂಬಂಧ ಮಾನವ ಸಂಪನ್ಮೂಲ ಒದಗಿಸುವ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿ, ಸಂಸ್ಥೆಗೆ ನಷ್ಟ ಉಂಟು ಮಾಡುವುದು ಎಷ್ಟು ಸೂಕ್ತ ಎಂದು ಪ್ರಶ್ನಿಸಿದರು.

ನಗರಸಭೆ ಮಾಜಿ ಸದಸ್ಯ, ಬಿಜೆಪಿ ಮುಖಂಡ ಶಿವಕುಮಾರ್ ಮಾತನಾಡಿ, ಮೈಶುಗರ್ ಕಾರ್ಖಾನೆಯನ್ನು ಪಾರದರ್ಶಕವಾಗಿ ನಡೆಸುತ್ತಿರುವುದಾಗಿ ಅಧ್ಯಕ್ಷರು ಹೇಳಿದ್ದಾರೆ. ಆದರೆ ಕಳೆದೆರಡು ಸಾಲಿನಲ್ಲಿ ನಷ್ಟದಲ್ಲಿ ನಡೆಯುತ್ತಿರುವುದರ ಬಗ್ಗೆ ಹಾಗೂ ಅವರ ವಿರುದ್ಧ ಲೋಕಾಯುಕ್ತದಲ್ಲಿ ದೂರು ದಾಖಲಾಗಿರುವುದರ ಬಗ್ಗೆ ಮಾಹಿತಿ ನೀಡಬೇಕು. ಮಾಜಿ ಅಧ್ಯಕ್ಷ ನಾಗರಾಜಪ್ಪ ಅವರೊಂದಿಗೆ ಸಿ.ಡಿ.ಗಂಗಾಧರ್ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಆದ್ದರಿಂದ ಯಾವುದೇ ಕ್ರಮ ಕೈಗೊಂಡಿಲ್ಲ. ಅವರ ಪಕ್ಷದ ಸರಕಾರವೇ ಅಧಿಕಾರದಲ್ಲಿದ್ದು ಕಳೆದ 3 ವರ್ಷಗಳಿಂದ 127 ಕೋಟಿ ರೂ ಹಗರಣ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವಂತೆ ಒತ್ತಾಯಿಸಿದರು.




ಮೈಶುಗರ್‌ನ ಪ್ರಭಾರ ವ್ಯವಸ್ಥಾಪಕ ಮಂಗಲ್‌ದಾಸ್ ಅವರಿಗೆ ಕಾನೂನು ಹಾಗೂ ಕಾರ್ಖಾನೆಯ ತಾಂತ್ರಿಕ ವಿಭಾಗದ ಅನೂಭವವಿಲ್ಲ. ಸರಕಾರದ ಕಬ್ಬು ಅಭಿವೃದ್ಧಿ ಆಯುಕ್ತರ ಜ್ಞಾಪನ ಪತ್ರದ ಗಂಭೀರ ವಿಷಯಗಳಿಗೆ ಉತ್ತರ ನೀಡದೇ ಕರ್ತವ್ಯ ಲೋಪ ಎಸಗಿದ್ದಾರೆ. ಈ ಕೂಡಲೇ ಅವರನ್ನು ವಜಾಗೊಳಿಸಿ ಕಾರ್ಖಾನೆಗೆ ತಾಂತ್ರಿಕ ಜ್ಞಾನವುಳ್ಳ ಕಾಯಂ ಅಧಿಕಾರಿ ನೇಮಕ ಮಾಡಬೇಕು. ಜಿಲ್ಲಾಧಿಕಾರಿಗಳು ಕಾರ್ಖಾನೆಗೆ ಭೇಟಿ ನೀಡಿದ ವೇಳೆ ಮನವಿ ಸಲ್ಲಿಸಲು ಅವಕಾಶ ಮಾಡಿಕೊಟ್ಟ ಕಾರ್ಖಾನೆಯ ಸಹಾಯಕ ಭದ್ರತಾಧಿಕಾರಿ ಬಿ.ಎನ್.ವಿಜೇತ್‌ಕುಮಾರ್ ಅವರನ್ನು ಅಮಾನತು ಮಾಡಿರುವುದು ಸರಿಯಲ್ಲ. ಮೈಶುಗರ್ ಅಧ್ಯಕ್ಷರು ನನ್ನನ್ನು ಖಾಸಗಿ ಕಾರ್ಖಾನೆಯೊಂದಿಗೆ ಶಾಮೀಲಾಗಿರುವುದಾಗಿ ಹೇಳಿಕೆ ನೀಡಿದ್ದಾರೆ. ಈ ಸಂಬಂಧ ದಾಖಲೆ ಬಿಡುಗಡೆ ಮಾಡಬೇಕು ಎಲ್ಲವಾದಲ್ಲಿ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಎಚ್ಚರಿಕೆ ನೀಡಿದರು.

ಗೋಷ್ಠಿಯಲ್ಲಿ ರೈತಮೋರ್ಚಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಆರ್.ಅಶೋಕ್‌ಕುಮಾರ್, ಬಿಜೆಪಿ ನಗರ ಘಟಕದ ಅಧ್ಯಕ್ಷ ಪ್ರಸನ್ನಕುಮಾರ್, ತಾಲೂಕು ಅಧ್ಯಕ್ಷ ಭೀಮೇಶ್, ಅಂಕಪ್ಪ ಇದ್ದರು.

# ಎಸ್‌ಐಆರ್: ಇಂದಿನಿಂದ ಮನೆ ಮನೆ ಭೇಟಿ

**ರಾಮನಗರ:** ಚುನಾವಣಾ ಆಯೋಗವು ಕರ್ನಾಟಕ ರಾಜ್ಯದಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ–2026 (ಎಸ್‌ಐಆರ್) ಕ್ಕಾಗಿ 2026ರ ಮೇ 14ರಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿತ್ತು.


ಇದರ ಅಂಗವಾಗಿ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಜೂ. 30 ರಿಂದ ಜುಲೈ 29 ರವರೆಗೆ ಮನೆ ಮನೆ ಭೇಟಿ ನೀಡಿ, ಎನ್ಯುಮರೇಶನ್ ಫಾರ್ಮ್‌ಗಳನ್ನು (Enumeration Form) ದ್ವಿಪ್ರತಿಯಲ್ಲಿ ಪ್ರತಿಯೊಬ್ಬ ಮತದಾರರಿಗೆ ನೀಡಲಿದ್ದು, ಅವುಗಳನ್ನು ಭರ್ತಿ ಮಾಡಿ, ಮತಗಟ್ಟೆ ಮಟ್ಟದ ಅಧಿಕಾರಿಗಳವರಿಗೆ (ಬಿಎಲ್‌ಒ) ಹಿಂತಿರುಗಿಸಲು ಜಿಲ್ಲೆಯ ಎಲ್ಲಾ ಮತದಾರರಲ್ಲಿ ಕೋರಿದೆ. ಚುನಾವಣಾ ಆಯೋಗದ https://voters.eci.gov.in/ (Voters Service Portal) ಹಾಗೂ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳು ಇವರ https://ceo.karnataka.gov.in/ ಅಂತರ ಜಾಲತಾಣಗಳಲ್ಲಿ (Website) ಮತ್ತು ಜಿಲ್ಲಾ ವೆಬ್‌ಪೋರ್ಟಲ್ https://bengalurusouth.nic.in/ ಮೂಲಕ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ–2026 (ಎಸ್‌ಐಆರ್) ಕುರಿತು ಹೆಚ್ಚಿನ ಮಾಹಿತಿ ಪಡೆಯಬಹುದಾಗಿರುತ್ತದೆ.


ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಜಿಲ್ಲಾ ಮತದಾರರ ಸಹಾಯವಾಣಿ–1950 (ಟೋಲ್ ಫ್ರೀ ನಂಬರ್) ಸಂಖ್ಯೆಗೆ ಕರೆ ಮಾಡಿ ಅವಶ್ಯಕ ಮಾಹಿತಿ ಮತ್ತು ಸಲಹೆಗಳನ್ನು ಪಡೆಯಬಹುದಾಗಿದೆ. ಜಿಲ್ಲೆಯ ಎಲ್ಲಾ ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಅಪರ ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಅಪರ ಜಿಲ್ಲಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮತಕ್ಕಾಗಿ ಜಾತಿ-ಧರ್ಮದ ಪಟಾಕಿ ಹಚ್ಚಬೇಡಿ



| ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ





ಒಂದು ಚುನಾವಣೆಯು ಐದು ವರ್ಷಕ್ಕೊಮ್ಮೆ ಬರುತ್ತದೆ. ಆದರೆ ಅಕ್ಕ–ಪಕ್ಕದ ಮನೆಯ ಸಂಬಂಧಗಳು ಪ್ರತಿದಿನ ಬದುಕಿನ ಭಾಗವಾಗಿರುತ್ತವೆ. ಮತ ಕೇಳುವವರು ಬರುತ್ತಾರೆ, ಭರವಸೆಗಳನ್ನು ನೀಡುತ್ತಾರೆ, ಜಾತಿ–ಧರ್ಮದ ಹೆಸರಿನಲ್ಲಿ ಭಾವನೆಗಳನ್ನು ಕೆರಳಿಸುತ್ತಾರೆ, ಚುನಾವಣೆ ಮುಗಿದ ಬಳಿಕ ತಮ್ಮ ದಾರಿಯನ್ನು ಹಿಡಿಯುತ್ತಾರೆ. ಆದರೆ ಉಳಿಯುವುದು ನಾವು?ಒಂದೇ ಬೀದಿಯಲ್ಲಿ, ಒಂದೇ ಊರಲ್ಲಿ, ಒಂದೇ ನೆಲದ ಮೇಲೆ ಬದುಕುವ ಅಕ್ಕ–ಪಕ್ಕದವರು.

ಇಂದು ಸಮಾಜದ ದೊಡ್ಡ ಸವಾಲು ಬಡತನವಲ್ಲ, ನಿರುದ್ಯೋಗವೂ ಅಲ್ಲ. ಜನರ ಮನಸ್ಸಿನೊಳಗೆ ದ್ವೇಷದ ಕಿಡಿಯನ್ನು ಹಚ್ಚುವುದು. ರಾಜಕೀಯದ ಲಾಭಕ್ಕಾಗಿ ಜಾತಿಯ ಹೆಸರನ್ನು ಬಳಸುವುದು, ಧರ್ಮದ ಹೆಸರಿನಲ್ಲಿ ಗೋಡೆಗಳನ್ನು ಕಟ್ಟುವುದು, ಭಾಷೆಯ ಹೆಸರಿನಲ್ಲಿ ಮನಸ್ಸುಗಳನ್ನು ವಿಭಜಿಸುವುದು?ಇವು ಸಮಾಜವನ್ನು ನಿಧಾನವಾಗಿ ಒಳಗಿನಿಂದಲೇ ದುರ್ಬಲಗೊಳಿಸುತ್ತವೆ.

ನಮ್ಮ ಅಕ್ಕ–ಪಕ್ಕದ ಮನೆಯವರು ನಮ್ಮ ಕಷ್ಟದಲ್ಲಿ ಮೊದಲು ಓಡಿ ಬರುವವರು. ರಾತ್ರಿ ಅನಾರೋಗ್ಯ ಬಂದಾಗ ಆಸ್ಪತ್ರೆಗೆ ಕರೆದೊಯ್ಯುವವರೂ ಅವರೇ. ಮನೆಯ ಶುಭ ಸಮಾರಂಭದಲ್ಲಿ ನಗುತ್ತಾ ಕೈ ಜೋಡಿಸುವವರೂ ಅವರೇ. ದುಃಖದ ಕ್ಷಣದಲ್ಲಿ ಕಣ್ಣೀರು ಒರೆಸುವವರೂ ಅವರೇ. ಅಂಥ ಸಂಬಂಧಗಳ ಮಧ್ಯೆ ರಾಜಕೀಯದ ಪಟಾಕಿ ಸಿಡಿಸಿದರೆ, ಒಡೆಯುವುದು ಕೇವಲ ಮತಗಳ ಲೆಕ್ಕವಲ್ಲ?ಮಾನವೀಯತೆಯ ಬಂಧ.

ಪಟಾಕಿ ಕೆಲವೇ ಕ್ಷಣಗಳಲ್ಲಿ ಸದ್ದು ಮಾಡಿ ಆರಿಹೋಗುತ್ತದೆ. ಆದರೆ ಅದರ ಹೊಗೆ ಸ್ವಲ್ಪ ಹೊತ್ತು ಉಳಿಯುತ್ತದೆ. ಅದೇ ರೀತಿ ಜಾತಿ–ಧರ್ಮದ ಹೆಸರಿನಲ್ಲಿ ಹಬ್ಬಿಸುವ ದ್ವೇಷದ ಮಾತು ಗಳು ಕೆಲವೇ ದಿನಗಳ ರಾಜಕೀಯಕ್ಕೆ ಉಪಯೋಗವಾಗಬಹುದು; ಆದರೆ ಅದರ ಹೊಗೆ ವರ್ಷಗಳ ಕಾಲ ಸಮಾಜವನ್ನು ಕಾಡುತ್ತದೆ. ಒಂದು ಸಣ್ಣ ಅನುಮಾನ, ಒಂದು ಕಟುವಾದ ಮಾತು, ಒಂದು ತಪ್ಪು ಪ್ರಚಾರ?ಇವುಗಳೇ ಜೀವಮಾನವಿಡೀ ಉಳಿಯುವ ಬಿರುಕುಗಳಿಗೆ ಕಾರಣವಾಗಬಹುದು.

ಯಾವ ಧರ್ಮವೂ ದ್ವೇಷವನ್ನು ಕಲಿಸುವುದಿಲ್ಲ. ಯಾವ ಸಂಸ್ಕೃತಿಯೂ ನೆರೆಯವನನ್ನು ಶತ್ರುವೆಂದು ನೋಡುವಂತೆ ಹೇಳುವುದಿಲ್ಲ. ದೇವಾಲಯದ ಗಂಟೆ, ಮಸೀದಿಯ ಅಝಾನ್, ಚರ್ಚಿನ ಘಂಟೆ?ಎಲ್ಲವೂ ಮನುಷ್ಯನೊಳಗಿನ ಒಳ್ಳೆಯತನವನ್ನು ಎಬ್ಬಿಸುವ ಸಂದೇಶಗಳೇ ಹೊರತು, ಪರಸ್ಪರ ದ್ವೇಷಿಸುವ ಆಹ್ವಾನಗಳಲ್ಲ.

ಚುನಾವಣೆಗಳು ಪ್ರಜಾಪ್ರಭುತ್ವದ ಹಬ್ಬವಾಗಬೇಕು. ಆದರೆ ಕೆಲವರು ಅದನ್ನು ಭಾವನೆಗಳ ವ್ಯಾಪಾರವಾಗಿಸುತ್ತಾರೆ. ಜನರ ನಿಜವಾದ ಸಮಸ್ಯೆಗಳಾದ ಶಿಕ್ಷಣ, ಉದ್ಯೋಗ, ಆರೋಗ್ಯ, ರೈತರ ಸಂಕಷ್ಟ, ಬೆಲೆ ಏರಿಕೆ?ಇವುಗಳ ಬಗ್ಗೆ ಮಾತನಾಡುವ ಬದಲು ಜಾತಿ ಮತ್ತು ಧರ್ಮದ ವಿಚಾರಗಳನ್ನು ಮುಂದಿಟ್ಟು ಮತಗಳನ್ನು ಗಳಿಸಲು ಪ್ರಯತ್ನಿಸುತ್ತಾರೆ. ಈ ಆಟದಲ್ಲಿ ಗೆಲ್ಲುವವರು ಕೆಲವೇ ಜನ; ಸೋಲುವವರು ಇಡೀ ಸಮಾಜ.

ಮಕ್ಕಳು ಜಾತಿಯನ್ನು ನೋಡಿ ಆಟವಾಡುವುದಿಲ್ಲ. ಧರ್ಮವನ್ನು ಕೇಳಿ ಸ್ನೇಹ ಮಾಡುವುದಿಲ್ಲ. ದೊಡ್ಡವರಾದ ನಂತರ ನಾವು ಕಲಿಸುವ ವಿಭಜನೆಯೇ ಅವರ ಮನಸ್ಸಿಗೆ ಸೇರುತ್ತದೆ. ಆದ್ದರಿಂದ ಮುಂದಿನ ಪೀಳಿಗೆಗೆ ನಾವು ನೀಡಬೇಕಾದ ದೊಡ್ಡ ಆಸ್ತಿ ಹಣವಲ್ಲ, ಮಾನವೀಯತೆ.

ಅಕ್ಕ–ಪಕ್ಕದವರು ಕೇವಲ ನೆರೆಯವರು ಅಲ್ಲ; ಅವರು ನಮ್ಮ ಜೀವನದ ಭದ್ರತೆ. ಮನೆಗೆ ಕಳ್ಳ ಬಂದರೆ ಮೊದಲು ಕೂಗುವವರು ಅವರೇ. ಬೆಂಕಿ ಹೊತ್ತಿಕೊಂಡರೆ ನೀರಿನ ಬಕೆಟ್ ಹಿಡಿದು ಓಡುವವರೂ ಅವರೇ. ಹಬ್ಬ ಬಂದಾಗ ಸಿಹಿ ಹಂಚಿಕೊಳ್ಳುವವರೂ ಅವರೇ. ಅಂತಹ ಸಂಬಂಧವನ್ನು ಕ್ಷಣಿಕ ರಾಜಕೀಯಕ್ಕಾಗಿ ಬಲಿಕೊಡುವುದು ಯಾವತ್ತೂ ಜಾಣ್ಮೆಯಲ್ಲ.

ನಾವು ಮತ ಚಲಾಯಿಸಬೇಕು?ಆದರೆ ದ್ವೇಷಕ್ಕೆ ಅಲ್ಲ. ನಾವು ನಾಯಕರನ್ನು ಆಯ್ಕೆ ಮಾಡಬೇಕು?ಆದರೆ ಸಮಾಜವನ್ನು ಒಡೆಯುವವರನ್ನು ಅಲ್ಲ. ಅಭಿವೃದ್ಧಿಯ ಮಾತು ಮಾಡುವವರನ್ನು, ಶಿಕ್ಷಣಕ್ಕೆ ಆದ್ಯತೆ ನೀಡುವವರನ್ನು, ಉದ್ಯೋಗ ಸೃಷ್ಟಿಸುವವರನ್ನು, ಎಲ್ಲರನ್ನು ಸಮಾನವಾಗಿ ಕಾಣುವವರನ್ನು ಬೆಂಬಲಿಸಬೇಕು.

ಒಂದು ಮತ ಐದು ವರ್ಷಗಳ ಸರ್ಕಾರವನ್ನು ನಿರ್ಧರಿಸಬಹುದು. ಆದರೆ ಒಂದು ಒಳ್ಳೆಯ ಸಂಬಂಧ ಜೀವಮಾನವಿಡೀ ನೆಮ್ಮದಿಯನ್ನು ಕೊಡುತ್ತದೆ. ಆದ್ದರಿಂದ ಮತದಾನ ಮಾಡುವ ಮುನ್ನ ಒಂದು ಕ್ಷಣ ಯೋಚಿಸೋಣ?ನನ್ನ ಪಕ್ಕದ ಮನೆಯವನೊಂದಿಗೆ ಇರುವ ಬಾಂಧವ್ಯ ದೊಡ್ಡದೋ, ಅಥವಾ ಯಾರಾದರೂ ಬಿತ್ತಿದ ದ್ವೇಷ ದೊಡ್ಡದೋ?

ಬನ್ನಿ, ರಾಜಕೀಯದ ಪಟಾಕಿಗಳನ್ನು ಅಲ್ಲ, ಮಾನವೀಯತೆಯ ದೀಪಗಳನ್ನು ಬೆಳಗಿಸೋಣ. ಜಾತಿ–ಧರ್ಮದ ಗೋಡೆಗಳನ್ನು ಅಲ್ಲ, ವಿಶ್ವಾಸದ ಸೇತುವೆಗಳನ್ನು ಕಟ್ಟೋಣ. ಚುನಾವಣೆಗಳು ಬರಲಿ, ಹೋಗಲಿ; ಆದರೆ ಅಕ್ಕ–ಪಕ್ಕದ ಅಣ್ಣ–ತಮ್ಮಂದಿರ ಪ್ರೀತಿ, ಗೌರವ ಮತ್ತು ಒಗ್ಗಟ್ಟು ಎಂದೆಂದಿಗೂ ಉಳಿಯಲಿ. ಅದುವೇ ನಿಜವಾದ ಭಾರತದ ಶಕ್ತಿ, ಅದುವೇ ನಮ್ಮ ಸಮಾಜದ ಸೌಂದರ್ಯ.



# ಕಾಡಿನ ಮಡಿಲಲ್ಲಿ ಮೊಳಗಿದ ಕೆಚ್ಚೆದೆಯ ಗೀತೆ-ಜಮುನಾ ತುಡು



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 55

ಕತ್ತಲಲ್ಲಿ ಕೊಡಲಿ ಝುಳಪಿಸಿದಾಗ ಕಾಡು ನಡುಗಿತು.ಆ ನಡುಕವೇ ಜಾರ್ಖಂಡ್‌ನ ಮಟುಕಮಹತು ಗ್ರಾಮದ ಸೊಸೆ ಜಮುನಾ ತುಡು ಅವರ ಎದೆಯಲ್ಲಿ ಬೆಂಕಿಯಾಯಿತು. 1998 ಕೈಯಲ್ಲಿ ಬಿಲ್ಲು–ಬಾಣ, ಜೊತೆಗೆ ಐವರು ಮಹಿಳೆಯರು ಮಾತ್ರ.ಎದುರಿಗೆ ಟಿಂಬರ್ ಮಾಫಿಯಾದ ಬಂದೂಕು,ನಕ್ಸಲರ ಬೆದರಿಕೆ,ಸಾವಿನ ನೆರಳು.ಆದರೂ ಅವರು ಹೆಜ್ಜೆ ಹಿಂದಿಡಲಿಲ್ಲ.ವನ್ ಸುರಕ್ಷಾ ಸಮಿತಿ ಹುಟ್ಟಿತು.

ಆ ಐವರ ಕೆಚ್ಚು ಇಂದು ಮುನ್ನೂರು ಉಪ–ಗುಂಪುಗಳ ದಾವಾನಲವಾಗಿದೆ.ಹತ್ತು ಸಾವಿರ ಮಹಿಳೆಯರ ಗಸ್ತು ಕಾಡಿನ ಉಸಿರನ್ನು ಕಾಯುತ್ತಿದೆ. ಇವರ ಕಾವಲಿನಿಂದ ಐವತ್ತು ಹೆಕ್ಟೇರ್‌ಗೂ ಹೆಚ್ಚು ಅರಣ್ಯ ಮತ್ತೆ ಚಿಗುರಿದೆ. ಆನೆ–ಜಿಂಕೆಗಳು ನಿರ್ಭಯವಾಗಿ ಓಡಾಡುತ್ತಿವೆ.ಜಮುನಾ ತುಡು ಅವರು ಕಾಡನ್ನು ಕಾಯಲಿಲ್ಲ, ಕಾಡಿನ ಆತ್ಮವನ್ನೇ ಜಾಗೃತಗೊಳಿಸಿದರು.

ಇವರ ಹೋರಾಟ ಹೊಸ ಸಂಸ್ಕೃತಿಯಾಯಿತು.ಹೆಣ್ಣು ಮಗು ಹುಟ್ಟಿದರೆ ಹದಿನೆಂಟು ಸಸಿಗಳ ಸಂಭ್ರಮ.ಮದುವೆಯಲ್ಲಿ ವಧೂವರರಿಗೆ ಗಿಡದ ಕಾಣಿಕೆ. ರಕ್ಷಾಬಂಧನದಂದು ಸಾವಿರಾರು ಮಹಿಳೆಯರು ಮರಗಳಿಗೆ ರಾಖಿ ಕಟ್ಟಿ ನಿನ್ನನ್ನು ಕಾಯುವೆ ಎಂದು ಪ್ರಮಾಣ ಮಾಡುತ್ತಾರೆ.

ಈ ಸಾಹಸಕ್ಕೆ 2019ರ ಪದ್ಮಶ್ರೀ, ಗಾಡ್ಫ್ರೆ ಫಿಲಿಪ್ಸ್ ಶೌರ್ಯ ಪ್ರಶಸ್ತಿ,ಸ್ತ್ರೀ ಶಕ್ತಿ ಪುರಸ್ಕಾರ ಒಲಿದಿವೆ.ಜಮುನಾ ತುಡು ಅವರ ದನಿ ಇಂದಿಗೂ ಗುಡುಗುತ್ತದೆ: ಹೆಣ್ಣುಮಕ್ಕಳು ಒಗ್ಗೂಡಿದರೆ, ಇಡೀ ಕಾಡೇ ಗುರಾಣಿಯಾಗುತ್ತದೆ. ಇವರ ಬದುಕು ಕೊಡಲಿಗೆ ಸವಾಲು, ಮುಂದಿನ ತಲೆಮಾರಿಗೆ ಹಸಿರು ಪಾಠ.

# ನಿರಾಲಂಬ ಶಿವಯೋಗಿ.. ಷಣ್ಮುಖ ಶಿವಯೋಗಿಗಳು

ಉಪೇಕ್ಷಿತ ವಚನಕಾರರು



| ವೀಣಾ ಹೇಮಂತ್‌ಗೌಡ ಪಾಟೀಲ್

ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲೂಕಿನ ಪ್ರತಿ ಮನೆಗಳಲ್ಲಿ ಷಣ್ಮುಖ ಶಿವಯೋಗಿಗಳ ವಚನಗಳನ್ನು ಮನೆ ಮನೆಯಲ್ಲಿ ಪಠಿಸಲಾಗುತ್ತದೆ. ಪ್ರತಿದಿನವೂ ಒಬ್ಬೊಬ್ಬರು ತಮ್ಮ ತಮ್ಮ ಮನೆಗಳಲ್ಲಿ ಷಣ್ಮುಖ ಶಿವಯೋಗಿಗಳ ವಚನಗಳ ಪಠಣ ಕಾರ್ಯಕ್ರಮವನ್ನು ಇಟ್ಟುಕೊಂಡು ಕಾರ್ಯಕ್ರಮದ ನಂತರ ಎಲ್ಲರಿಗೂ ತಮ್ಮ ಅನುಕೂಲಕ್ಕೆ ತಕ್ಕಂತೆ ಚಹಾ ಫಲಾಳದ ವ್ಯವಸ್ಥೆ ಇಲ್ಲವೇ ಊಟದ ವ್ಯವಸ್ಥೆಯನ್ನು ಮಾಡುತ್ತಾರೆ... ಇಲ್ಲಿ ಮುಖ್ಯವಾಗಿರುವುದು ಬಹುತೇಕ ಜನರು ಕಡ್ಡಾಯವಾಗಿ ತಮ್ಮ ಮನೆಗಳಲ್ಲಿ ವಚನಗಳನ್ನು ವಾಚಿಸುವುದು.

16ನೇ ಶತಮಾನದ ಕಾಲಘಟ್ಟದಲ್ಲಿ ಬದುಕಿದ ಷಣ್ಮುಖ ಶಿವಯೋಗಿಗಳನ್ನು ನಿರಾಲಂಬ ದೇವ ಎಂದು ಕೂಡ ಕರೆಯುತ್ತಿದ್ದರು. ನಿರಾಲಂಬ ಶರಣ ಷಣ್ಮುಖ ಶಿವಯೋಗಿ ಎಂಬ ಅನ್ವರ್ಥಕ ನಾಮ ಅವರದಾಗಿತ್ತು. ಶ್ರೇಷ್ಠ ಶಿವಶರಣರು ಹಾಗೂ ವಚನಕಾರರಾಗಿದ್ದ ಷಣ್ಮುಖ ಶಿವಯೋಗಿಗಳು 800ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ. ಅವರ ವಚನಗಳ ಅಂಕಿತನಾಮ ಅಖಂಡೇಶ್ವರ.


ಕಲ್ಯಾಣದ ಕ್ರಾಂತಿಯ ನಂತರ ಬಸವಾದಿ ಶಿವಶರಣರ ಪರಂಪರೆಯನ್ನು ಮುಂದುವರೆಸಿದ ಷಣ್ಮುಖ ಶಿವಯೋಗಿಗಳು ಮನೆ ಮನೆಗಳ ಮಾಡುಗಳಲ್ಲಿ ಗೋಡೆಯ ಒಳಭಾಗಗಳಲ್ಲಿ ಮುಚ್ಚಿ ಮರೆಯಾಗಿದ್ದ ವಚನಗಳ ಕಟ್ಟುಗಳನ್ನು ಹೊರಗೆ ತಂದು ವಚನ ಸಾಹಿತ್ಯವನ್ನು ಸಂರಕ್ಷಿಸಿದರು. ವಚನ ಸಾಹಿತ್ಯವನ್ನು ನಾಡಿನಾದ್ಯಂತ ಪ್ರಚುರಪಡಿಸಿದ ಅವರು ಸ್ವತಃ ತಾವು ಕೂಡ 800 ವಚನಗಳನ್ನು ರಚಿಸಿದರು. ಅವರ ವಚನಗಳಲ್ಲಿ ನಾವು ಭಕ್ತಿ, ಜ್ಞಾನ, ವೈರಾಗ್ಯ ಮತ್ತು ಶರಣರ ಅನುಭಾವದ ನೈಜ ಚಿತ್ರಣವನ್ನು ಕಾಣಬಹುದು.

ನಾಡಿನಾದ್ಯಂತ ಸಂಚರಿಸಿ ವಚನ ಜಾಗೃತಿಯನ್ನು ಮೂಡಿಸಿದ ಅವರು ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚ ರಾತ್ರಿ ಎಂಬ ತತ್ವವನ್ನು ಪಾಲಿಸಿದರು.

ಪ್ರತಿ ಹಳ್ಳಿಗಳಲ್ಲಿ ಒಂದು ರಾತ್ರಿ ಉಳಿದು ಅಲ್ಲಿಯ ಜನರಿಗೆ ಆಧ್ಯಾತ್ಮದ ಜ್ಞಾನವನ್ನು ಬೋಧಿಸುತ್ತಿದ್ದರು ತುಸು ದೊಡ್ಡ ಪಟ್ಟಣಗಳಲ್ಲಿ ಐದು ದಿನಗಳ ಕಾಲ ನಗರದ ವಿವಿಧ ಭಾಗಗಳಲ್ಲಿ ಜನರಿಗೆ ವಚನ ಬೋಧೆಯನ್ನು ಮಾಡುತ್ತಿದ್ದ ಅವರು ಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಿ ಯಶಸ್ವಿಯಾದರು.

ಅಂಗಕ್ಕೆ ಆಚಾರವೇ ಚೆಲುವು ಎಂಬುದು ಅವರ ಅತ್ಯಂತ ಪ್ರಸಿದ್ಧ ವಚನಗಳಲ್ಲಿ ಒಂದು. ದೈಹಿಕ ಚೆಲುವು ನಶ್ವರವಾದದ್ದು, ಮನುಷ್ಯ ತನ್ನ ನಡೆ ನುಡಿ ಆಚಾರಗಳ ಮೂಲಕ ಶಾಶ್ವತವಾದ ಚೆಲುವನ್ನು ಹೊಂದಬೇಕು ಎಂಬುದು ಅವರ ಆಶಯವಾಗಿತ್ತು

ಸಂಚಾರಿಯಾಗಿ ನಾಡಿನಾದ್ಯಂತ ವಚನಗಳ ಸಾರವನ್ನು



ಬೋಧಿಸಿದ ಅವರನ್ನು 'ಚರಚಕ್ರವರ್ತಿ ಷಣ್ಮುಖ ಶಿವಯೋಗಿ " ಎಂದು ಬಿರುದನ್ನಿತ್ತು ಗೌರವಿಸಿದ್ದಾರೆ.

ಅಂಗಕ್ಕೆ ಆಚಾರವೇ ಚೆಲುವು ಮನಕ್ಕೆ
ಮಹಾನುಭಾವವೇ ಚೆಲುವು ಆತ್ಮಂಗೆ ಅರುಹೇ ಚೆಲುವು,
ಅಖಂಡೇಶ್ವರನೆಂಬ ನಿಜವಿಂಬುಗೊಂಡವಂಗೆ ಶರಣರ ಸಂಗವೇ ಚೆಲುವು

ಎಂಬುದು ಆತನ ವಚನ.. ಇದರ ಸಾರ ಹೀಗಿದೆ.

ಮನುಷ್ಯನ ದೇಹಕ್ಕೆ ನಡೆ-ನುಡಿಗಳು ಎಂಬ ಆಚಾರ ಚೆನ್ನ, ಮನಸ್ಸಿಗೆ ಬುದ್ಧಿ, ತಿಳುವಳಿಕೆ ಎಂಬ ಅನುಭಾವದ ಮಾತುಗಳ ಪಾಲನೆಯೇ ಚಂದ ನಮ್ಮ ಆತ್ಮಕ್ಕೆ ಅರಿವು ಎಂಬ ಬೌದ್ಧಿಕತೆ ಚೆನ್ನ ಅಖಂಡೇಶ್ವರನಲ್ಲಿ ಸತ್ಯವನ್ನು ಅರಿತವನಿಗೆ ಶರಣರ ಸಂಗವೇ ಚೆಲುವೆಂದು ಅವರು ಹೇಳುತ್ತಾರೆ.

ಮನವೆಂಬ ಮರ್ಕಟನು ತನುವೆಂಬ ವಚನ ವೃಕ್ಷವನ್ನೇರಿ, ಇಂದ್ರಿಯಗಳೆಂಬ ಶಾಖೆ ಶಾಖೆಗೆ ಜಾರಿ, ವಿಷಯ ಫಲಗಳನ್ನುಣ್ಣುತ್ತಾ ಕೆತ್ತತ್ತ ಭವದತ್ತ ಹೋಗುತ್ತಿದೆ ನೋಡು ನಿಮ್ಮ ಭಕ್ತಿ ಎಂಬ ಮೋಹ ಪಾಶವ ಬಿಗಿದು ಅಪ್ಪಿಕೊಳ್ಳೋ ಅಖಂಡೇಶ್ವರ

ಎಂಬ ವಚನದಲ್ಲಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು ಹೀಗೆ...ಮನಸ್ಸು ಎಂಬ ಮರ್ಕಟ ಅಂದರೆ ಮಂಗವು, ನಮ್ಮ ದೇಹವೆಂಬ ವೃಕ್ಷವನ್ನು ಆವರಿಸಿಕೊಂಡಾಗ ಅದನ್ನು ಕಟ್ಟಿ ಹಿಡಿಯಲು ದೈವ ಭಕ್ತಿ ಎಂಬ ಮೋಹ ಪಾಶವನ್ನು ಬಿಗಿಯಬೇಕು. ಅದನ್ನು ಅಪ್ಪಿಕೊಳ್ಳುವ ಮೂಲಕ ಕಟ್ಟಿ ಹಾಕಬೇಕು. ಅಂತಹ ಭಕ್ತಿಯ ಪಾಶದಿಂದ ನನ್ನನ್ನು ಹಿಡಿದೆತ್ತು ದೇವರೇ ಎಂದು ದೇವರಲ್ಲಿ ಬೇಡಿಕೊಳ್ಳುವ ಎಂದು ಅವರು ಹೇಳುತ್ತಾರೆ. ಇಲ್ಲಿ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವ ಕುರಿತು ಅವರು ಹೇಳಿದ್ದು, ಅವರ ನೂರಾರು ವಚನಗಳನ್ನು ಓದಿದರೆ ನಮಗೆ ಅವರ ನಿಜವಾದ ವ್ಯಕ್ತಿತ್ವದ ಪರಿಚಯವಾದೀತು.

**ಅಂತಹ ಮಹಾನ್ ಶರಣ ಷಣ್ಮುಖ ಶಿವಯೋಗಿಗಳಿಗೆ ಶರಣು ಶರಣು**

# ಬೆವರಿನ ಮಳೆಯಿಂದ ಆತ್ಮದ ಉನ್ನತಿಯವರೆಗೆ: ಹಾಟ್, ಹಠ ಮತ್ತು ಸತ್ವ ಯೋಗದ ರಹಸ್ಯಗಳು!

ಅಧ್ಯಾಯ 3



| ರೂಪ ಮಂಜುನಾಥ ಹೊಳೆನರಸೀಪುರ



ಕಳೆದ ಅಧ್ಯಾಯದಲ್ಲಿ ನಾವು ಇಂದಿನ ಆಧುನಿಕ ಸಮಾಜದ ಅಗತ್ಯತೆಗಳಿಗೆ ತಕ್ಕಂತೆ ರೂಪಾಂತರಗೊಂಡಿರುವ ಚೇರ್ ಯೋಗ, ಪ್ರೆನೆಟಲ್ ಯೋಗ ಮತ್ತು ಯಿನ್ ಯೋಗಗಳಂತಹ ಪ್ರಕಾರಗಳನ್ನು ನೋಡಿದ್ದೆವು. ಆದರೆ ಯೋಗದ ಜಗತ್ತು ಅಲ್ಲಿಗೇ ಮುಗಿಯುವುದಿಲ್ಲ. ಇಂದು ಜಾಗತಿಕವಾಗಿ ಲಕ್ಷಾಂತರ ಜನರನ್ನು ಆಕರ್ಷಿಸುತ್ತಿರುವ, ದೇಹದ ತೂಕ ಇಳಿಸುವುದರಿಂದ ಹಿಡಿದು ಆತ್ಮದ ಉನ್ನತಿಯವರೆಗೆ ನೆರವಾಗುವ ಮೂರು ಅತ್ಯಂತ ಪ್ರಭಾವಶಾಲಿ ಯೋಗ ಪ್ರಕಾರಗಳು ಇಂದಿನ ಸಮಾಜದಲ್ಲಿ ಭಾರಿ ಸದ್ದು ಮಾಡುತ್ತಿವೆ.

ಅವುಗಳೇ ಹಠ ಯೋಗ, ಹಾಟ್ ಯೋಗ ಮತ್ತು ಸತ್ವ ಯೋಗ. ಇವುಗಳ ನಡುವಿನ ವ್ಯತ್ಯಾಸವೇನು? ಇವುಗಳಲ್ಲಿ ನಿಮ್ಮ ದೇಹಕ್ಕೆ ಯಾವುದು ಸೂಕ್ತ? ಬನ್ನಿ, ಆಳವಾಗಿ ತಿಳಿಯೋಣ:

1. ಹಠ ಯೋಗ **(Hatha Yoga)**

"ಎಲ್ಲಾ ಆಧುನಿಕ ಯೋಗಗಳ ತಾಯಿ; ದೇಹ ಮತ್ತು ಮನಸ್ಸಿನ ಪರಮ ಸಮತೋಲನ!"

ಹಠ ಯೋಗವು ಒಂದು ವ್ಯವಸ್ಥಿತ ಪದ್ಧತಿಯಾಗಿ ರೂಪುಗೊಂಡಿದ್ದು ಕ್ರಿ.ಶ. 10 ನೇ ಶತಮಾನದ ಆಸುಪಾಸಿನಲ್ಲಿ, ಭಾರತದ ನಾಥ ಸಂಪ್ರದಾಯದ ಯೋಗಿಗಳಿಂದ.

**ಆದಿನಾಥ (ಶಿವ):** ನಾಥ ಪರಂಪರೆಯ ಪ್ರಕಾರ, ಹಠ ಯೋಗದ ಮೊದಲ ಪ್ರವರ್ತಕ ಅಥವಾ ಗುರು ಸ್ವತಃ ಶಿವನೇ ಆಗಿದ್ದಾನೆ. ಆತನೇ ಈ ವಿದ್ಯೆಯನ್ನು ಪಾರ್ವತಿಗೆ ಉಪದೇಶಿಸಿದನು ಎಂದು ನಂಬಲಾಗಿದೆ.

ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥ: ಶಿವನಿಂದ ಬಂದ ಈ ರಹಸ್ಯ ವಿದ್ಯೆಯನ್ನು ಭೂಮಿಯ ಮೇಲೆ ಮೊದಲು ಪ್ರಚಾರ ಮಾಡಿದವರು ಯೋಗಿ ಮತ್ಸ್ಯೇಂದ್ರನಾಥರು. ಅವರ ಪ್ರಮುಖ ಶಿಷ್ಯರಾದ ಯೋಗಿ ಗೋರಕ್ಷನಾಥರು **(Gorakshanath)** 11 ನೇ ಶತಮಾನದಲ್ಲಿ ಹಠ ಯೋಗಕ್ಕೆ ಒಂದು ನಿರ್ದಿಷ್ಟ ರೂಪವನ್ನು ನೀಡಿ, ಭಾರತದಾದ್ಯಂತ ಜನಪ್ರಿಯಗೊಳಿಸಿದರು. ಇವರನ್ನು ಹಠ ಯೋಗದ ಪ್ರಕೃತ ಸ್ಥಾಪಕರೆಂದು ಪರಿಗಣಿಸಲಾಗುತ್ತದೆ.

ನೀವು ಇಂದು ಜಗತ್ತಿನಲ್ಲಿ ನೋಡುತ್ತಿರುವ ಬಹುತೇಕ ಎಲ್ಲಾ ಯೋಗ ಪ್ರಕಾರಗಳಿಗೂ ಮೂಲ ಅಡಿಪಾಯವೇ ಈ ಹಠ ಯೋಗ. ಸಂಸ್ಕೃತದಲ್ಲಿ 'ಹ' ಎಂದರೆ ಸೂರ್ಯ (ಶಕ್ತಿ ಮತ್ತು ಉಷ್ಣ) ಮತ್ತು 'ಠ' ಎಂದರೆ ಚಂದ್ರ (ಶಾಂತಿ ಮತ್ತು ಶೀತಲತೆ) ಎಂದು ಅರ್ಥ. ನಮ್ಮ ದೇಹದಲ್ಲಿರುವ ಈ ಎರಡು ಪರಸ್ಪರ ವಿರೋಧಿ ಶಕ್ತಿಗಳನ್ನು ಸಮತೋಲನಕ್ಕೆ ತರುವುದೇ ಹಠ ಯೋಗದ ಮುಖ್ಯ ಉದ್ದೇಶ.

ಇದರಲ್ಲಿ ಆಸನಗಳನ್ನು ಅತ್ಯಂತ ನಿಧಾನವಾಗಿ, ಸ್ಥಿರವಾಗಿ ಮತ್ತು ದೀರ್ಘಕಾಲದವರೆಗೆ ಹಿಡಿದಿಟ್ಟುಕೊಳ್ಳಲಾಗುತ್ತದೆ. ಪ್ರತಿಯೊಂದು ಆಸನದ ಜೊತೆಗೆ ಉಸಿರಾಟದ (ಪ್ರಾಣಾಯಾಮ) ಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ಇದು ಕೇವಲ ಕಸರತ್ತಲ್ಲ, ಇದೊಂದು ತಪಸ್ಸು.

ನೀವು ಯೋಗದ ಜಗತ್ತಿಗೆ ಹೊಸಬರಾಗಿದ್ದು, ಶಾರ್ಟ್‌ಕಟ್ ಇಲ್ಲದೆ ಯೋಗವನ್ನು ಅದರ ಮೂಲ ಮತ್ತು ಶಾಸ್ತ್ರೀಯ ರೂಪದಲ್ಲಿ ಕಲಿಯಲು ಬಯಸಿದರೆ ಹಠ ಯೋಗವೇ ಅತ್ಯುತ್ತಮ ಆರಂಭ. ಇದು ದೇಹಕ್ಕೆ ದೃಢತೆ ಮತ್ತು ಮನಸ್ಸಿಗೆ ಅಪ್ರತಿಮ ಶಾಂತತೆಯನ್ನು ನೀಡುತ್ತದೆ.

ಅರಮನೆ ಮತ್ತು ಗುಹೆಗಳಲ್ಲಿದ್ದ ಹಠ ಯೋಗವನ್ನು 20 ನೇ ಶತಮಾನದಲ್ಲಿ ಇಡೀ ಜಗತ್ತಿಗೆ ತಲುಪಿಸಿದವರು ಟಿ. ಕೃಷ್ಣಮಾಚಾರ್ಯ (ಆಧುನಿಕ ಯೋಗದ ಪಿತಾಮಹ). ಅವರ ಶಿಷ್ಯರಾದ ಬಿ. ಕೆ. ಎಸ್. ಅಯ್ಯಂಗಾರ್, ಪಟ್ಟಾಭಿ ಜೋಯಿಸ್ ಮತ್ತು ಇಂದಿರಾದೇವಿ ಅವರು ಇಂದು ಜಗತ್ತಿನಾದ್ಯಂತ ನಾವು ಕಾಣುವ ವಿವಿಧ ಯೋಗ ಶೈಲಿಗಳಿಗೆ (ಅಷ್ಟಾಂಗ, ವಿನಿಯಾಸ, ಅಯ್ಯಂಗಾರ್ ಯೋಗ) ಹಠ ಯೋಗವನ್ನೇ ಮೂಲ ಬುನಾದಿಯನ್ನಾಗಿ ಮಾಡಿದರು.

2. ಹಾಟ್ ಯೋಗ **(Hot Yoga)**

"ಬೆವರಿನ ಮಳೆಯಲ್ಲಿ ಆರೋಗ್ಯದ ಹುಡುಕಾಟ; ಫಿಟ್‌ನೆಸ್ ಪ್ರಿಯರ ಹೊಸ ಕ್ರೇಜ್!"

ಇದು ಸಾಂಪ್ರದಾಯಿಕ ಭಾರತೀಯ ಯೋಗಕ್ಕೆ ಪಾಶ್ಚಾತ್ಯ ಜಗತ್ತು ನೀಡಿದ ಅತ್ಯಂತ ಆಧುನಿಕ ಮತ್ತು ರೋಮಾಂಚಕ ಟ್ವಿಸ್ಟ್!ಹಾಟ್ ಯೋಗದ ಮೂಲ ಶೈಲಿಯನ್ನು **(Bikram Yoga)** 1970 ರ ದಶಕದಲ್ಲಿ ಬಿಕ್ರಮ್ ಚೌಧರಿ **(Bikram Choudhury)** ಅವರು ಅಮೆರಿಕಾದಲ್ಲಿ ಪರಿಚಯಿಸಿ, ಜಗತ್ತಿನಾದ್ಯಂತ ಅತ್ಯಂತ ಪ್ರಸಿದ್ಧಗೊಳಿಸಿದರು.

ಹಿನ್ನೆಲೆ ಮತ್ತು ಉದ್ದೇಶ: ಸಾಮಾನ್ಯ ತಾಪಮಾನಕ್ಕಿಂತ ಹೆಚ್ಚಿರುವ, ಅಂದರೆ ಸುಮಾರು 35ಲಿಅ ನಿಂದ 40ಲಿಅ (95ಲಿಈ - 105ಲಿಈ) ತಾಪಮಾನ ಮತ್ತು ಶೇಕಡಾ 40 ರಷ್ಟು ಆರ್ದ್ರತೆ **(Humidity)** ಇರುವ ವಿಶೇಷ ಕೋಣೆಯಲ್ಲಿ ಈ ಯೋಗವನ್ನು ಅಭ್ಯಾಸ ಮಾಡಲಾಗುತ್ತದೆ.

ಸಾಂಪ್ರದಾಯಿಕ ಹಠ ಯೋಗದ ಆಸನಗಳನ್ನೇ ಇಲ್ಲಿ ಅತಿ ಹೆಚ್ಚು ತಾಪಮಾನದಲ್ಲಿ ಮಾಡುವುದರಿಂದ ದೇಹದಿಂದ ವಿಪರೀತ ಬೆವರು ಹೊರಹೋಗುತ್ತದೆ. ಇದು ದೇಹದಲ್ಲಿನ ಕಲ್ಮಶಗಳನ್ನು ಹೊರಹಾಕಲು **(Detoxification),** ಸ್ನಾಯುಗಳ ನಮ್ಯತೆಯನ್ನು **(Flexibility)** ಹೆಚ್ಚಿಸಲು ಮತ್ತು ಬೊಜ್ಜು ಕರಗಿಸಲು ಅತ್ಯಂತ ಸಹಕಾರಿಯಾಗಿದೆ.

ತೂಕ ಇಳಿಸಿಕೊಳ್ಳಲು **(Weight loss)** ಬಯಸುವವರಿಗೆ ಮತ್ತು ದೇಹದಲ್ಲಿರುವ ವಿಷಕಾರಿ ಅಂಶಗಳನ್ನು **(Toxins)** ಬೆವರಿನ ಮೂಲಕ ಹೊರಹಾಕಲು ಬಯಸುವವರಿಗೆ ಇದು ಅತ್ಯಂತ ಜನಪ್ರಿಯ ಪ್ರಕಾರ. ಆದರೆ ನೆನಪಿಡಿ, ಈ ಯೋಗ ಮಾಡುವಾಗ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗದಂತೆ **(Hydration)** ಎಚ್ಚರ ವಹಿಸಬೇಕು!

3 ಸತ್ವ ಯೋಗ **(Sattva Yoga)**

"ಕೇವಲ ದೈಹಿಕವಲ್ಲ, ಇದೊಂದು ಸಮಗ್ರ ಆಧ್ಯಾತ್ಮಿಕ ಕ್ರಾಂತಿ!" ಭಾರತದ ಯೋಗ ರಾಜಧಾನಿ ಎನಿಸಿಕೊಂಡಿರುವ ಋಷಿಕೇಶದ ಹಿಮಾಲಯದ ತಪ್ಪಲಿನಲ್ಲಿ ಜನ್ಮತಾಳಿದ ಸಮಗ್ರ **(Holistic)** ಯೋಗ ಪ್ರಕಾರ ಇದು. ಇಂದಿನ ಆಧುನಿಕ ಜಗತ್ತು ಯೋಗವನ್ನು ಕೇವಲ ದೈಹಿಕ ಫಿಟ್‌ನೆಸ್‌ಗೆ ಸೀಮಿತಗೊಳಿಸುತ್ತಿರುವುದಕ್ಕೆ ಉತ್ತರವಾಗಿ ಸತ್ವ ಯೋಗ ನಿಲ್ಲುತ್ತದೆ. ಇದು ಮನುಷ್ಯನ ಆತ್ಮ ಮತ್ತು ಮನಸ್ಸಿನ ವಿಕಾಸಕ್ಕೆ ಒತ್ತು ನೀಡುತ್ತದೆ.

ಸತ್ವ ಯೋಗವನ್ನು ಹಿಮಾಲಯದ ಹೃಷಿಕೇಶದ ಯೋಗ ಗುರುಗಳಾದ ಆನಂದ್ ಮೆಹ್ರೋತ್ರಾ **(Anand Mehrotra)** ಅವರು 2000 ರ ದಶಕದ ಆರಂಭದಲ್ಲಿ ರೂಪಿಸಿ, ಜಗತ್ತಿನಾದ್ಯಂತ ಪರಿಚಯಿಸಿದರು.

ಇದು ಕೇವಲ ದೈಹಿಕ ಆಸನಗಳಿಗೆ ಸೀಮಿತವಾಗಿರದೇ, ಮನುಷ್ಯನ ಸಮಗ್ರ ವಿಕಾಸಕ್ಕಾಗಿ ರೂಪಿಸಲಾದ ಒಂದು ಪರಿಪೂರ್ಣ ಆಧುನಿಕ ಯೋಗ ಪದ್ಧತಿಯಾಗಿದೆ. 'ಸತ್ವ' ಎಂದರೆ ಶುದ್ಧತೆ, ಸತ್ಯ ಮತ್ತು ಸಮತೋಲನ. ಈ ಶೈಲಿಯಲ್ಲಿ ಸಾಂಪ್ರದಾಯಿಕ ಹಠ ಯೋಗದ ಆಸನಗಳು, ಪ್ರಾಣಾಯಾಮ, ಕುಂಡಲಿನಿ ಜಾಗೃತಿಯ ಕ್ರಿಯೆಗಳು, ಕೀರ್ತನೆ **(Chanting),** ಕುಂಡಲಿನಿ ಯೋಗದ ಕ್ರಿಯೆಗಳು **(Kriyas),** ಮಂತ್ರ ಪಠಣ, ಪ್ರಾಣಾಯಾಮ, ಆಳವಾದ ಧ್ಯಾನ ಮತ್ತು ಲೈಫ್ ವೆಲ್ನೆಸ್ ತತ್ವಗಳು ಮತ್ತು ಆಳವಾದ ಹಿಮಾಲಯನ್ ಧ್ಯಾನ ವಿಧಾನಗಳನ್ನು ಒಂದೇ ಸೂರಿನಡಿ ಸಮ್ಮಿಲನಗೊಳಿಸಲಾಗಿದೆ. ವ್ಯಕ್ತಿಯಲ್ಲಿನ ಮಾನಸಿಕ ಗೊಂದಲಗಳನ್ನು ನಿವಾರಿಸಿ, ಆಂತರಿಕ ಶಾಂತಿ ಮತ್ತು ಉನ್ನತ ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಜಗತ್ತಿನ ಎಲ್ಲಾ ಭೌತಿಕ ಸುಖಗಳಿದ್ದರೂ ಮನಸ್ಸಿನಲ್ಲಿ ಏನೋ ಒಂದು ರೀತಿಯ ಶೂನ್ಯತೆ, ಗೊಂದಲ ಅಥವಾ ಅಶಾಂತಿ ಅನುಭವಿಸುತ್ತಿರುವವರಿಗೆ ಇದು ಹೇಳಿಮಾಡಿಸಿದಂತಿದೆ. ತಮಗೆ ತಾವೇ ಕನೆಕ್ಟ್ ಆಗಲು ಮತ್ತು ಜೀವನದ ಉನ್ನತ ಪ್ರಜ್ಞೆಯನ್ನು ತಲುಪಲು ಬಯಸುವ ಆಧ್ಯಾತ್ಮಿಕ ಆಸಕ್ತರಿಗೆ ಇದು ಅತ್ಯತ್ತಮ ಮಾರ್ಗ.

4. ರಿಸ್ಟೋರೇಟಿವ್ ಯೋಗ ಮತ್ತು ಇತ್ತೀಚಿನ ನವೀನ ಟ್ರೆಂಡ್‌ಗಳು **(Restorative & Novelty Formats)**

ಇಷ್ಟೇ ಅಲ್ಲದೆ, ಪ್ರಸ್ತುತ ಸಮಾಜದಲ್ಲಿ ಜನರ ಆಕರ್ಷಣೆಗಾಗಿ ಮತ್ತು ಒತ್ತಡ ಮುಕ್ತ ಜೀವನಕ್ಕಾಗಿ ಕೆಲವು ವಿಭಿನ್ನ ಆವಿಷ್ಕಾರಗಳು ನಡೆಯುತ್ತಿವೆ:

ರಿಸ್ಟೋರೇಟಿವ್ ಯೋಗ **(Restorative Yoga):** ಇದು ಇಂದಿನ "ಬರ್ನ್‌ಔಟ್" (ಅತಿಯಾದ ಕೆಲಸದ ದಣಿವು) ಸಂಸ್ಕೃತಿಗೆ ಅತ್ಯುತ್ತಮ ಮದ್ದು. ಇಲ್ಲಿ ಮೃದುವಾದ ದಿಂಬುಗಳು ಮತ್ತು ಬ್ಲಾಂಕೆಟ್‌ಗಳ ಮೇಲೆ ದೇಹವನ್ನು ಒರಗಿಸಿ, ಅತ್ಯಂತ ಆರಾಮದಾಯಕ ಸ್ಥಿತಿಯಲ್ಲಿ ಧೀರ್ಘಕಾಲ ಇರಲಾಗುತ್ತದೆ. ಇದು ನರಮಂಡಲವನ್ನು ಶಾಂತಗೊಳಿಸಿ ಆಳವಾದ ವಿಶ್ರಾಂತಿ ನೀಡುತ್ತದೆ.ರಿಸ್ಟೋರೇಟಿವ್ ಯೋಗ ಎಂದು ಇತ್ತೀಚೆಗೆ ಹತ್ತುಹಲವಾರು ವಿಧಾನಗಳು ತಲೆ ಎತ್ತಿವೆ. ಅದರಲ್ಲಿ ಒಂದೆರಡರ ಪರಿಚಯ ಇಲ್ಲಿದೆ.

ಮೇಕೆಗಳೊಂದಿಗೆ ಯೋಗ **(Goat Yoga):** ಹಸಿರು ಹುಲ್ಲುಗಾವಲಿನಲ್ಲಿ ಚಿಕ್ಕ ಮೇಕೆಮರಿಗಳ ನಡುವೆ ಯೋಗ ಮಾಡುವುದು. ಪ್ರಾಣಿಗಳ ಒಡನಾಟದಲ್ಲಿ ಮನಸ್ಸನ್ನು ಹಗುರಗೊಳಿಸುವುದು ಇದರ ಉದ್ದೇಶ.

ಸೌಂಡ್ ಹೀಲಿಂಗ್ ಯೋಗ **(Sound Healing):** ಯೋಗ ಮಾಡುವಾಗ ಟಿಬೆಟಿಯನ್ ಬೌಲ್ಸ್ ಅಥವಾ ಧ್ವನಿ ತರಂಗಗಳ **(Sound vibrations)** ಕಂಪನಗಳನ್ನು ಬಳಸಲಾಗುತ್ತದೆ, ಇದು ಮನಸ್ಸನ್ನು ತಕ್ಷಣವೇ ಧ್ಯಾನದ ಸ್ಥಿತಿಗೆ ಕೊಂಡೊಯ್ಯುತ್ತದೆ.

ಹಠ, ಹಾಟ್ ಮತ್ತು ಸತ್ವ: ನಿಮಗಾಗಿ ಒಂದು ಕಿಡಿಥಿಇ ಗೈಡ್

ನಿಮ್ಮ ಗೊಂದಲವನ್ನು ಸುಲಭವಾಗಿ ಪರಿಹರಿಸಲು ಒಂದು ಸಣ್ಣ ಹೋಲಿಕೆ ಇಲ್ಲಿದೆ?

1. ಹಠ ಯೋಗ **(Hatha Yoga)**

ಮುಖ್ಯ ಉದ್ದೇಶ: ದೇಹ ಮತ್ತು ಮನಸ್ಸಿನ ಸ್ಥಿರತೆ ಹಾಗೂ ಶಿಸ್ತನ್ನು ಕಾಪಾಡಿಕೊಳ್ಳುವುದು ಹಠ ಯೋಗದ ಮುಖ್ಯ ಉದ್ದೇಶವಾಗಿದೆ.

**ವಾತಾವರಣ:** ಇದನ್ನು ಸಾಮಾನ್ಯ ತಾಪಮಾನವಿರುವ ವಾತಾವರಣದಲ್ಲಿ ಅಭ್ಯಾಸ ಮಾಡಲಾಗುತ್ತದೆ.

**ಯಾರಿಗೆ ಬೆಸ್ಟ್?:** ಇದು ಯೋಗಾಭ್ಯಾಸವನ್ನು ಹೊಸದಾಗಿ ಕಲಿಯುತ್ತಿರುವ ಆರಂಭಿಕರಿಗೆ ಮತ್ತು ಸಾಂಪ್ರದಾಯಿಕ ಶೈಲಿಯಲ್ಲಿ ಆಸಕ್ತಿ ಇರುವವರಿಗೆ ಅತ್ಯಂತ ಸೂಕ್ತವಾಗಿದೆ.

2. ಹಾಟ್ ಯೋಗ **(Hot Yoga)**

**ಮುಖ್ಯ ಉದ್ದೇಶ:** ದೇಹದ ತೂಕ ಇಳಿಕೆ ಮತ್ತು ದೇಹಕ್ಕೆ ಶಕ್ತಿಯನ್ನು ತುಂಬುವುದು ಇದರ ಪ್ರಮುಖ ಉದ್ದೇಶವಾಗಿದೆ.

**ವಾತಾವರಣ:** ಇದನ್ನು 35ಲಿಅ ನಿಂದ 40ಲಿಅ ನಷ್ಟು ಹೆಚ್ಚಿನ ತಾಪಮಾನವಿರುವ ಕೋಣೆಯಲ್ಲಿ ಅಭ್ಯಾಸ ಮಾಡಲಾಗುತ್ತದೆ.

**ಯಾರಿಗೆ ಬೆಸ್ಟ್?:** ಇದು ಫಿಟ್‌ನೆಸ್ ಪ್ರೇಮಿಗಳು ಮತ್ತು ಕಠಿಣ ಪರಿಶ್ರಮವನ್ನು ಆಶಿಸುವವರಿಗೆ ಹೆಚ್ಚು ಸೂಕ್ತವಾಗಿದೆ.

**3. ಸತ್ತ್ವ ಯೋಗ (Sattva Yoga)**

ಮುಖ್ಯ ಉದ್ದೇಶ: ಮಾನಸಿಕ ನೆಮ್ಮದಿ ಮತ್ತು ಆತ್ಮಾವಲೋಕನ ಮಾಡಿಕೊಳ್ಳುವುದು ಈ ಯೋಗದ ಮುಖ್ಯ ಉದ್ದೇಶವಾಗಿದೆ.

**ವಾತಾವರಣ:** ಇದನ್ನು ಶಾಂತ ಮತ್ತು ಆಧ್ಯಾತ್ಮಿಕ ಪರಿಸರದಲ್ಲಿ ಅಭ್ಯಾಸ ಮಾಡಲಾಗುತ್ತದೆ.

**ಯಾರಿಗೆ ಬೆಸ್ಟ್?:** ಒತ್ತಡ ಮುಕ್ತ ಜೀವನ ಮತ್ತು ಆಧ್ಯಾತ್ಮಿಕತೆಯನ್ನು ಬಯಸುವವರಿಗೆ ಇದು ಅತ್ಯುತ್ತಮವಾಗಿದೆ.

ಮೇಕೆಗಳ ಜೊತೆ ಮಾಡುವ ಯೋಗ ಸಾಂಪ್ರದಾಯಿಕ ಸಿದ್ಧಾಂತಕ್ಕೆ ವಿಚಿತ್ರವೆನಿಸಬಹುದು. ಆದರೆ ಇದರ ಹಿಂದಿರುವ ಒಂದು ಮೂಲಭೂತ ಸತ್ಯವೇನೆಂದರೆ ? ಇಂದಿನ ಯಾಂತ್ರಿಕ ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನೂ "ಪ್ರಶಾಂತತೆ" ಮತ್ತು "ನೆಮ್ಮದಿ"ಗಾಗಿ ಹಸಿದಿದ್ದಾನೆ. ಆ ನೆಮ್ಮದಿಯನ್ನು ಕಂಡುಕೊಳ್ಳಲು ಜನರು ತಮ್ಮದೇ ಆದ ವಿಭಿನ್ನ ಮತ್ತು ಅಸಾಂಪ್ರದಾಯಿಕ ಬಾಗಿಲುಗಳ ಮೂಲಕ ಯೋಗವನ್ನು ಅಪ್ಪಿಕೊಳ್ಳುತ್ತಿದ್ದಾರೆ. ನಿಮ್ಮ ದೇಹದ ಸಾಮರ್ಥ್ಯ ಮತ್ತು ಅಗತ್ಯಕ್ಕೆ ತಕ್ಕುದಾದ ಸರಿಯಾದ ಯೋಗ ಪ್ರಕಾರವನ್ನು ಆರಿಸಿ, ಆರೋಗ್ಯದ ಕಡೆಗೆ ಹೆಜ್ಜೆ ಇಡಿ. ನಾವು ಮುಂದಿನ ಭಾಗದಲ್ಲಿ ಇಂದಿನ ಡಿಜಿಟಲ್ ಯುಗಕ್ಕೆ ತಕ್ಕ ಹಾಗೆ "ಬ್ರೆತ್‌ವರ್ಕ್ **(Breathwork):** ಪ್ರಾಣಾಯಾಮದ ಆಧುನಿಕ ಮರುಪ್ಯಾಕೇಜಿಂಗ್!" ಎಂಬ ಕುತೂಹಲಕಾರಿ ವಿಷಯದ ಬಗ್ಗೆ ಚರ್ಚಿಸೋಣ. ಕೇವಲ 20-30 ನಿಮಿಷಗಳ ಉಸಿರಾಟದ ಕ್ರಿಯೆ ಇಂದು ಜಾಗತಿಕವಾಗಿ ಕೋಟ್ಯಂತರ ರೂಪಾಯಿಗಳ ಸ್ವತಂತ್ರ ಬಿಸಿನೆಸ್ ಆಗಿದ್ದು ಹೇಗೆ? ಅದರ ಹಿಂದಿನ ಅಸಲಿ ವಿಜ್ಞಾನವೇನು? ತಿಳಿಯಲು ತಪ್ಪದೇ ಮುಂದಿನ ಲೇಖನ ಓದಿ!ವಂದನೆಗಳು.



# ಮದುವೆಯ ಮೂರು ಗಂಟು ಏಳೇಳು ಜನ್ಮದ ಪ್ರೀತಿಯ ನಂಟು.



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ತಾಳಿಯು ಮದುವೆಯ ಬಂಧನ ಬೆಸೆಯುವ ಮದುಮಗನು ಮದುಮಗಳಿಗೆ ಕಟ್ಟುವ ಪವಿತ್ರ ಕಂಠಹಾರ. ಹೆಣ್ಣಿನ ವೈವಾಹಿಕ ಸ್ಥಿತಿಯ ಸಂಕೇತವಾಗಿ ಮಹಿಳೆ ಮಂಗಳಸೂತ್ರ ಧರಿಸುತ್ತಾಳೆ. ತಾಳಿಯನ್ನು ಮಾಂಗಲ್ಯ ಅದರ ಸರವನ್ನು ಮಂಗಳಸೂತ್ರವೆಂದು ಕರೆಯುತ್ತಾರೆ. ಮಂಗಳಸೂತ್ರ ಸಂಸ್ಕೃತದಲ್ಲಿ ಮಂಗಳ ಎಂದರೆ ಪವಿತ್ರ ಶುಭ ಮತ್ತು ಸೂತ್ರವೆಂದರೆ ಧಾರ ವೆಂದರ್ಥ.

ಇದರ ಮೂಲವು 6 ನೇಯ ಶತಮಾನದ ಮೊದಲನೇಯದು. ಇತರ ಪುರುಷರ ದುಷ್ಟಶಕ್ತಿಗಳ ರಕ್ಷಣೆಗಾಗಿ ವಧುವಿಗೆ ಹಳದೀ ಅಂದರೆ ಅರಿಷಿಣದ ದಾರ ಕಟ್ಟಲಾಗುತ್ತಿತ್ತು. ಮಂಗಳಸೂತ್ರ ಧರಿಸುವದು ಭಾರತ,ಶ್ರೀಲಂಕಾ,ನೇಪಾಳದಲ್ಲಿ. ಮನುಸ್ಮೃತಿ ಸೂಚಿಸಿದಂತೆ ಈ ಅಭ್ಯಾಸವು ವಿವಾಹ ಸಮಾರಂಭದ ಅವಿಭಾಜ್ಯ ಅಂಗವಾಗಿದೆ.

ಇತರ ಹೆಸರುಗಳು- ತಾಳಿ,ಕಂಠಿ, ಕರಿಮಣಿ,ಮಂಗಳ ಸೂತ್ರ, ಮಾಂಗಲ್ಯ,ತಾಳೀಸರವೆಂಬ ಹೆಸರುಗಳಿವೆ.

ಮಹತ್ವ- ಮಂಗಳಸೂತ್ರದ ಮಹತ್ವವನ್ನು ಶಂಕರಾಚಾರ್ಯರು ತಮ್ಮ ಪ್ರಸಿದ್ಧ ರಚಿತ ಸೌಂದರ್ಯಲಹರೀ,ಪುನಃ ಪುನರಾವರ್ತಿಸಿರುವದು ಕಂಡುಬರುತ್ತದೆ.ಹಿಂದೂ ಸಂಪ್ರದಾಯದ ಪ್ರಕಾರ ಗಂಡನ ದೀರ್ಘಾಯುಷ್ಯಕ್ಕಾಗಿ ಮಂಗಳಸೂತ್ರ ಧರಿಸಲಾಗುತ್ತದೆ. ಧಾರ್ಮಿಕಪದ್ಧತಿಗಳು ಸಾಮಾಜಿಕ ನಿರೀಕ್ಷೆಗಳಿಂದ ಹೇಳಲ್ಪಟ್ಟಂತೆ ವಿವಾಹಿತ ಮಹಿಳೆಯರು ತಮ್ಮ ಜೀವನದುದ್ದಕ್ಕೂ ಮಂಗಳಸೂತ್ರ ಧರಿಸಬೇಕು.ಏಕೆಂದರೆ ಈ ಅಭ್ಯಾಸವು ತನ್ನ ಗಂಡನ ಯೋಗಕ್ಷೇಮವನ್ನು ಹೆಚ್ಚಿಸುತ್ತದೆ ಎಂದು ನಂಬಲಾಗಿದೆ.ವಿವಾಹಿತ ಸ್ತ್ರೀ ಮೇಲೆ ಕೆಟ್ಟದೃಷ್ಟಿ ಬೀಳಬಾರದೆಂದು ಮಂಗಳಸೂತ್ರದಲ್ಲಿ ಕರಿಮಣಿಗಳು ಇರಬೇಕೆಂಬ ನಂಬಿಕೆಯಿದೆ.ಕಪ್ಪು ಮಣಿಗಳಿಗೆ ಋಣಾತ್ಮಕ ಶಕ್ತಿ ಕ್ಷೇತ್ರವನ್ನೆಲ್ಲ ಹೀರಿಕೊಂಡು ಅದು ವಧು ಮತ್ತು ಅವಳ ಕುಟುಂಬವನ್ನು ಅಗಲದಂತೆ ಮಾಡುವ ಗುಣಹೊಂದರಿತ್ತದಂತೆ.

ಕರಿಮಣಿಯನ್ನು ಒಂದೊಂದಾಗಿ ಪೋಣಿಸಿದಾಗ ಅದೊಂದು ಸುಂದರ ಸರಮಾಲೆಯಾಗುವದನ್ನು ಗಂಡಿನ ಕುಟುಂಬದ ಸೂತ್ರದೊಂದಿಗೆ ನವವಿವಾಹಿತ ಹೆಣ್ಣು ಅಷ್ಟೇ ಸುಲಲಿತವಾಗಿ ಹೊಂದಿಕೊಳ್ಳುತ್ತಾಳೆ. ಇದರ ಮುಖ್ಯ ಉಪಯುಕ್ತತೆ ಹಾಲುಣಿಸುವ ತಾಯಿಯಲ್ಲಿ ಎದೆಹಾಲಿನ ಉಷ್ಣತೆಹೀರಿಕೊಂಡು ಎದೆಹಾಲು ಕೆಡದಂತೆ ಶಿಶುವಿಗೆ ಉಣಲು ಅನುಕೂಲವಾದ ಸಮುಷ್ಣತೆಯಲ್ಲಿರಲು ಸಹಾಯ ಮಾಡುತ್ತದೆ. ಮಂಗಳಸೂತ್ರ ಅಥವಾ ತಾಳಿಯಲ್ಲಿ ಪ್ರಾದೇಶಿಕವಾಗಿ,ಪಂಥಗಳನುಗುಣವಾಗಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ.

## ಮಾಂಗಲ್ಯದ ಮಹತ್ವ



ಮಾಂಗಲ್ಯಕ್ಕಿರುವ ಮಹತ್ವ ಸಂಪ್ರದಾಯವನ್ನು ಎತ್ತಿಹಿಡಿಯುವ ಗೌರವಾರ್ಹವಾಗುವಂಥಹ ಮಂಗಳಕರ ಆಭರಣ ಧರಿಸುವದರಿಂದ ನಾರಿಯು ಪೂಜ್ಯನೀಯಳೆನಿಸುತ್ತಾಳೆ.

ಮೂರುಗಂಟಿನ ನಂಟು- ಮಾಂಗಲ್ಯಧಾರಣೆ ಸಮಯದಲ್ಲಿ ಮಾಂಗಲ್ಯಧಾರಕ್ಕೆ ಮೂರುಗಂಟು ಹಾಕಲಾಗುತ್ತದೆ. ಜೋಡಿಯಾಗಿ,ಜೊತೆಯಾಗಿ ಹೆಣ್ಣುಗಂಡು ಬಾಳಬೇಕೆಂದು ಹಿರಿಯರು ಆಶೋರ್ವದಿಸುತ್ತಾರೆ. ಗಂಡು ಹೆಣ್ಣಿಗೆ ಕಟ್ಟುವ ಮೂರು ಗಂಟು ವಿಶೇಷ ಅರ್ಥ ಹೊಂದಿದೆ.

ಧರ್ಮೇಚ- ಅಂದರೆ ಧರ್ಮದೊಂದಿಗೆ ನಾನು ನನ್ನ ಹೆಂಡತಿಯೊಂದಿಗೆ ನಡೆಯುತ್ತೇನೆ.

ಅರ್ಥೇಚ- ನಾನು ನನ್ನ ಧನವನ್ನು ಅವಳೊಟ್ಟಿಗೆ ಅನುಭವಿಸುತ್ತೇನೆ.

ಕಾಮೇಚ- ನನ್ನ ಕೋರಿಕೆಗಳನ್ನು ಅವಳೊಂದಿಗೆ ತೀರಿಸಿಕೊಳ್ಳುತ್ತೇನೆ.ಈ ರೀತಿಯಾಗಿ ಮೂರು ಗಂಟಿನ ಮೂಲಕ ಬಾಳನಂಟನ್ನು ಬೆಸೆಯುವ ಮೂಲಕ ಹೊಸ ಜೀವನಕ್ಕೆ ಕಾಲಿಡುತ್ತಾರೆ.ಇದೊಂದು ಪವಿತ್ರ ಬಂಧನ.

ಮದುವೆ ಸಮಯದಲ್ಲಿ ತಾಳಿ ಕಟ್ಟುವ ಸಂಪ್ರದಾಯ ಬಹಳ ವಿಶೇಷ. ತಾಳಿ ಕಟ್ಟುವ ಮುನ್ನ ಅದನ್ನು ಐದು ಜನ ಮುತ್ತೈದೆಯರು ಮುಟ್ಟಿ ಹರಸುತ್ತಾರೆ.ಮದುಮಗಳು ತಾಳಿಕಟ್ಟಿಸಿಕೊಂಡು ನೂರ್ಕಾಲ ಸುಖವಾಗಿ ಬಾಳಲಿ . ನೆಮ್ಮದಿಯಿಂದ ಸಂಸಾರ ನಡೆಸಲಿ. ಹಲವು ಮಕ್ಕಳ ತಾಯಿಯಾಗಿ ಯಶಸ್ವಿ ಗೃಹಿಣಿಯಾಗಿ ಜೀವನ ನಡೆಸಲಿ.ಎಂಬ ಹಾರೈಕೆಮುತ್ತೈದೆಯರದಾಗಿರುತ್ತದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,